ಕಲ್ಯಾಣ ಕಿರಣ

ಸಂಪುಟ ೭
ಸಂಚಿಕೆ ೪
ಆಗಸ್ಟ್ ೧೯೮೧
ಬಸವ ಶಕೆ ೮೭೫
ಬೆಲೆ : ೧-೫೦



ಕಲ್ಯಾಣ ಕಿರಣ

ಮಾಸ ಪತ್ರಿಕೆ

ವಾರ್ಷಿಕ ಚಂದಾ ರೂ. ೧೬ ಆಜೀವ ಸದಸ್ಯತ್ವ ೧೫೧ ರೂ

ಬಿಡಿ ಪ್ರತಿ ೧-೫೦ ರೂ.

ಕಿರಣಗನ್ನಡಿ

ಮುಖಪುಟ: ಮಹರ್ಷಿ ಶ್ರೀ ಅರವಿಂದರು

"ಬಾ ಬಾ ಬಾರೆಲೆ ಶಿವನೆ" ನರ್ತಿಸುವ

ಹಿಂಬದಿಯ ಹೊದ್ದಿಕೆ: ಕುಮಾರಿ ಅಪ್ಸರಾ ಡಾ॥ ಶಿವಮೂರ್ತಿ, ನ್ಯೂಯಾರ್ಕ್

ಕಲ್ಯಾಣ ಕಿರಣ

ಸಂಪುಟ ೭] ಆಗಸ್ಟ್ 1981 [ಸಂಚಿಕೆ ೪

ನಾಡಮಾತೆಗೆ

ನುಡಿ ನೈವೇದ್ಯ


ಹೇ ತಾಯಿ ಭಾರತಿ,
ಹರಿಸು ನಿನ್ನ ಕರುಣೆಯ, ಉರಿಸು ದೇಶಭಕ್ತಿಯ
ಶೌರ್ಯ ವೀರ್ಯ ಕಾರ್ಯ ಕ್ಷಮತೆ ತುಂಬು ಎಮ್ಮ ಹೃದಯಕೆ ॥ಪ॥

ಹೃದಯ ಗುಡಿಯ ಪೀಠದಲಿ ನೆಲೆಗೊಳಿಸು ಶ್ರದ್ಧೆಯ
ನಾಡಿಗಾಗಿ ದುಡಿವ ಮಡಿವ ತ್ಯಾಗಭಾವ ತುಂಬುತಾ ||
ಜಾತಿ ಮತ ಪಂಥಗಳ ಕೀಳುಭಾವ ಅಳಿಸುತಾ
ಭಿನ್ನ ಭೇದ ಮರೆತು ಬಾಳ್ವ ಪ್ರೇಮಭಾವ ಬೆಳೆಸುತಾ ||೧||

ನಿನ್ನ ನೆಲದ ಅನ್ನವುಂಡು, ಮಡಿಲ ತೊಡೆಯಲಾಡಿ ಬೆಳೆದು
ದ್ರೋಹವನ್ನು ಬಗೆಯದಂಥ ದೇಶನಿಷ್ಠೆ ಕಲಿಸುತಾ।
ಎನ್ನ ಬಾಳ ಕಣಕಣವು ನಿನ್ನ ಪಾದಕರ್ಪಣ
ಎನ್ನ ಚೆನ್ನ ತನುಮನವು ನಾಡಗುಡಿಗೆ ತರ್ಪಣ ||೨||

ಕರ್ಮ ದೀಕ್ಷೆ ನೀಡು ತಾಯೆ ಸತ್ಯ ಕವಚ ತೊಡಿಸು ನೀ
ಧರ್ಮವಂತರಾಗಿ ಬಾಳ್ವ ಒಲವ ಛಲವ ಕರುಣಿಸು ।
ಶಾಂತಿಸ್ನೇಹ ಪ್ರೇಮಸಮತೆ ಅಂಗವಿಸಿ ಬಾಳ್ವೆವಾವು
ನಿನ್ನ ಕೀರ್ತಿ ಪ್ರಣತೆಯುರಿಗೆ ಬಾಳ ತೈಲ ಎರೆವೆವು ॥೩॥

-ಜಗದ್ಗುರು ಮಾತೆ ಮಹಾದೇವಿ



—ಜಗದ್ಗುರು ಮಾತೆ ಮಹಾದೇವಿ

401ರಲ್ಲಿ ಇರುವವರು ಯಾರು? ಎಂಬ ಕುತೂಹಲ ಗರಿಗೆದರಿ ನಿಂತಿರಬಹುದು, ಕಸ್ತೂರಿ ಕರ್ನಾಟಕದ ಮಹಾಜನತೆಯ ಹೃದಯದಲ್ಲಿ ಬಹುಶಃ ಶಾಸಕರ ಭವನದ ದೂರವಾಣಿ ವಿನಿಮಯ ಕೇಂದ್ರದವರಿಗೆ ಫೋನಿನಲ್ಲಿ ಉತ್ತರ ಹೇಳಿ ಹೇಳಿ ಸಾಕಾಗಿರಬಹುದು. ಪತ್ರಿಕಾ ವರದಿಗಾರರು ಬಿಸಿ ಬಿಸಿ ಸುದ್ದಿ ವಿವರಗಳಿಗಾಗಿ ಮೂಲೆ ಮೂಲೆಗಳನ್ನು ಸಂದುಗೊಂದುಗಳನ್ನು ಅರಸುತ್ತಿರಬಹುದು. ಶಾಸಕ ಬಸವರಾಜ ಹೊರಟ್ಟಿಯವರು 'ತಮಗೆ ಕೊಟ್ಟಿರುವ ಕೋಣೆಯಿಂದ ಬಿಡುಗಡೆ ಮಾಡಿ ಬೇರೊಂದು ಕೋಣೆಯನ್ನು ಶಾಸಕರ ಭವನದಲ್ಲಿ ಕೊಡಬೇಕೆಂದು ಇಲ್ಲವೇ ಬೇರಾವ ಲಾಡ್ಜಿಂಗಿನಲ್ಲಾದರೂ ವ್ಯವಸ್ಥೆ ಮಾಡಬೇಕೆಂದು ವಿಧಾನ ಪರಿಷತ್ತಿನಲ್ಲಿ ಶ್ರೀಮತಿ ಬಸವರಾಜೇಶ್ವರಿಯವರನ್ನು ಕೇಳಿಕೊಂಡಿದ್ದಾರೆ. ಕಾರಣವಿಷ್ಟೆ, ಶಾಸಕರ ಭವನದ 401 ನೇ ಸಂಖ್ಯೆಯ ಕೋಣೆಯಲ್ಲಿ ರಾತ್ರಿಯೆಲ್ಲ ಕುಡಿತದ ಗಲಾಟೆ, ಇಸ್ಪೀಟಿನ ಜೂಜಾಟ, ಸಾರ್ವಜನಿಕವಾಗಿ ಹೇಳಲಾರದಷ್ಟು ಅಪಮಾನಕರ ಅಸಹ್ಯ ಕೆಲಸಗಳು ನಡೆಯುತ್ತಿವೆ ಎಂದು ದೂರಿದ್ದಾರೆ. ಈ ಸುದ್ದಿ ಹಲವಾರು ಪತ್ರಿಕೆಗಳವರಿಗೆ ಕುತೂಹಲಕರ ಆಹಾರವನ್ನು ಒದಗಿಸಬಹುದು, ಲೇಖನಿಗೆ ಕೆಲಸ ಒದಗಿಸಬಹುದು.

ಆದರೆ ದೇಶದ ಭವಿಷ್ಯತ್ತನ್ನು ಕುರಿತು ಚಿಂತಿಸುವವನಿಗೆ ಈ ಸುದ್ದಿ ತಮಾಷೆಯನ್ನು ಉಂಟುಮಾಡದು; ಅಂಥ ವ್ಯಕ್ತಿಯನ್ನು ಅವಹೇಳನ ಮಾಡಿ ಬರೆಯಲು ಪ್ರೇರಣೆಯನ್ನು ನೀಡದು. ನಾವೆತ್ತ ಸಾಗಿದ್ದೇವೆ? ಜನಾಂಗ ನಿರ್ಮಾಣಕಾರ್ಯ

ಎಂಥ ವಿಲಕ್ಷಣ ರೀತಿಯಲ್ಲಿ ಆಗುತ್ತಿದೆ? ಈ ನಾಡಿನ ಭವಿಷ್ಯ ಏನು ? ಎಂದು ವ್ಯಾಕುಲತೆಯ ಮೋಡವನ್ನು ತಲೆಗೆ ಕವುಚಿ ಒಂದು ಬಗೆಯ Mental depression ಮಾನಸಿಕ ಮಂಕುತನವನ್ನು ಉಂಟುಮಾಡುವುದು. "ಕೊಟ್ಟವನು ಕೋಡಂಗಿ, ಇಸಕೊಂಡವನು ಈರಭದ್ರ" ಎಂಬ ಅಚ್ಚ ಕನ್ನಡದ ಗಾದೆ ಈ ಪರಿಸ್ಥಿತಿಯನ್ನು ಚೆನ್ನಾಗಿ ವಿವರಿಸಬಲ್ಲದು. ಈ ಪ್ರಜಾಪ್ರಭುತ್ವದಲ್ಲಿ ಪ್ರಜೆಯೇ ಪ್ರಭು. ಯಾವ ಪ್ರಜೆ? ನೋಟು ಇಸಿದುಕೊಂಡು ಓಟು ಹಾಕುವವನು. ಹೆಂಡವನ್ನು ಕುಡಿದು ತನ್ನೊಡೆಯನನ್ನು ಆರಿಸುವವನು. ದಿನದ ಕೂಲಿ ಪಡೆದು ಮತ ಚಲಾಯಿಸುವವನು. ಇವನೇ ಪ್ರಭು! ಈ ಪ್ರಭು ಮತ್ತೊಬ್ಬ ಪ್ರಭುವನ್ನು ಆರಿಸುತ್ತಾನೆ. ಯಾವನು ಹೆಚ್ಚು ಹೆಂಡ ಕುಡಿಸಬಲ್ಲನೋ, ಹಣ ಹಂಚಬಲ್ಲನೋ, ಕೂಲಿಕೊಡಬಲ್ಲನೋ ಆ ಪ್ರಭುವನ್ನು. ಒಂದು ದಿನದ ಕೂಲಿ ಪಡೆದು, ಒಂದು ಹೊತ್ತು ಕಳ್ಳು ಕುಡಿದು ಛೋಟಾ ಪ್ರಭು ದೇಶದ ಭವಿಷ್ಯ ನಿರ್ಧರಿಸುವ ಬಡಾ ಪ್ರಭುವನ್ನು ಆರಿಸಿ, ಅಧಿಕಾರ ಸೂತ್ರ ಅವನ ಕೈಯಲ್ಲಿ ಕೊಟ್ಟು ಕೋಡಂಗಿಯಾಗುತ್ತಾನೆ. ಮತ ಪಡೆದು ಬಡಾ ಪ್ರಭು ಈರಭದ್ರನಾಗಿ ಸೆಟೆದು ನಿಲ್ಲುತ್ತಾನೆ. ತಾನು ಕೊಡುವ ಓಟಿನ ಬೆಲೆ ಕೊಟ್ಟವಗೆ ಗೊತ್ತಿಲ್ಲ, ಆ ವೋಟು ಕೊಟ್ಟ ಹೊಣೆಗಾರಿಕೆಯ ಬೆಲೆ ಪಡೆದವಗೆ ಗೊತ್ತಾಗದು. ಅವನಿಗೆ ಗೊತ್ತಿರುವುದೊಂದೇ; ಹಣವನ್ನು ಎಷ್ಟು ಖರ್ಚು ಮಾಡಿದೆ. ಅದನ್ನು ಮರಳಿ ತನಗಿರುವ ಸಮಯಾವಕಾಶದಲ್ಲಿ ಸಂಪಾದಿಸುವುದೆಂತು ? ಪ್ರತಿಯೊಂದು ಉದ್ಯೋಗವೂ ಈಗ ಇದೇ ಗುರಿಯನ್ನು ಹೊತ್ತಿರುವುದರಿಂದ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ. ಒಂದು, ಒಂದೂವರೆ, ಎರಡು ಲಕ್ಷ ಪ್ರವೇಶ ನಿಧಿ ಕೊಟ್ಟು ವೈದ್ಯನಾಗುವ ತರುಣ ಹಣಕ್ಕಲ್ಲದೆ ಪ್ರಾಣಕ್ಕೆ ಬೆಲೆ ಕೊಟ್ಟಾನೆಯೆ ? ಲಕ್ಷಾಂತರ ರೂಪಾಯಿ ಸುರಿದು ಆರಿಸಿ ಬರುವ ರಾಜಕೀಯ ನೇತಾರ ಹಣಕ್ಕಲ್ಲದೇ ದೇಶ ಸೇವೆಗೆ ಗಮನ ಕೊಡಲು ಸಾಧ್ಯವೆ? ಕಳ್ಳಭಟ್ಟಿ ಪ್ರಕರಣದಂತಹ ಸಾಮೂಹಿಕ ಹತ್ಯೆಯ ಪ್ರಸಂಗ ಬೇರಾವುದಾದರೂ ರಾಷ್ಟ್ರದಲ್ಲಿ ನಡೆದಿದ್ದರೆ, ಎಂತಹ ಗಂಭೀರ ಪ್ರಸಂಗ ಸರ್ಕಾರಕ್ಕೆ ಎದುರಾಗುತ್ತಿತ್ತು; ಎಂತಹ ಶಿಕ್ಷೆ ಅಪರಾಧಿಗಳಿಗಾಗುತ್ತಿತ್ತು. ರಾಜಕೀಯ ಮುಖಂಡರ ರಕ್ಷಣೆಯಲ್ಲಿ ಎಂತೆಂತಹ ಅಪರಾಧಗಳಿಂದಲೂ ಪಾರಾಗಬಹುದಾದದ್ದು ನಮ್ಮ ದೇಶದಲ್ಲಿ ನಿಜವಿದ್ದರೂ, ರಾಜಕೀಯ ಮುಖಂಡರು ಕನಿಷ್ಟ ಪಕ್ಷದ ನೀತಿಯನ್ನಾದರೂ ಅಳವಡಿಸಿಕೊಳ್ಳಬೇಕು. ಶತ್ರು ರಾಷ್ಟ್ರ ಧಾಳಿ ಮಾಡಿದಾಗ ಒಂದಾಗಿ ಮಾತೃಭೂಮಿಯನ್ನು ರಕ್ಷಿಸುವಲ್ಲಿ, ಕಳ್ಳಭಟ್ಟಿ ಪ್ರಕರಣದಂಥ ದುರಂತದಲ್ಲಿ, ಪಾಕಿಸ್ತಾನ ಅರಬ್ ರಾಷ್ಟ್ರಗಳಂತವುಗಳೊಡನೆ ಗೂಢಚರ್ಯೆ ಮಾಡಿದಾಗ ಮಾತೃಭೂಮಿಯ ಹಿತವನ್ನು, ಮಾನವೀಯ ಹಿತವನ್ನು ಕಡೆಗಣಿಸಬಾರದು.

ಅಮೆರಿಕೆಯಲ್ಲಿ ನಾನಿದ್ದಾಗ ಒಂದು ಪ್ರಸಂಗ ನಡೆಯಿತು. ಓರ್ವ ತರುಣ ದಾರಿಯಲ್ಲಿ ಇರಿತಕ್ಕೆ ಒಳಗಾದ, ರಕ್ತ ಸ್ರಾವದಿಂದ ಎಚ್ಚರ ತಪ್ಪಿದ. ಪಕ್ಕದಲ್ಲಿ ಇದ್ದ ದಾರಿಹೋಕರು ಅಂಬುಲೆನ್ಸ್‌ನವರಿಗೆ ವಿಷಯ ತಿಳಿಸಿ, ಕರೆ ನೀಡಿದರು. ಆಸ್ಪತ್ರೆ ಸಿಬ್ಬಂದಿಯವರು ಯಾವ ಬಗೆಯ ಆಘಾತ ಎಂಬ ವಿವರ ತಿಳಿದುಕೊಳ್ಳದೆ, ಅಂಬುಲೆನ್ಸ್ ತಂದರೂ ಅವನ ವಿಶೇಷ ಚಿಕಿತ್ಸೆಗೆ ಬೇಕಾದ ಉಪಕರಣ ತೆಗೆದುಕೊಂಡು ಬಂದಿರಲಿಲ್ಲ. ಹೀಗಾಗಿ ದಾರಿಯಲ್ಲವ ಸಾವನ್ನಪ್ಪಿದ. ಆದರೆ ಅಂಬುಲೆನ್ಸ್ ಇಲಾಖೆ ಕಮೀಷನರರು ಸಿಬ್ಬಂದಿಯ ಔದಾಸೀನ್ಯಕ್ಕೆ ಸಾರ್ವಜನಿಕ ಕ್ಷಮೆ ಕೋರಿ, ರಾಜಿನಾಮೆ ಕೊಟ್ಟರು. ಎಂತಹ ಸೂಕ್ಷ್ಮದ ಜನ! ಮತ್ತೊಮ್ಮೆ ಓರ್ವ ವೈದ್ಯ, ಓರ್ವ ಪೋಲಿಸ್, ಓರ್ವ ಗೂಂಡಾ ಮತ್ತು ಓರ್ವ ರಾಜಕಾರಿಣಿ ಮಾರಿವಾನ ಎಂಬ ಮತ್ತೇರಿರಿಸುವ ವಸ್ತುವನ್ನು, ಮತ್ತು ಮತ್ತೇರಿಸುವ ಕೆಲವು ಔಷಧಗಳನ್ನು ಯುವಕರಿಗೆ ಹಂಚುತ್ತಿದ್ದ ಪ್ರಕರಣದಲ್ಲಿ ಸಿಕ್ಕಾಗ, ಅವರ ಫೋಟೋ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಎಲ್ಲರೂ ಜಲಜಲ ಬೆವೆತಿದ್ದರು. ಶಿಕ್ಷೆಯ ಭಯ ಮತ್ತು ಸಾಮಾಜಿಕ ಅವಹೇಳನಗಳ ಭಯದಿಂದಾಗಿ ಹಿಂಡಿಹಿಪ್ಪೆಯಾಗಿದ್ದರು. ಅದೇ ಕಳ್ಳಬಟ್ಟಿ ದೊರೆ ಸುಲ್ತಾನನನ್ನು ಬಂಧಿಸಿ ತರುತ್ತಿದ್ದರೆ ಅವನ ಮುಖದ ಮೇಲೆ ಎಂತಹ ಧೈರ್ಯ, ಆತ್ಮ ವಿಶ್ವಾಸ ಈ ದೇಶದಲ್ಲಿ ಏನು ಬೇಕಾದರೂ ಮಾಡಿ ಹಣದ ಬಲದ ಮೇಲೆ, ಜಾತಿಯ ಬಲದ ಮೇಲೆ ಪಾರಾಗಬಹುದು ಎಂಬ ಅದಮ್ಯ ಭರವಸೆಯೋ !


ಮಾತೆತ್ತಿದರೆ ಹಿಂದೂ-ಮುಸ್ಲಿಂ ವೈಷಮ್ಯದ, ಸವರ್ಣೀಯರ ಹರಿಜನರ ಘರ್ಷಣೆಯ ವಿಷಯ ಪ್ರಸ್ತಾಪಿಸಿ ಪಾರಾಗಲು ಹವಣಿಸುವ ಪರಿಪಾಠ ತೀವ್ರವಾಗುತ್ತಿವೆ. ರಾಷ್ಟ್ರೀಯ ನೀತಿಯ ವಿಷಯದಲ್ಲಿ ತಪ್ಪು ಮಾಡಿದವನು ಸವರ್ಣೀಯ ಹಿಂದೂವೇ ಇರಲಿ, ಮುಸ್ಲಿಮನೇ ಇರಲಿ, ಹರಿಜನನೇ ಇರಲಿ, ಸಿಖ್ಖನೇ ಇರಲಿ, ಅವನು ದೇಶದ್ರೋಹಿ, ಧರ್ಮದ್ರೋಹಿ, ದೈವದ್ರೋಹಿ. ಇಲ್ಲಿ ಜಾತಿಯನ್ನು ಮುಂದೆ ಮಾಡಿ ಪಾರಾಗುವ ಹವಣಿಕೆ ಏಕೆ? ತಪ್ಪು ಮಾಡಿದ ಮುಸಲ್ಮಾನನಿಗೆ ಪಾಕಿಸ್ಥಾನದಲ್ಲಾದರೂ ಶಿಕ್ಷೆಯುಂಟು, ಅರಬ್ ದೇಶದಲ್ಲಾದರೂ ಉಂಟು. ಅಂಥ ಪ್ರಸಂಗದಲ್ಲಿ ಜಾತಿ ದೃಷ್ಟಿಯಿಂದ ನೋಡದೆ ನೀತಿ ದೃಷ್ಟಿಯಿಂದ ನೋಡೇಕು.

ಅಂತಃಸಾಕ್ಷಿಗನುಗುಣವಾಗಿ ಬದುಕುವ ಯಾವ ಆಸೆ-ಆಮಿಷ, ಅಧಿಕಾರ ಪ್ರಲೋಭನೆಗೆ ಬಲಿಯಾಗದೆ "ಉರಿಬರಲಿ ಸಿರಿಬರಲಿ ಬೇಕು ಬೇಡೆನ್ನೆನು, ನಾ ನಿಮ್ಮ ಹಾರೆನು ಮಾನವರ ಬೇಡೆನು. ಶಿರಹರಿದು ಅಟ್ಟೆ ನೆಲಕ್ಕೆ ಬಿದ್ದರೂ ಕೂಡಲ ಸಂಗಾ ಶರಣೆನುತಿರ್ದೆನು." ಎಂಬ ಛಲದ ಕೆಲವು ಶಾಸಕರು ಇರುವುದುಂಟು. ತಮ್ಮ ಸ್ವಂತಶಕ್ತಿಯ ಬಲದ ಮೇಲೆ ಆರಿಸಿಬರುವುದುಂಟು. ಆದರೆ ಅಂತಹವರ ಸಂಖ್ಯೆ

ತೀರಾ ಕಡಿಮೆ. ಅನೇಕ ಶಾಸಕರು ತಮ್ಮ ಚುನಾಯಿತ ಕ್ಷೇತ್ರಗಳ ಹಿತವನ್ನು ಗಮನಿಸರು. ಒಮ್ಮೆ ಆರಿಸಿ ಬಂದನಂತರ ರಾಜಧಾನಿಯಲ್ಲಿ ನೆಲೆಯೂರುವುದರೊಡನೆ ಅನ್ಯಾಯ-ಅನಾಚಾರಗಳಲ್ಲಿ ಆಸಕ್ತರಾಗಿ ಶಾಸಕರ ಭವನಗಳಂತಹ ಜವಾಬ್ದಾರಿಯುತ ಸ್ಥಾನಗಳಲ್ಲಿ ಕುಡಿತ, ಜೂಜು ಮುಂತಾದ್ದರಲ್ಲಿ ತಲ್ಲೀನವಾದರೆ ಈ ದೇಶದ ಗತಿ ಏನು? ಸರ್ಕಾರ ಹಾಕುವ ಯೋಜನೆ, ನೀಡುವ ನೆರವುಗಳನ್ನು ಸೂಕ್ತವಾದ ರೀತಿಯಲ್ಲಿ ತನ್ನ ಕ್ಷೇತ್ರಕ್ಕೊದಗಿಸಿ ಅದರ ಅಭಿವೃದ್ಧಿಯನ್ನು ಚಿಂತಿಸದಿದ್ದರೆ ಶಾಸಕ ನಾಗಿ ಆರಿಸಿ ಬಂದು ಪ್ರಯೋಜನವೇನು? ಮಂದಿ ಮನೆಯಲ್ಲಿ ಕೈ ತುಂಬಾ ಊಟಕ್ಕಿಟ್ಟು ಉದಾರಿ ಅನ್ನಿಸಿಕೊಂಡರು" ಎನ್ನುವ ಗಾದೆಯಂತೆ ಸರ್ಕಾರದಿಂದ ದೊರೆಯುವ ಸೌಲಭ್ಯಗಳನ್ನು ತನ್ನ ಪ್ರಭಾವ ಬೀರಿ ತನ್ನ ಕ್ಷೇತ್ರದ ಜನಕ್ಕೆ ಒದಗಿಸಿ ಕೊಟ್ಟರೆ ಎಷ್ಟೋ ಉಪಕಾರವಾದೀತು.

ಇಸ್ಪೇಟು, ಜೂಜು ಆಡಲು, ಕುಡಿಯಲು ಬೆಂಗಳೂರಿನ ತನಕ ಲಕ್ಷಾಂತರ ರೂಪಾಯಿ ವ್ಯಯಿಸಿ ಏಕೆ ಬರಬೇಕು? ವಿಧಾನ ಸಭೆ, ವಿಧಾನ ಪರಿಷತ್ತುಗಳಲ್ಲಿ ಕೆಲವೊಮ್ಮೆ ನಡೆಯುವ ಬೈಗುಳ, ಹೊಡೆದಾಟದ ಮಟ್ಟನೋಡಿದರೆ ರಿಮ್ಯಾಂಡ್ ಹೋಮಿಗೆ ಸೇರಿಸಲ್ಪಡಬೇಕಾದ ಮಕ್ಕಳು ಇಲ್ಲಿಗೇಕೆ ಬಂದರು ಎನ್ನಿಸದಿರದು. ಪತ್ರಿಕಾ ಕರ್ತರೇನೋ ಅಪಹಾಸ್ಯದ ಮಾತುಗಳನ್ನು ಬರೆದು ಗೇಲಿ ಮಾಡಿ ಸುಮ್ಮ ನಾಗಬಹುದು. ಆದರೆ ದೇಶದ ಬಗ್ಗೆ ಅನನ್ಯ ಭಕ್ತಿ, ಶ್ರದ್ಧೆ ಇಟ್ಟುಕೊಂಡು ಮಹತ್ತರವಾದ ಕನಸು ಕಟ್ಟಿಕೊಂಡಂತಹ ಆದರ್ಶವಾದಿಗಳು ಏನು ಮಾಡಬೇಕು? ನಮ್ಮ ದೇಶದ ಮಟ್ಟ, ಜನರ ಮಟ್ಟ ಇಲ್ಲಿಗೆ ಇಳಿಯಿತೇ? ಎಂದು ದುಃಖಿಸುವುದಷ್ಟೇ ಉಳಿದುದು. ಅನೇಕ ರಾಜಕೀಯ ಮುಖಂಡರು ಕಂಠಪೂರ್ತಿ ಕುಡಿದು ವೇದಿಕೆಯನ್ನೇರಿ ಅಸಂಬದ್ಧವಾಗಿ ಮಾತನಾಡುವುದನ್ನು ಕಂಡಾಗ ಮತಿವಂತ ಪ್ರಜ್ಞೆ ನಾಚಿ ತಲೆಬಾಗಿ, ನಿಸ್ಸಹಾಯಕನಾಗಿ ನಿಟ್ಟುಸಿರಿಡದಿರನು. ಸಾರ್ವಜನಿಕ ಸಭೆ ಸಮಾರಂಭಗಳಿಗೆ ಬರುವಾಗ ಕುಡಿದು ಬರಬಾರದು; ನಾಲಿಗೆ ಸಡಿಲಬಿಟ್ಟು ಮಾತ ನಾಡಬಾರದು, ಅನಾವಶ್ಯಕ ಪ್ರಭಾವವನ್ನು ಎಲ್ಲ ಪ್ರಸಂಗಗಳಲ್ಲೂ ಹೇರಬಾರದು; ಈ ಮುಂತಾದ ಕೆಲವಾರು ನೀತಿಸಂಹಿತೆಗಳನ್ನು ರಾಜಕೀಯ ವ್ಯಕ್ತಿಗಳು ಅಳವಡಿಸಿಕೊಳ್ಳ ದಿದ್ದರೆ ನಮ್ಮ ದೇಶದ ಪರಿಸ್ಥಿತಿ ತೀರ ಗಂಭೀರವಾಗುತ್ತದೆ; ನೈತಿಕ ಮೌಲ್ಯಗಳು ಕುಸಿಯುತ್ತವೆ ಎಂಬುದನ್ನು 35ನೆಯ ಸ್ವಾತಂತ್ರ್ಯೋತ್ಸವದ ಸಮಾರಂಭದಲ್ಲಿ ತೀರಾ ವಿಷಾದದಿಂದ ಹೇಳುವುದು ಅನಿವಾರ್ಯವಾಗುತ್ತದೆ.

ಮಾತೆ ಮಹಾದೇವಿ



ಲೇ: ಜಗದ್ಗುರು ಮಾತೆ ಮಹಾದೇವಿ.

ಭಾಗ-೩

ತಾಳ ಮಾನ ಸರಿಸವನರಿಯೆ, ಓಜೆ ಬಜಾವಣೆಯ ಲೆಕ್ಕವನರಿಯೆ, ಅಮೃತ ಗಣ ದೇವಗಣವನರಿಯೆ ಕೂಡಲ ಸಂಗಮದೇವಾ; ನಿನಗೆ ಕೇಡಿಲ್ಲವಾಗಿ ಆನು ಒಲಿ ದಂತೆ ಹಾಡುವೆ; (ಬಸವಣ್ಣನವರ ಕ್ಷಮೆ ಕೇಳಿ) ಎಂಬಂತೆ ನಾನೂ ಮನ ಬಂದಂತೆ ಬರೆಯುತ್ತಿರುವೆ ಈ ಧಾರಾವಾಹಿಯನ್ನು-ಕಿರಣದ ಓದುಗರು, ಸಂಭಾವಿತರು, ಶಾಂತರು, ಸಹೃದಯರು ಆದ್ದರಿಂದ. ಏಕೆಂದರೆ ಸತತವಾಗಿ, ಶಾಂತವಾಗಿ ಕುಳಿತು ಬರೆಯಲು ವ್ಯವಧಾನವಿಲ್ಲದ್ದರಿಂದ, ಬರೆದದ್ದನ್ನೇ ಸಾಹಿತ್ಯವೆಂದುಕೊಂಡು ಒಮ್ಮೆ ಕ್ರೋಢೀಕರಿಸಿ ಪುಸ್ತಕರೂಪದಲ್ಲಿ ಕೊಟ್ಟರಾಯಿತು ಎಂದುಕೊಂಡು ಹಿಂಜರಿಯದೆ ಬರೆಯುತ್ತಿರುವೆ.

ನೀವೀಗ ಹಿಂದಕ್ಕೆ ಬರುವಿರಾ? ಕಲ್ಯಾಣ ಕಿರಣದ ಫೆಬ್ರವರಿ ಸಂಚಿಕೆಯ ನ್ನೊಮ್ಮೆ ತಿರುವಿ ನೋಡಿ. ಡಿಸೆಂಬರ್ 20ಕ್ಕೆ ಕನ್ನಡ ಕೂಟದ ಕಾರ್ಯಕ್ರಮ; ಮರುದಿನ ಡಾ|| ಶಿವಮೂರ್ತಿ ಮತ್ತು ಶ್ರೀಮತಿ ಜಯಾರವರ ಮನೆಯಲ್ಲಿ ವಿಶೇಷ ಸಮಾರಂಭ. ಸಮಾಜದ ಕೆಲಸಕಾರ್ಯಗಳಲ್ಲಿ ದಂಪತಿಗಳು ತುಂಬಾ ಆಸಕ್ತರು. ಹಲವಾರು ಸಂಘ-ಸಂಸ್ಥೆಗಳಲ್ಲಿ ಅವರ ಕಾರ್ಯಚಟುವಟಿಕೆ. ಸಾರ್ವಜನಿಕ ಕ್ಷೇತ್ರದಲ್ಲಿ ಶ್ರೀಮತಿ ಜಯಾರವರದು ಹೆಚ್ಚಿನ ಆಸಕ್ತಿ. ಅದಕ್ಕೆ ಪ್ರೋತ್ಸಾಹ, ಪ್ರೇರಣೆ ಡಾ|| ಶಿವಮೂರ್ತಿಯವರದು. ಚಿತ್ರದುರ್ಗ ಜಿಲ್ಲೆಯವರಾದ ಅವರಿಗೆ ಎರಡೊಂದು ಅಭಿಮಾನ ನಮ್ಮ ಮೇಲೆ; ಪಾಶ್ಚಿಮಾತ್ಯ ರಾಷ್ಟ್ರಕ್ಕೆ ಧರ್ಮಪ್ರಸಾರಕ್ಕೆ ಬಂದವರೆಂಬ ಅಭಿಮಾನ ಒಂದು ಬಗೆಯದಾದರೆ, ನಮ್ಮ ಜಿಲ್ಲೆಯವರು ಎಂಬುದು ಇನ್ನೊಂದು ಬಗೆಯದು. ಅವರಿಗೆ ಎರಡು ಮಕ್ಕಳು, ಮಗ ನಯನ ಮತ್ತು ಮಗಳು ಅಪ್ಸರಾ. ಅವರು ಹೆಸರಿಟ್ಟುದಕ್ಕೆ ಹಾಗಾದಳೋ ಅಥವಾ ಮುನ್ಸೂಚನೆ ಕಂಡು ಅವರು ಹೆಸರಿಟ್ಟರೋ, ಅಪ್ಸರಾ ತುಂಬಾ ಪ್ರತಿಭಾವಂತೆ, ಧೈರ್ಯಶಾಲಿನಿ: ಸಣ್ಣ

ಬಾಲಿಕೆಯಾಗಿದ್ದರೂ, ಕನ್ನಡ ಮಾತಾಡಲು ಬರದಿದ್ದರೂ ಧ್ವನಿಮುದ್ರಿಕೆಗಳ ಹಾಡಿಗೆ ತಕ್ಕಂತೆ ನರ್ತಿಸಬಲ್ಲಳು. ಅವರ ಮನೆಯಲ್ಲಿ ಪೂಜೆ ಇಟ್ಟಾಗ 'ಬಾ ಬಾ ಬಾರೆಲೆ ಶಿವನೆ' ನಾನು ಹಾಡಿದೆ. ಅದನ್ನು ಕೇಳಿ ಹರ್ಷಿಸಿ, ಸ್ಫೂರ್ತಿ ಪಡೆದ ಜಯಾ ಅಪ್ಸರೆಗೆ ಆ ಹಾಡನ್ನು ಕಲಿಸಿ ಮುಂದೆ ಎರಡು ಸಂದರ್ಭಗಳಲ್ಲಿ ನೃತ್ಯಪ್ರದರ್ಶನ ಮಾಡಿಸಿದರು. ಶಿವರಾತ್ರಿಯ ಸಮಾರಂಭ ಮತ್ತು ನಮ್ಮ ಜನ್ಮದಿನೋತ್ಸವದಂದು ಪ್ರದರ್ಶಿತವಾದ ಆ ನೃತ್ಯಗಳು ಬಹಳ ಜನರ ಮನಸ್ಸನ್ನು ತಣಿಸಿದವು. ಶ್ರೀಮತಿ ಜಯಾ ಮತ್ತು ಶ್ರೀ ಶಿವಮೂರ್ತಿಯವರ ಆದರ, ಆತಿಥ್ಯ, ಸಹಾಯ, ಸಹಕಾರ ಅಪೂರ್ವವಾಗಿದ್ದವು. ಉತ್ತಮ ಕರ್ತೃತ್ವ ಶಕ್ತಿ ಇರುವ ಜಯಾ ಚಟುವಟಿಕೆಯ ಬುಗ್ಗೆಯಾಗಿ ನಮ್ಮ ವಿವಿಧ ಕಾರ್ಯಗಳಲ್ಲಿ ಭಾಗಿಯಾಗುತ್ತಿದ್ದರು. ಸ್ವತಂತ್ರ ವಾಹನವಿಲ್ಲದೆ ತಿರುಗಾಡುವುದು ಅಸಂಭವವಿರುವ ಅಲ್ಲಿ ತಮ್ಮ ವಾಹನದಲ್ಲಿ ಕರೆದೊಯ್ಯುತ್ತಿದ್ದರು. ಧರ್ಮಜಾಗೃತಿಯ ಅವಶ್ಯಕತೆ ವಿಪರೀತವಾಗಿರುವ ಈ ಸಂಕ್ರಮಣ ಕಾಲದಲ್ಲಿ ಅಲ್ಲಿ ಒಂದು ಸಂಸ್ಥೆ ಆಗಬೇಕೆಂಬ ಮನೀಷೆ ಅವರದು. ಇಲ್ಲಿಯೇ ಸಾಕಷ್ಟು ದೊಡ್ಡ ಹೊಣೆಗಾರಿಕೆ ಹೊತ್ತು, ಅದನ್ನು ಪೂರೈಸಲು ಇಲ್ಲಿ ದುಡಿಯಬೇಕಾಗಿರುವ ನಾನು, ಇನ್ನಷ್ಟು ಕಾಲದ ನಂತರ ಅಲ್ಲಿ ಮಾಡುವೆನೆಂಬ ಆಶ್ವಾಸನೆ ನೀಡಬೇಕಾಯಿತು. ಹಲವಾರು ಸ್ನೇಹಿತರನ್ನು, ಪರಿಚಯಸ್ಥರನ್ನು ಕರೆದಿದ್ದ ಅವರ ಮನೆಯಲ್ಲಿ ನಡೆದ 21-12-80ರ ಸಮಾರಂಭ ಬಹಳ ಅದ್ದೂರಿಯಾಗಿತ್ತು. ಅರ್ಥವಿವರಣೆ ನೀಡುತ್ತ ಪೂಜೆಯನ್ನು ತೋರಿಸಿದೆ. ಪೂಜಾನಂತರ ಪ್ರವಚನ ; ಸುಮಾರು ಒಂದು ಘಂಟೆಯ ವರೆಗೆ ಚರ್ಚೆ ನಡೆಯಿತು. ಹಿರಿಯರು-ಕಿರಿಯರು, ಸ್ತ್ರೀಯರು-ಪುರುಷರು ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳಲು, ಹೆಚ್ಚಿನ ವಿಷಯಗಳನ್ನು ಅರಿಯಲು ಪುಂಖಾನು ಪುಂಖವಾಗಿ ಪ್ರಶ್ನೆಗಳನ್ನು ಹಾಕಿದರು. ಸಮಂಜಸ ಉತ್ತರ ಕೊಟ್ಟದ್ದಾಯಿತು. ಸಮುದಾಯ ದೊಡ್ಡದಿದ್ದರೂ ಎಲ್ಲರೂ ಬಿಡುವಾಗಿ ಇದ್ದುದರಿಂದ ವಿವರವಾಗಿ ಚರ್ಚಿಸಲು ಅನುವಾಯಿತು. ಕೆಲವರಿಗೆ ಧಾರ್ಮಿಕ ತತ್ವಗಳ ಬಗ್ಗೆಯೇ ಜಿಗುಪ್ಸೆ ; ದೇವರು, ಧರ್ಮ ಏಕೆ ಬೇಕು? ಎಂಬ ಔದಾಸೀನ್ಯ. ಅಂತಹವರ ಪ್ರಶ್ನೆಗಳು ಒಂದು ಬಗೆಯವಾದರೆ ತಮ್ಮ ಧರ್ಮ ಸಂಸ್ಕೃತಿ ಎಲ್ಲ ಬಿಟ್ಟವರಿಗೆ ಯಾವ ಧರ್ಮ ಮತವಾದರೇನಂತೆ ಪಾಲಿಸಿದರಾಯಿತು ಎಂಬ ನಿರಭಿಮಾನ. ಇವರ ಪ್ರಶ್ನೆಗಳು ಮತ್ತೊಂದು ಬಗೆಯವು. ಇನ್ನು ಕೆಲವರು ಅಷ್ಟು ದೂರದಲ್ಲಿದ್ದರೂ ನಂಬಿಗೆ-ಶ್ರದ್ಧೆಯಿಂದ ಆಚರಣೆಯನ್ನು ಸತತವಾಗಿ ನಡೆಸಿಕೊಂಡು ಬರುತ್ತಿರುವರು. ಆದರೆ ತಾವು ಆಚರಿಸುವ ಆಚರಣೆಯ ಮರ್ಮವನ್ನು; ತತ್ವವನ್ನು ಅರಿಯದೆ ಅಂಧಾನುಕರಣೆ ಮಾಡುತ್ತಲಿರುವ ಕಾರಣ ಅದನ್ನು ಅರಿಯಬೇಕೆಂಬ ಕುತೂಹಲ ಇವರಿಗೆ. ತಮ್ಮನ್ನು ತಾವು ನಾಸ್ತಿಕರಿಂದ, ಅಜ್ಞೇಯವಾದಿಗಳಿಂದ ಸಂರಕ್ಷಿಸಿಕೊಳ್ಳಲು ಸನ್ನದ್ಧರಾಗುವ

ಆಕಾಂಕ್ಷೆ ಉಳ್ಳವರು. ಅವರವರ ವಿಚಾರದ ದಿಕ್ಕು ಅರಿತು ನಾನು ಉತ್ತರಿಸುತ್ತಿದ್ದೆ. ಇನ್ನು ಕೆಲವರಿಗಂತೂ ಏನೋ ಧಾರ್ಮಿಕ ಜನರು ಇಲ್ಲಿ ಬರುತ್ತಾರೆ. ನಾವೆಲ್ಲ ಚೆನ್ನಾಗಿ ಓದಿ ಬಂದು ದೊಡ್ಡ ದೊಡ್ಡ ಸ್ಥಾನಗಳಲ್ಲಿರುವವರು ನಮ್ಮ ಮನಸ್ಸಿಗೆ ಒಪ್ಪುವಂತೆ ಇವರೇನು ಹೇಳಿಯಾರು ? ಎಂಬ ಅಹಂಕೂಡ. ಆದರೆ ಸಂವಾದವು ಸುದೀರ್ಘವಾಗಿ ನಡೆದಂತೆ ಎಲ್ಲರ ವಿಚಾರ ಧಾರೆಗಳೂ ಬದಲಾಗತೊಡಗಿದವು. ಸಮಾಧಾನ, ಸಂತೃಪ್ತಿಯ ಕಳೆ ಮುಖದಲ್ಲಿ ಮಿನುಗತೊಡಗುತ್ತಿತ್ತು. ಕಾರ್ಯಕ್ರಮದಿಂದ ತುಂಬಾ ಸಂತೃಪ್ತರಾಗಿ ನಂತರ ಪ್ರಸಾದ ಸ್ವೀಕರಿಸಿದರಲ್ಲದೆ ಯಥೇಚ್ಛವಾಗಿ ನಮ್ಮ ಗ್ರಂಥಗಳನ್ನು ಖರೀದಿಸಿ, ತಮ್ಮ ಮನೆಗಳಿಗೆ ಆಮಂತ್ರಿಸಿದರು. ಅಂದಿನ ಚರ್ಚೆಯಲ್ಲಿ ಮೂರು ಗುಂಪಾಗಿ ವಿಂಗಡಿಸಲಾಗಿತ್ತು. ನೆರೆದವರೆಲ್ಲರನ್ನು. ಮೊದಲು ದೊಡ್ಡವರ ಸರದಿ ; ನಂತರ ಹೆಣ್ಣುಮಕ್ಕಳ ಸರದಿ. ಆಮೇಲೆ ಮಕ್ಕಳ ಮತ್ತು ತರುಣ-ತರುಣಿಯರ ಸರದಿ. ತಮಗೆ ಸಂಪೂರ್ಣ ಸ್ವಾತಂತ್ರ್ಯವಿರಬೇಕೆಂದು ಹಿರಿಯರನ್ನು ಮೂಕಪ್ರೇಕ್ಷಕರಾಗಿರಲು ಹೇಳಿ ಟೀನ್‌ಏಜರ್ಸ್ ತಮ್ಮ ಸಂದೇಹಗಳನ್ನು ಮುಂದಿಟ್ಟರು.

ಅಮೇರಿಕಾದಲ್ಲಿ ನೆಲೆಸಿರುವ ಹಿಂದುಗಳು ಅನೇಕ ಬಗೆಯ ಸಮಸ್ಯೆಗಳನ್ನಿಂದು ಎದುರಿಸಬೇಕಾಗಿದೆ. ಅದರಲ್ಲಿ ಪ್ರಮುಖವಾದುವು (1) ವರ್ಣಸಂಘರ್ಷ (2) ಧಾರ್ಮಿಕ ವಿಚಾರಗಳ ಘರ್ಷಣೆ (3) ಸಾಂಸ್ಕೃತಿಕ ಆಚರಣೆಗಳ ತಾಕಲಾಟ. ಇತ್ತೀಚೆಗೆ ಬ್ರಿಟನ್ನಿನಲ್ಲಿ ಆಗುತ್ತಿರುವ ವರ್ಣಗಲಭೆ ಅಲ್ಪಸ್ವಲ್ಪ ಮಟ್ಟಿನ ಚಿತ್ರವನ್ನು ದೂರದಲ್ಲಿರುವ ನಮಗೆ ಕೊಡಬಲ್ಲುದು. ಮಣ್ಣಿನ ಮಕ್ಕಳಿಗೆ ಪ್ರಧಾನತೆ ಎಂಬ ನುಡಿ ಹೆಚ್ಚು ಹೆಚ್ಚಾಗಿ ಪ್ರಚಾರವಾಗುತ್ತಿದ್ದು, ಏಷಿಯನರನ್ನು ಮುಖ್ಯವಾಗಿ ಭಾರತೀಯರನ್ನು ಸ್ವಲ್ಪ ನಿಕೃಷ್ಟವಾಗಿ ಮತ್ತು ತಮ್ಮ ಸೌಲಭ್ಯಗಳನ್ನು ಹಂಚಿಕೊಳ್ಳಲು ಬಂದ ಮಲಮಕ್ಕಳಂತೆ ಕಾಣುವ ಪರಿಪಾಠ ಬೆಳೆಯುತ್ತಿದೆ. 'ನಮ್ಮದೊಂದು ದರಿದ್ರ ದೇಶ; ಇಲ್ಲಿ ತಿನ್ನಲು ಇಲ್ಲದೆ ಅಲ್ಲಿಗೆ ಹೋಗುತ್ತಿದ್ದಾರೆ' ಎಂಬ ಭಾವನೆ ಅಲ್ಲಿಯ ಶ್ರೀಸಾಮಾನ್ಯರಲ್ಲಿದೆ. ವಿದ್ಯಾವಂತರು, ಹೊರಜಗತ್ತಿನ ಜ್ಞಾನವುಳ್ಳವರು ಹಾಗೆ ಭಾವಿಸದಿದ್ದರೂ ಕೂಪ ಮಂಡೂಕ ಪ್ರವೃತ್ತಿಯ ಜನ ಹಾಗೆ ಭಾವಿಸುವುದು ಅಸಹಜವೇನಲ್ಲ. ನಮ್ಮವರು ಏನೇ ಕೂದಲು ಕತ್ತರಿಸಿಕೊಳ್ಳಲಿ, ಕುಂಕುಮ ಮಾಂಗಲ್ಯ ತೆಗೆಯಲಿ, ಅವರಂತೆ ಕಾಣಲು ಏನೆಲ್ಲ ಮಾಡಿದರೂ ಮುಖಲಕ್ಷಣದಿಂದ ಯಾರಾದರೂ ಭಾರತೀಯರೆಂದು ಸುಲಭವಾಗಿ ಗುರುತಿಸುವರು. ಎರಡನೆಯದಾಗಿ ಧಾರ್ಮಿಕ ವಿಚಾರಗಳ ಘರ್ಷಣೆಯಲ್ಲಿ ಮಕ್ಕಳು ಹತಾಶರಾಗುತ್ತಿದ್ದಾರೆ.. ಕೆಲವು ತಾಯಿ-ತಂದೆ ತಾವೇ ಪಾಶ್ಚಿಮಾತ್ಯ ಸಂಸ್ಕೃತಿಗೆ ಮರುಳಾಗಿ, ಮಾತೃಧರ್ಮ-ಸಂಸ್ಕೃತಿ ಬಿಟ್ಟುಬಿಡುತ್ತಾರೆ. ಇನ್ನು ಮಕ್ಕಳು ಕಲಿಯುವುದು ದೂರವೇ ಉಳಿಯಿತು. ಅಂತಹವರ ಮಕ್ಕಳು ಹಿಂದೂ ಆಚರಣೆ ಮಾಡದಿದ್ದರೂ ಇವರನ್ನು ಭಾರತೀಯರೆಂದು

ಗುರುತಿಸಿ ಸಹಪಾಠಿಗಳು ಅನೇಕ ಪ್ರಶ್ನೆ ಕೇಳುವರು. ಇನ್ನು ಕೆಲವರು ಏನಾದರೂ ಚಿಂತೆಯಿಲ್ಲ ಎಂದು ತಮ್ಮ ಮನೆಗಳಲ್ಲಿ ತಮ್ಮ ಧರ್ಮ ಸಂಸ್ಕೃತಿಯನ್ನು ಅಷ್ಟಿಷ್ಟು ಹೇಳಿಕೊಡುತ್ತಾರೆ. ಆದರೆ ಅಂತಹವರ ಮಕ್ಕಳನ್ನು ಶಾಲೆಯಲ್ಲಿ ಪ್ರಶ್ನೆಗಳಿಂದ ತಾಡಿಸಿದಾಗ ಅವು ಜರ್ಜರಿತವಾಗಿ, ಮುಖ ಒಣಗಿಸಿಕೊಂಡು ಬರುತ್ತವೆ. ಎತ್ತರ, ಮೈಕಟ್ಟಿನ ದೃಷ್ಟಿಯಿಂದಲೂ ಅಮೆರಿಕನ್ ಮಕ್ಕಳು ಭವ್ಯಕಾಯರು. ಅವರು ಭಾರತೀಯರ ಮಕ್ಕಳನ್ನು ಛೇಡಿಸುವುದೇ ಅಲ್ಲದೆ ಅವರ ಆಕೃತಿಯನ್ನು (ಹಾಗೆ ನೋಡಿದರೆ ವಿದೇಶಕ್ಕೆ ಹೋದವರ ಮಕ್ಕಳು ಅಲ್ಲಿಯ ಹವಾಮಾನದಿಂದ ಚೆನ್ನಾಗಿ ಆಗುತ್ತಾರೆ, ಚೆನ್ನಾಗಿ ಹುಟ್ಟುತ್ತಾರೆ) ಕಂಡು ಗೇಲಿಮಾಡುತ್ತಾರೆ. ಹೀಗಾಗಿ ಮಕ್ಕಳಲ್ಲಿ ಕೀಳರಿಮೆಯ ಪ್ರಜ್ಞೆ ಬೆಳೆಯುತ್ತಾ ಹೋಗುತ್ತದೆ. ಆದ್ದರಿಂದಲೇ ಮಕ್ಕಳು ಹಟಮಾರಿಗಳು, ಅವಿಧೇಯರು ಆಗುತ್ತಾರೆ. ಅವರ ಪ್ರತಿಷ್ಠೆ (egoism) ಯ ತೃಪ್ತಿ ತಮ್ಮ ತಾಯಿತಂದೆಯರ ಬಳಿಯಲ್ಲಿ ಮಾತ್ರ ಸಾಧ್ಯವಷ್ಟೆ? "ಏನು ನಿಮ್ಮಲ್ಲಿ ಹಸು ಪೂಜಿಸ್ತೀರಾ? ಹಾವನ್ನೂ ಪೂಜೆ ಮಾಡ್ತೀರಂತೆ? ಗಿಡ ಮರ ಸುತ್ತಾಕ್ತೀರಾ? ಇವೆಲ್ಲಾ ದೇವರಾ? ನಿಮ್ಮ ದೇವರಿಗೆ ಆನೆ ಮುಖಾ ಅಂತೆ, ಕೋತಿ ಕೂಡ ದೇವರಂತೆ; ವಿದೇಶಗಳಲ್ಲಿ ಬೆಳೆದ ಮಕ್ಕಳು ಪ್ರಶ್ನೆ ಕೇಳುವಾಗ Elephant god, monkey-god, ugly-god ಎಂದು ಗಣಪತಿ; ಹನುಮಂತ, ವೆಂಕಟೇಶನನ್ನು ಕುರಿತು ಕೇಳುವರು. ರಾಮನನ್ನು ದೇವರು ಅಂತೀರಾ? ದೇವರು omniscient ಸರ್ವಜ್ಞ ಅಲ್ಲವೇ? ತನ್ನ ಹೆಂಡತಿ ಕಳೆದು ಹೋಗೋದು ಮೊದಲೇ ಗೊತ್ತಾಗ್ಲಿಲ್ವೆ?" ಮಕ್ಕಳು ಕೇಳುವ ಪ್ರಶ್ನೆಗೆ ತಾಯಿ ತಂದೆ ತತ್ತರಿಸುತ್ತಾರೆ! ಗಾಬರಿಗೊಳ್ಳುತ್ತಾರೆ. ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಚಿಂತಾಕ್ರಾಂತರಾಗುತ್ತಾರೆ. ದೇವರ ಸ್ವರೂಪ ಹೇಳುವಾಗ ಉಪನಿಷತ್ತಿನ ಕಲ್ಪನೆಯನ್ನು, ವಚನಗಳಲ್ಲಿ ಬರುವ ದೇವರ ಕಲ್ಪನೆಯನ್ನು ನಾನು ಹೇಳಿದರೆ ಮಕ್ಕಳಿಗೆ ಅತೀವ ಸಂತೋಷ. ಅವರ ಚಿಕಿತ್ಸಕ ಬುದ್ಧಿಗೆ ಅಪಾರ ಸಂತೃಪ್ತಿ. ಆಗ ಅವರ ವಿಚಾರವೇ ಗೆದ್ದ ಹುಮ್ಮಸ್ಸು; ತಾಯಿತಂದೆಯರಿಗೆ ಖಿನ್ನತೆ. ತಾವು ನಂಬಿದುದೇ ಹಿಂದೂಧರ್ಮ ಎಂಬ ನಂಬಿಗೆಯನ್ನು ಮಕ್ಕಳು ಒಲ್ಲದ್ದರಿಂದ ತಾಯಿ-ತಂದೆ ಪರಂಪರೆಯ ಸತ್ವದ ಮೇಲೆ ತರ್ಕ ಮಾಡುವುದು. ಮಕ್ಕಳು ನೋಡಿದರೆ ಅನುಭವ ಪ್ರಧಾನ ವೈಚಾರಿಕತೆಗೆ ಜೋತು ಬಿದ್ದವರು. ಕಡೆಗೆ ಉಭಯತರಿಗೂ ಸಮಾಧಾನವಾಗುವಂತೆ ಹಿಂದೂ ತತ್ವದಲ್ಲಿ ಅರಿತುಕೊಳ್ಳಬೇಕಾದ್ದು ಬಹಳಷ್ಟಿದೆ ಎಂದು ತತ್ವವನ್ನು ವಿವರಿಸುತ್ತಿದ್ದೆ. ಸಾಮಾನ್ಯ ಜನರು ಆಚರಿಸುವ common sensc level ಹಿಂದೂಯಿಸಮ್ ಅನ್ನೇ ನಾವು ಸರ್ವಸ್ವವೆಂದು ತಿಳಿಯಬಾರದು. ಇದನ್ನು ದಾಟಿದ್ದು speculative ತತ್ವಜ್ಞಾನ ಸಿದ್ಧಾಂತಗಳ ದೃಷ್ಟಿಯಲ್ಲಿ ಹಿಂದೂ ಪರಂಪರೆ

ಬಹಳ ಶ್ರೇಷ್ಠವಾದದ್ದು. ಇನ್ನು ದಾರ್ಶನಿಕ ಮಟ್ಟದ ಯೋಗ, ಅನುಭವ, ಆಧ್ಯಾತ್ಮ ವಿದ್ಯೆಯ ಹಿಂದೂತತ್ವವಂತೂ ಜಗತ್ತಿನಲ್ಲಿ ಏಕಮೇವಾದ್ವಿತೀಯವಾದುದು. ದೇವಾಲಯದ ಪೌಳಿ ನೋಡಿ, ಶಿಥಿಲವಾದ ಗೋಡೆಗಳನ್ನು ಕಂಡು ಅದಷ್ಟೇ ದೇವಾಲಯ ಎಂದು ಭಾವಿಸಬಾರದು; ಪೌಳಿ ದಾಟಿದ ನಂತರ ಪ್ರಾಂಗಣ, ಒಳಗೆ ವಿಗ್ರಹ. ಇದರ ಮೇಲೆ ದೇವಾಲಯದ ಕಲೆ, ಮಹತ್ವಗಳನ್ನರಿಯುವಂತೆ ಮೂಢಾಚರಣೆಯನ್ನು ದಾಟಿ ಒಳಗೆ ಹೋಗಬೇಕು. ಅಂತೆಯೇ ಹಿಂದೂ ಪರಂಪರೆ ವಿಖ್ಯಾತ ದಾರ್ಶನಿಕರನ್ನು, ತತ್ವಜ್ಞಾನಿಗಳನ್ನು, ಯೋಗಿಗಳನ್ನು ಕೊಟ್ಟಿದೆ. ಹೆಮ್ಮರಗಳು ಬೆಳೆದಿದ್ದರೆ ಅಥವಾ ಸಮೃದ್ಧವಾದ ಹಸಿರಿನ ವನವಿದ್ದರೆ ಅಲ್ಲಿ ಮಣ್ಣು ಫಲವತ್ತಾಗಿದೆ, ನೀರು ನಿರಂತರವಾಗಿ ಹರಿಯುತ್ತದೆ ಎಂದು ಊಹಿಸುತ್ತೇವಷ್ಟೆ. ಹಾಗೆಯೇ ಮಹಾತ್ಮರೆಂಬ ಹೆಮ್ಮರಗಳನ್ನು ಕೊಟ್ಟು ತತ್ವಸಂದೇಶಗಳ ವೃಕ್ಷಸಮೂಹ ಹೊಂದಿದ ಹಿಂದೂ ಪರಂಪರೆ ಸತ್ವಶಾಲಿಯಲ್ಲದೆ ಮತ್ತೇನು? ಇಲ್ಲಿಯ ಮತಾಂಧರನ್ನು ಬಿಟ್ಟರೆ, ಆತ್ಮಶಾಂತಿಗಾಗಿ ಪಡುವಣದವರು ಭಾರತದತ್ತ ಏಕೆ ಕೈ ಚಾಚುವರು? ಅವರು ಅರಿತಿದ್ದಾರೆ ನಮ್ಮ ಪರಂಪರೆಯ ಸತ್ವವೇನೆಂಬುದನ್ನು. ಆದ್ದರಿಂದ ನೀವು ಹೆಚ್ಚೆಚ್ಚು ಓದಿ, ತಿಳಿದುಕೊಳ್ಳಿ, ಅಳವಡಿಸಿಕೊಳ್ಳಿ.... ..." ಎಂದು ಹೇಳುತ್ತಿದ್ದೆ. ಅಂತೂ ಧಾರ್ಮಿಕ ಆಚರಣೆ ಮಾಡಲು ನಾಚುತ್ತಿದ್ದ ಮಕ್ಕಳು ಸ್ವಲ್ಪ ಸ್ವಲ್ಪ ಮೈಛಳಿ ಬಿಟ್ಟು ಲಾಂಛನಗಳನ್ನು ಉಪಯೋಗಿಸತೊಡಗಿದರು.

ವಾರಕೊಮ್ಮೆ ತಪ್ಪದೆ ಅಲ್ಲಿಯ ಜನರು ಚರ್ಚಿಗೆ ಹೋಗಿ ಬರುವವರು. ಆಗ ಈ ಮಕ್ಕಳು ಮುಖ ಬಾಡಿಸಿಕೊಂಡು ನಮಗೇನೂ ಇಲ್ಲವೆ? ನಾವೆಲ್ಲಿಗೂ ಹೋಗ ಬಾರದೆ? ಎನ್ನುವರು. ಚರ್ಚಿನ ಭಾನುವಾರದ ತರಗತಿಗಳಿಗೆ ಮಕ್ಕಳನ್ನು ಕಳಿಸಿದರೆ ಆ ಪ್ರಭಾವಕ್ಕೆ ಎಲ್ಲಿ ಒಳಗಾಗುವರೋ ಎಂಬ ಭಯ ಹಿಂದೂಪಾಲಕರಿಗೆ; ಕಳಿಸದಿದ್ದರೆ ಮಕ್ಕಳಲ್ಲಿ ಖಿನ್ನಭಾವ. ಅಂತೂ ಇತ್ತೀಚೆಗೆ ಮಕ್ಕಳು ಬೆಳೆದಂತೆಲ್ಲ ಪಾಲಕರು ಹೆಚ್ಚುಹೆಚ್ಚು ಧರ್ಮ-ಸಮಾಜಗಳ ಚಿಂತನೆ ಮಾಡುತ್ತಿದ್ದಾರೆ. ಒಂದು ಧಾರ್ಮಿಕ ಸಂಘವನ್ನು ರಚನೆಮಾಡಿಕೊಂಡು ಆಗಾಗ ಒಂದುಗೂಡುವ ಕಾರ್ಯಕ್ರಮ ಹಾಕಿಕೊಂಡ ಓರ್ವರು ಸಂಘ ರಚನೆಗೆ ಸಿಕ್ಕ ಪ್ರೇರಣೆಯ ಬಗ್ಗೆ ಹೀಗೆ ಹೇಳಿದರು "ನಾವು ವಿದ್ಯೆಕಲಿತು, ಮನೆಯಲ್ಲಿ, ಸಮಾಜದಲ್ಲಿ ಯಾವ ಸಂಸ್ಕಾರವೂ ಇಲ್ಲದೆ ಅಂತೂ ಇಲ್ಲಿಗೆ ಬಂದೆವು. ದುಡಿಯುವ ಹುಮ್ಮಸ್ಸು, ತಾರುಣ್ಯದ ದಾಂಪತ್ಯ, ಇಲ್ಲಿ ಬದುಕು ಚೆಲುವೆನಿಸಿತು. ನಂತರ ಮಕ್ಕಳಾದಾಗಲೂ ಚಿಂತೆ ಎನಿಸಲಿಲ್ಲ. ಆದರೆ ಮಕ್ಕಳು ಬೆಳೆದು ನಿಂತಾಗ, ಅದೂ ಹೆಣ್ಣುಮಕ್ಕಳು ಬೆಳೆದು ನಿಂತಾಗ ಸಮಸ್ಯೆ ಗರಿಗೆದರಿ ನಿಂತಿತು. ಭಾರತದಲ್ಲಿ ಹುಟ್ಟಿ-ಬೆಳೆದು, ಅಲ್ಲಿಯ ಸಂಸ್ಕೃತಿ ಆಚಾರ ವಿಚಾರಗಳ ಪರಿಚಯವೇ ಇಲ್ಲದ ಮಕ್ಕಳಿಗೆ ಮದುವೆ ಮಾಡುವುದೆಂತು? ಅಮೆರಿಕನ್ನರೊಡನೆ

ಅಂತರ್‌ಜಾತೀಯ ವಿವಾಹ ಮಾಡಿಕೊಂಡರೆ, ಎಷ್ಟು ದಿನ ನೆಚ್ಚಿಕೊಂಡು ಪರಸ್ಪರ ಬಾಳುವರು? ಆ ನಂತರ ಅವರ ಬದುಕಿನ ದುರಂತ ಚಿತ್ರ ಯಾರು ನೋಡಬೇಕು? ಭಾರತದಿಂದಲೇ ಆರಿಸೋಣವೆಂದರೆ ಹುಡುಗ ಅಥವಾ ಹುಡುಗಿಯೊಡನೆ ಒಡನಾಡದೆ Arranged marrages ಏರ್ಪಡಿಸಿದ ಮದುವೆಗಳಿಗೆ ಸರ್ವಥಾ ಒಪ್ಪರು. ಆ ರೀತಿ ಮದುವೆಗೆ ಮುಂಚೆಯೇ ಒಡನಾಡಲು ಭಾರತೀಯ ಮಾತಾಪಿತೃಗಳು ಒಪ್ಪರು. ಹೀಗಾಗಿ ಸಮಾನ ಧರ್ಮೀಯ ಕುಟುಂಬಗಳು ಒಂದೆಡೆ ಬಂದರೆ, ಆ ಕುಟುಂಬದಲ್ಲಿರುವ ಬೆಳೆದ ಮಕ್ಕಳು ಪರಸ್ಪರ ಪರಿಚಿತರಾಗಿ ಮದುವೆಯಂತಹ ಕೆಲಸಗಳು ಸುಗಮವಾಗ ಬಹುದು.". ಅಂತೂ ಇತ್ತೀಚೆಗೆ, ಯಾವ ಜಾತಿಯವರಾದರೇನು ತಮ್ಮ ಮಕ್ಕಳು ಅಮೆರಿಕರನ್ನು ಮದುವೆಯಾಗದೆ ಹಿಂದುಗಳಲ್ಲಿ ಯಾರನ್ನಾದರೂ ಆದರೆ ಸಾಕು ಎಂಬ ವಿಚಾರಧಾರೆಗೆ ಪಾಲಕರು ಬಂದಿದ್ದಾರೆ. ತಮ್ಮ ಧರ್ಮ, ಸಂಸ್ಕೃತಿಗಳ ಪರಿಚಯ ಮಾಡಿಕೊಡಲು ಸಂಘ-ಸಂಸ್ಥೆಗಳನ್ನು ರಚಿಸಿಕೊಳ್ಳುತ್ತಿದ್ದಾರೆ. ಅದೇ ವೇಳೆಗೆ ಆಧ್ಯಾತ್ಮಾಕಾಂಕ್ಷಿಗಳಾಗಿ ಹಿಂದೂ ತತ್ವಕ್ಕೆ ಆಕರ್ಷಿತರಾಗಿ ಬರುವ ಅಧ್ಯಾತ್ಮಜೀವಿ ಅಮೆರಿಕನ್ನರನ್ನು ಸ್ವಾಗತಿಸುವುದಿಲ್ಲ. ನ್ಯೂಯಾರ್ಕಿನಲ್ಲಿರುವ ಹಿಂದೂ ದೇವಾಲಯ ದಲ್ಲಿ ಓರ್ವರು ಸಂಜೆಯ ವೇಳೆಯಲ್ಲಿ ಭಜನೆ ಮಾಡಿಸುತ್ತಾರೆ. ಅದಕ್ಕೆ ದಿನನಿತ್ಯ ತಪ್ಪದೆ ಬಂದು ಪಾಲ್ದಾರರಾಗುವವರು ಅಮೇರಿಕನ್ನರು. ಹಿಂದುಗಳು ದೇವಾಲಯಕ್ಕೆ ಬರುವುದು ವಿಶೇಷ ಉತ್ಸವಗಳಂದು, ಅಭಿಷೇಕವಿದ್ದಂದು!

ಶ್ರೀಮತಿ ಜಯಾ ಡಾ॥ ಶಿವಮೂರ್ತಿ ಸಣ್ಣವಯಸ್ಸಿನಲ್ಲಿಯೇ ಅತ್ತ ಹೋದ ವರು. ವೈದ್ಯಕೀಯ ಪದವಿ ಪರೀಕ್ಷೆ ಮುಗಿಸಿ ಆ ಕಡೆ ಹೋಗಿ, ಅಲ್ಲೇ ನೆಲೆಸಿದ್ದಾರೆ. ಅವರಿರುವ ಡಿಕ್ಸ್‌ಹಿಲ್ಸ್ ಪ್ರದೇಶ ಬಹಳ ಪ್ರಶಾಂತವಾದ ನ್ಯೂಯಾರ್ಕಿನ ಒಂದು ಬಡಾವಣೆ. ದೊಡ್ಡದಾದ ಮನೆ, ಅಷ್ಟೇ ದೊಡ್ಡ ಮನಸ್ಸು, ಬೆಲೆ ಬಾಳುವ ಪೀಠೋಪಕರಣಗಳು, ಜನರನ್ನು ಆದರದಿಂದ ಕಾಣುವ ಸ್ವಭಾವ, ಬಂದವರಿಗೆ ಕೈತುಂಬ ಮಾಡಿಡುವ ಔದಾರ್ಯ. ದಂಪತಿಗಳಿಬ್ಬರದೂ ಒಂದೇ ಮನಸ್ಸು! ಹೀಗಾಗಿ ಸದಾ ಸಂಚಾರದಲ್ಲಿರುತ್ತಿದ್ದ ನಾನು ಇವರ ವಿಳಾಸವನ್ನೇ ಕೊಟ್ಟು ಪತ್ರ ವ್ಯವಹಾರ ಮಾಡುತ್ತಿದ್ದೆ. ಅವುಗಳನ್ನು ಜೋಪಾನವಾಗಿ ಸ್ವೀಕರಿಸಿ, ದೂರವಾಣಿ ಮೂಲಕ ನಾನಿರುತ್ತಿದ್ದ ವಿಳಾಸ ಪಡೆದು, ಅಲ್ಲಿಗೆ ಪುನರ್ ನಿರ್ದೇಶಿಸುತ್ತಿದ್ದರು.

ಸ್ತ್ರೀ ಗುರುವಾದ್ದರಿಂದ ನನಗೊಂದು ವಿಶೇಷ ಅನುಕೂಲತೆ ಇತ್ತು. ಸಾಮಾನ್ಯ ವಾಗಿ ಅಲ್ಲಿ ಪತಿ-ಪತ್ನಿಯರು, ಒಂದೆರಡು ಮಕ್ಕಳು ಇರುತ್ತಾರೆ ಒಂದು ಕುಟುಂಬದಲ್ಲಿ. ತೀರಾ ಅನಿವಾರ್ಯ ತೊಂದರೆ ಏನಾದರೂ ಇದ್ದರೆ ಹೆಣ್ಣು ಮಕ್ಕಳು ನೌಕರಿಗೆ ಹೋಗುತ್ತಾರೆ. ಇಲ್ಲವಾದರೆ ಭಾರತೀಯ ನಾರಿಯರು, ಅದರಲ್ಲಿಯೂ ವೈದ್ಯಕೀಯ

ವೃತ್ತಿಯ ಪತಿ ಇದ್ದ ನಾರಿಯರು ಬೇರೆ ನೌಕರಿಗೆ ಹೋಗುವುದಿಲ್ಲ. (ಹೆಣ್ಣು ಮಕ್ಕಳು ವೈದ್ಯಕೀಯ ಪರೀಕ್ಷೆ ಮುಗಿಸಿದ್ದರೆ ಮಾತ್ರ ಕ್ವಾಲಿಫಿಕೇಷನ್ ವ್ಯರ್ಥ ಮಾಡ ಲಾರದೆ ಹೋಗುತ್ತಾರೆ) ವೈದ್ಯ ವೃತ್ತಿಯವರಿಗೆ ಅತ್ಯುತ್ತಮ ಆದಾಯ ಇರುತ್ತದೆ. ಹೆಂಡತಿ ದುಡಿದರೆ ಟ್ಯಾಕ್ಸ್‌ಗೇ ಆ ಹಣ ಹೋಗಿಬಿಡುತ್ತದೆ. ಇನ್ನು ಕೆಲವರಂತೂ ಹಣದ ದಾಹ ತೀರಾ ಇದ್ದವರು, ಅವರು ಎಷ್ಟಿದ್ದರೂ ಸಾಲದು ಎಂದು ಮತ್ತೂ ಹೋಗುತ್ತಾರೆ. ಸಾಮಾನ್ಯವಾಗಿ ಗಂಡನು ಕೆಲಸಕ್ಕೆ ಹೋದ ಮೇಲೆ ಮನೆಯಲ್ಲಿ ಹೆಂಡತಿಯೊಬ್ಬಳೇ! ಮನೆಗೆ ಸಾಮಾನು ತರುವುದು, ಮಕ್ಕಳನ್ನು ಶಾಲೆಗೆ ಬಿಡುವುದು, ಕರೆತರುವುದು-ಈ ಎಲ್ಲ ಆಕೆಯೇ ನಿರ್ವಹಿಸುತ್ತಾಳೆ. ಇಂಥ ಪ್ರಸಂಗದಲ್ಲಿ ಪುರುಷ ಗುರುಗಳು ಬಂದರೆ ಮನೆಯಲ್ಲಿ ಇರಿಸಿಕೊಳ್ಳಲು ಸಂಕೋಚ. ಇನ್ನು ಬಂದವರಿಗಾಗಿ ರಜೆ ತೆಗೆದುಕೊಂಡು ಮನೆಯಲ್ಲಿರಲೂ ಆಗದು. ಹೀಗಾಗಿ ಒಮ್ಮೆ ಓರ್ವ ಸ್ವಾಮಿಗಳು ಬಂದಾಗ ಹೆಚ್ಚುದಿನ ಇರಿಸಿಕೊಂಡು ಆದರಾತಿಥ್ಯ ಮಾಡ ಲಾಗದ ಪರಿಸ್ಥಿತಿ ಬಂದಿತು ಎಂದು ಕೆಲವರು ಪೇಚಾಡುತ್ತಿದ್ದರು. ನಮಗೆ ಆ ಕಷ್ಟ ವಿರಲಿಲ್ಲ. ಸ್ತ್ರೀಗುರುವಾದ್ದರಿಂದ ಎಷ್ಟು ದಿನಗಳಾದರೂ ಇರಿಸಿಕೊಂಡು ಸತ್ಕರಿಸಲು ಗಂಡಂದಿರು ತಮ್ಮ ಪತ್ನಿಯರಿಗೆ ಒಪ್ಪಿಗೆ ನೀಡುತ್ತಿದ್ದರು. ಇದರಿಂದಾಗಿ ನೂರಿಪ್ಪತ್ತು ದಿನಗಳ ನಿರಂತರ ಪ್ರವಾಸದಲ್ಲಿ ಒಂದು ದಿನವಾದರೂ ಪ್ರವಾಸಿ ಗೃಹದಲ್ಲಾಗಲೀ, ಹೋಟಲಿನಲ್ಲಾಗಲೀ ತಂಗುವ ಪ್ರಸಂಗ ಒದಗಲೇ ಇಲ್ಲ. ಜೊತೆಗೆ ಅಪರೂಪಕ್ಕೆ ಬಂದವರೆಂದು ವಿಶೇಷ ಭೋಜನ ಬೇರೆ. ಅವರಿಗೇನೋ ನಾವು ಒಂದೆರಡು ದಿನದ ಅತಿಥಿಗಳೆಂದು ವಿಶೇಷ ಅಡಿಗೆ ಮಾಡಿ ನೀಡುವ ಬಯಕೆ. ನಮಗಾದರೋ ದಿನ ನಿತ್ಯದ ಬಿನ್ನಹ. ಇಲ್ಲಿಗಿಂತಲೂ ಹೆಚ್ಚಿನ ರುಚಿಕಟ್ಟಾದ, ಶ್ರೀಮಂತ ಭೋಜನ ಉಂಡುದ್ದರಿಂದ ಬಂದ ತೂಕವನ್ನು ಇನ್ನೂ ಇಳಿಸಿಕೊಳ್ಳಲು ಆಗುತ್ತಲೇ ಇಲ್ಲ. "ನಾಲ್ಕು ತಿಂಗಳ ಪ್ರವಾಸ ಮಾಡಿ ಬಂದರೆ ಖಂಡಿತಾ ಸಣ್ಣಗಾಗುವಿರಿ. ಅಲ್ಲಿಯ ಬ್ರೆಡ್, ಸೂಪು, ಚೀಸ್ ನಿಮಗೆ ಖಂಡಿತಾ ಹಿಡಿಸವು." ಎಂದು ಆಗ ತಾನೇ ಸರ್ಕಾರದ ಅತಿಥಿಯಾಗಿ ಪ್ರವಾಸ ಮುಗಿಸಿ ಬಂದಿದ್ದ ಶ್ರೀಮತಿ ಬಸವರಾಜೇಶ್ವರಿ ನಾನು ಇಲ್ಲಿಂದ ಹೊರಡುವ ಮುನ್ನ ಹೇಳಿದ್ದರು. ನನಗದರ ತದ್ವಿರುದ್ಧ ಅನುಭವ. ಒಂದು ಮನೆ ಯಿಂದ ಇನ್ನೊಂದು ಮನೆಗೆ, ಒಂದು ಊರಿಂದ ಇನ್ನೊಂದು ಊರಿಗೆ ಕಾರಿನಲ್ಲಿ. ಕರೆದೊಯ್ಯುತ್ತಿದ್ದರು. ಹೋದಲ್ಲೆಲ್ಲ ಶ್ರೀಮಂತ ಭೋಜನ; ನಮ್ಮಲ್ಲಿ ಆವೇಳೆಯಲ್ಲಿ ಮಾವಿನ ಹಣ್ಣು ಸಿಗದು. ಅಲ್ಲಿ ಮಾವಿನ ಹಣ್ಣು ಮೆಕ್ಸಿಕೋದಲ್ಲಿ ಬೆಳೆಯುವುದರಿಂದ ಆ ದೇಶದಿಂದ ಕೆಡದಂತಿರಿಸಿದ ಮಾವಿನ ರಸವನ್ನು ಆಮದು ಮಾಡಿಕೊಳ್ಳುವುದರಿಂದ, ಮಾವಿನ ಹಣ್ಣಿನ ರಸ ಸದಾ ಡಬ್ಬಿಗಳಲ್ಲಿ ಲಭ್ಯ. ಹೀಗಾಗಿ ಹೋಳಿಗೆ, ಸೀಕರಣೆ ತಯಾರು. ಅನೇಕರ ಮನೆಗಳಲ್ಲಿ!

ಶ್ರೀಮತಿ ಜಯಾರವರ ಮನೆಯ ಆತಿಥ್ಯ ಚೆನ್ನಾಗಿತ್ತು. ಮರುದಿನಸ ಅಂದರೆ 22ನೇ ಡಿಸೆಂಬರ್ 1981ರಂದು ಒಂದು ವಿಶೇಷ ಕಾರ್ಯಕ್ರಮ. ಅದೇ ಶ್ರೀಮತಿ ಸತ್ಯ ಡಾ॥ ವಿಶ್ವನಾಥ ಅವರು ನಡೆಸುವ "Vision of Asia" ಟೆಲಿವಿಷನ್‌ನಲ್ಲಿ ಸಂದರ್ಶನ. ಆ ದೇಶದಲ್ಲಿ ಟೆಲಿವಿಷನ್ ಪ್ರಸಾರ ಕೇಂದ್ರಗಳು ವೈಯಕ್ತಿಕ ಒಡೆತನಕ್ಕೆ ಸೇರಿವೆ. ಪ್ರಸಾರಮಾಡುವ ಕೆಲವು ಬೃಹತ್ ಸಂಸ್ಥೆಗಳು ಗಂಟೆಗಿಷ್ಟು ಎಂದು ಹಣ ಪಡೆದು ಪ್ರಸಾರ ಮಾಡುತ್ತವೆ. ಆ ವೇಳೆಯನ್ನು ಕೊಂಡುಕೊಂಡು ಜಾಹಿರಾತುಗಳ ಮುಖಾಂತರ ಹಣ ಸಂಗ್ರಹಿಸಿ ಕೆಲವರು ಕೇಂದ್ರಗಳನ್ನು ನಡೆಸುತ್ತಿದ್ದಾರೆ ಎಲ್ಲ ಭಾರತೀಯರು ಮತ್ತು ಅನೇಕ ಅಮೆರಿಕನ್ನರು ವೀಕ್ಷಿಸುವ ಕಾರ್ಯಕ್ರಮ-ಈ ವಿಷನ್ ಆಫ್ ಏಷಿಯಾ. ಭಾರತದಿಂದ ಬರುವ ಪ್ರಮುಖ ವ್ಯಕ್ತಿಗಳು, ರಾಯಭಾರಿಗಳು ಮುಂತಾದವರನ್ನು ಶ್ರೀಮತಿ ಸತ್ಯ ಅವರು ಸಂದರ್ಶಿಸಲು ಏರ್ಪಾಡು ಮಾಡುತ್ತಾರೆ. ಮಾಜಿ ಮೇಯರರು, ಸಮಾಜದ ಪ್ರಮುಖ ವ್ಯಕ್ತಿಗಳು, ಹಲವಾರು ಸೇವಾಕ್ಷೇತ್ರಗಳಲ್ಲಿ ಹಾರ್ದಿಕ ಸೇವೆ ಸಲ್ಲಿಸಿರುವವರೂ ಆದ ಶರಣ ಕೆ. ಎಂ. ನಂಜಪ್ಪನವರ ಮಗಳು ಶ್ರೀಮತಿ ಸತ್ಯ. ಅವರ ಇನ್ನೊಬ್ಬ ಮಗಳು ಗಾಯಿತ್ರಿಯೂ ಪತಿ ಡಾ॥ ಜಗನ್ನಾಥ ರೊಡನೆ ಅಮೆರಿಕಾದಲ್ಲೇ ನೆಲೆಸಿದ್ದಾರೆ. ಶ್ರೀಮತಿ ಸತ್ಯರವರ ಪತಿ ಡಾ॥ ಬಾಣದ ವಿಶ್ವನಾಥರವರು ಬೆಂಗಳೂರಿನ ಶ್ರೀ ನಂದೀಶರವರ ಮಗ, ತುಂಬಾ ಸಾತ್ವಿಕರು, ಧರ್ಮ ನಿಷ್ಠರು. ವೈದ್ಯಕೀಯ ವೃತ್ತಿಯಲ್ಲಿರುವ ಅವರು, ಚಟುವಟಿಕೆಯ ಬುಗ್ಗೆಯೂ ಕ್ರಿಯಾಶೀಲ ವ್ಯಕ್ತಿಯೂ ಆಗಿರುವ ಶ್ರೀಮತಿ ಸತ್ಯರವರ ಪ್ರೇರಕ ಶಕ್ತಿ. ಪತ್ನಿಯ ಸರ್ವಾಂಗೀಣ ಚಟುವಟಿಕೆಗೆ ನಿರಂತರ ಪ್ರೋತ್ಸಾಹ ಅವರದು. ಡಾ॥ ವಿಶ್ವನಾಥರ ಇನ್ನೊಬ್ಬ ಸೋದರ ಪ್ರಕಾಶರವರು ದೂರದರ್ಶನ ಕೇಂದ್ರದ ಉಸ್ತುವಾರಿಯ ಹೊಣೆ ಹೊತ್ತಿದ್ದಾರೆ. ಭಾರತದಿಂದ ಅಲ್ಲಿಗೆ ಹೋಗಿ, ಪರಕೀಯರಂತೆ ಕಾಣುವ ಅಮೆರಿಕನ್ನರ ಮಧ್ಯೆ ಇದ್ದು ಟೆಲಿವಿಷನ್ ಉದ್ಯಮದಲ್ಲಿ ಯಶಸ್ಸು ಸಾಧಿಸಿರುವುದು ಸಾಮಾನ್ಯ ಸಾಧನೆ ಏನಲ್ಲ. ಅದರಲ್ಲಿಯೂ ಇಂಗ್ಲೆಂಡ್, ಅಮೆರಿಕಾಗಳಲ್ಲಿರುವ ಭಾರತೀಯರಲ್ಲಿ ಹೆಚ್ಚು ಜನರು ಉತ್ತರ ಭಾರತದವರು, ಸರ್ದಾರ್‌ಜೀಗಳು. ದಕ್ಷಿಣ ಭಾರತದಿಂದ ಹೋಗಿರುವವರು ಅಷ್ಟೊಂದು ದೊಡ್ಡ ಉದ್ದಿಮೆಗಳಲ್ಲಿಲ್ಲ, ಇವರು ಪ್ರಮುಖವಾಗಿ ವೈದ್ಯರು, ಇಂಜಿನಿಯರರು. ವ್ಯಾಪಾರವಿರುವುದು ಸಿಖ್ಖರು, ಗುಜರಾತಿಗಳು, ಉತ್ತರ ಭಾರತದವರುಗಳ ಕೈಯಲ್ಲಿ. ಆದರೆ ಉತ್ತಮ ಗುಣಮಟ್ಟದಿಂದಾಗಿ, ಅವರುಗಳು ನಡೆಸುವ ಟೆಲಿವಿಷನ್ ಕೇಂದ್ರಗಳೊಡನೆ ಸ್ಪರ್ಧಿಸಿ, ಜಯಶಾಲಿಗಳಾಗಿ ಅವರ ಆದರ ವನ್ನು, ಮೆಚ್ಚುಗೆಯನ್ನೂ ಪಡೆದು ಯಶಸ್ವಿಯಾಗಿದ್ದಾರೆ ಶ್ರೀಮತಿ ಸತ್ಯ ಮತ್ತು ಡಾ॥ ವಿಶ್ವನಾಥರು. ಪ್ರತಿ ಭಾನುವಾರ ಬೆಳಗ್ಗೆ ಒಂದೂವರೆ ತಾಸು ನಡೆಯುವ ಈ "ವಿಷನ್ ಆಫ್ ಏಷಿಯಾ" ವೀಕ್ಷಿಸಲು ಟೆಲಿವಿಷನ್ ನೋಡುವ ಎಲ್ಲರೂ ತಿಂಡಿ ತೀರ್ಥ

ಮುಗಿಸಿ ಉತ್ಸುಕರಾಗಿ ನೆರೆಯುತ್ತಾರೆ. ಕಾರ್ಯಕ್ರಮದ ಆರಂಭದಲ್ಲಿ ಮತ್ತು ಮಧ್ಯೆ ಮಧ್ಯೆ ಕಾಣಿಸಿಕೊಂಡು ಕಾರ್ಯಕ್ರಮದ ಪರಿಚಯ ಮಾಡಿಕೊಡಲು ಶ್ರೀಮತಿ ಸತ್ಯ ತೆರೆಯ ಮೇಲೆ ಕಾಣಿಸಿಕೊಳ್ಳುತ್ತಲೇ, ಮನೆಯಲ್ಲಿ ವೀಕ್ಷಿಸುತ್ತ ಕುಳಿತವರು ಸಂಭ್ರಮದಿಂದ ಸ್ವಾಗತಿಸುತ್ತಾರೆ. "ನಮ್ಮ ಸತ್ಯ" ಎಂದು ಮಕ್ಕಳು ಹರ್ಷಚಿತ್ತ ರಾಗಿ ಚಪ್ಪಾಳೆ ತಟ್ಟುತ್ತಾರೆ. ಅವರ ಈ ಸಾಹಸ, ಪ್ರತಿಭೆಗಾಗಿ ಹೆಮ್ಮೆ ಎನಿಸುತ್ತದೆ. ಆದರೆ ಅದನ್ನು ಕಂಡು ಮತ್ಸರಿಸುವವರೂ ಇಲ್ಲದಿಲ್ಲ. ಇರಲಿ ಬಿಡಿ; ಇದು ಮಾನವ ಸಹಜ ಹುಟ್ಟುಗುಣ. ಮತ್ಸರವೂ ಮೆಚ್ಚುಗೆಯ ಇನ್ನೊಂದು ಮುಖ! ತಮಗೆ ಮಾಡಲು ಕೈಲಾಗದ್ದನ್ನು ಇನ್ನೊಬ್ಬರು ಮಾಡಿದರೆ ಕಂಡು ಹರ್ಷಿಸಿ, ಪ್ರೋತ್ಸಾಹ ನೀಡುವುದು ಉತ್ತಮನ ಗುಣ; ಮತ್ಸರಿಸದೆ, ಪ್ರೋತ್ಸಾಹ ನೀಡದೆ ನಿರ್ಲಿಪ್ತವಾಗಿರು ವುದು ಮಧ್ಯಮನ ಗುಣ. ಮತ್ಸರಿಸಿ, ಒಳಗೇ ಕುದಿಯುವುದು ಅಧಮರ ಗುಣ. ಇದು ಲೋಕದ ನಡೆ.

ಶ್ರೀಮತಿ ಸತ್ಯ ಸ್ವಂತ ಟೆಲಿವಿಷನ್ ನಡೆಸುವುದರೊಡನೆ ಹಲವಾರು ಹಿಂದೂ, ಭಾರತೀಯ, ಅಮೆರಿಕನ್ ಸಂಘ-ಸಂಸ್ಥೆಗಳ ಸದಸ್ಯೆ. ಬಸವಣ್ಣನವರ ತತ್ತ್ವಗಳ ವೈಶಾಲ್ಯವನ್ನು ಅಲ್ಲಿಯವರಿಗೆ ಮನಮುಟ್ಟುವಂತೆ ಮಾಡಲು "ಬಸವ ಇಂಟರ್ ನ್ಯಾಷನಲ್" ಎಂಬ ಸಂಸ್ಥೆಯನ್ನೂ ಸ್ಥಾಪಿಸಿದ್ದಾರೆ. ಡಾ॥ ಸಿದ್ಧಯ್ಯ ಪುರಾಣಿಕರು ಅತ್ತ ಹೋದಾಗ ಈ ವಿಚಾರಕ್ಕೆ ಪ್ರೇರಣೆ ನೀಡಿ ಆರಂಭಿಸಿದರಂತೆ. ಎಲ್ಲ ಜಾತಿಮತ ಭಾಷೆ ರಾಷ್ಟ್ರಗಳವರನ್ನೂ ಸ್ವಾಗತಿಸಿದೆ ಈ ಬಸವ ಇಂಟರ್ ನ್ಯಾಷನಲ್.

ಭಾರತೀಯ ಧರ್ಮ, ದರ್ಶನ, ಸಮಾಜ, ಸಿದ್ಧಾಂತಗಳ ಬಗ್ಗೆ ಸಾಕಷ್ಟು ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದಿರುವ ಡಾ॥ ಮಾಕ್ಸಿ ನನ್ನನ್ನು ಸಂದರ್ಶಿಸಿದರು. ವಿದೇಶ ಪ್ರವಾಸ ಕೈಗೊಂಡ ಉದ್ದೇಶ, ಇಂದಿನ ಪರಿಸ್ಥಿತಿಯಲ್ಲಿ ಧರ್ಮದ ಅವಶ್ಯಕತೆ, ಧರ್ಮಗಳ ನಡುವೆ ಮಧುರಬಾಂಧವ್ಯ, ಯೋಗ-ಧ್ಯಾನ ಮುಂತಾದ ಅಧ್ಯಾತ್ಮಿಕ ಸಾಧನೆಗಳ ಮುಖಾಂತರ ಆತ್ಮ ಶಾಂತಿಯ ಗಳಿಕೆ, ಹಿಂದೂ ತತ್ತ್ವ ವಿಚಾರದ ವೈಶಿಷ್ಟ್ಯ, ಬಸವಣ್ಣನವರ ತತ್ತ್ವವಿಚಾರಗಳ ವಿಶೇಷ, ಅಕ್ಕಮಹಾದೇವಿಯ ಜೀವನದ ಔನ್ನತ್ಯ, ನಾನು ಈ ಅಧ್ಯಾತ್ಮಿಕ ಪಥಕ್ಕೆ ಬರಲು ಪ್ರೇರಣೆ, ಅಮೆರಿಕಾದಲ್ಲಿ ನೆಲೆಸಿರುವ ಭಾರತೀಯರ ಕರ್ತವ್ಯ-ಈ ಮುಂತಾಗಿ ವ್ಯಾಪಕವಾದ ಸಂದರ್ಶನ ನಡೆಯಿತು. ಅದು ಬಹಳ ಪರಿಣಾಮಕಾರಿಯಾಗಿ, ಸಮರ್ಪಕ ಪ್ರಶ್ನೋತ್ತರದಿಂದ ಕೂಡಿತ್ತೆಂದು ಅನೇಕ ವೀಕ್ಷಕರು ಅಭಿಪ್ರಾಯ ಪಟ್ಟರು. ಶಿವರಾತ್ರಿಯಂದು ಹಿಂದೂ ದೇವಾಲಯದಲ್ಲಿ ನಡೆದ ನನ್ನ ವಿಶೇಷ ಭಾಷಣ ಕಾರ್ಯಕ್ರಮಕ್ಕೆ ಪೂರ್ವಭಾವಿಯಾಗಿ ಈ ಸಂದರ್ಶನವನ್ನು ಪ್ರಸಾರಮಾಡಿ ಶ್ರೀಮತಿ ಸತ್ಯರವರು ಪ್ರಚಾರ ನೀಡಿದ್ದ ಕಾರಣ

ಸಭಿಕರು ಕಿಕ್ಕಿರಿದು ನೆರೆದಿದ್ದರು. ಅಂತೂ ಶಿವರಾತ್ರಿಯಂದಾದರೂ ಭಜನೆ, ಜಪತಪ ಮಾಡಬೇಕೆಂಬ ಪದ್ಧತಿಯನ್ನು ಜನರು ಉಳಿಸಿಕೊಂಡಿದ್ದಾರೆಂದು ತಿಳಿದು ಸಂತೋಷವಾಯಿತು.

ಸ್ಟುಡಿಯೋದ ಸಂದರ್ಶನ ಮುಗಿಸಿ ಮನೆಗೆ ಕರೆದೊಯ್ದರು. ಕ್ರಿಸ್‌ಮಸ್ ಬೇರೆ ಸಮೀಪಿಸುತ್ತಿದ್ದುದರಿಂದ ಮಕ್ಕಳು ಸಾಮಾನು ಖರೀದಿಸಲು ದುಂಬಾಲು ಬಿದ್ದಿದ್ದರು. ಹಾಗೆಯೇ ನನಗೂ ಒಂದು ಕೋಟಿನ ಅವಶ್ಯಕತೆ ಇದ್ದಿತು. ಡಿಸೆಂಬರ್ ತಿಂಗಳು ವಿಪರೀತ ಛಳಿ. ಕುಳಿರ್ಗಾಳಿ ಬೀಸುತ್ತಿದ್ದಂತೆಯೇ ಮೈನಡುಕ. ಇಲ್ಲಿಂದ ಒಯ್ದಿದ್ದ ಕೋಟು ಏನೂ ಪ್ರಯೋಜನವಾಗುತ್ತಿರಲಿಲ್ಲ. "ಎದೆಗೆ ಶೀತಲಗಾಳಿಯ ತಾಡನವಾದರೆ ಅನೇಕ ರೋಗರುಜಿನಗಳು ಬರುತ್ತವೆ. ಆಷ್ಟು ಬೇಗ ಕೊಳ್ಳುವುದೊಳ್ಳಿತು. ನಾನು ಕೊಡಿಸುತ್ತೇನೆ ಬನ್ನಿ. ಯಾರಾದರೂ ಸೈಜು ನೋಡಿಕೊಂಡು ತರಬಹುದು. ಆದರೆ ನೀವೊಮ್ಮೆ ಅಂಥ ಮಳಿಗೆ ನೋಡಬೇಕು. ಕ್ರಿಸ್‌ಮಸ್ ವೇಳೆಯಲ್ಲಂತೂ ವಿಶೇಷವಾಗಿ ಸ್ಪರ್ಧಾತ್ಮಕ ಅಲಂಕಾರ ಮಾಡಿರುತ್ತಾರೆ. ನಮ್ಮ ದೇಶದ ದೊಡ್ಡ ದೊಡ್ಡ ವಸ್ತು ಪ್ರದರ್ಶನಾಲಯಗಳನ್ನು ಮೀರಿಸುತ್ತವೆ" ಎಂದು ಶ್ರೀಮತಿ ಸತ್ಯ ಕರೆದೊಯ್ದರು. ಮ್ಯಾಸೀಸ್ ಸೆಂಟರ್ ಎಂಬ ಜಗತ್ಪ್ರಸಿದ್ಧ, ಬೃಹತ್ ಮಳಿಗೆಯದು ಕ್ರಿಸ್‌ಮಸ್ ವೇಳೆ ಕಿಕ್ಕಿರಿದು ನೆರೆದ ಜನ; ಇರುವೆಗಳಂತೆ ಸಾಲುಗಟ್ಟಿದ ಕಾರುಗಳು ನಿಲುಗಡೆಗೊಂದು ತಾಣ ಹುಡುಕಿಕೊಳ್ಳಲು ಕಷ್ಟವಾಯಿತು. ಹೀಗಾಗಿ ದೂರದಲ್ಲಿ ಕಾರು ಬಿಟ್ಟು ಮಳಿಗೆಯನ್ನು ಹೊಕ್ಕುದಾಯಿತು. ನಮ್ಮ ದೇಶದ ಅರಮನೆಗಳನ್ನು ಮೀರಿಸುವಂತಹ ಬೃಹತ್ ಕಟ್ಟಡ, ಹಲವಾರು ಸ್ವಯಂಚಾಲಿತ ಬಾಗಿಲುಗಳು. ಒಳಗೆ ವಿವಿಧ ಅಂಗಡಿಗಳು, ಎಲ್ಲ ಬಗೆಯ ವಸ್ತುಗಳೂ ಅಲ್ಲಿ ಲಭ್ಯ. ಬಟ್ಟೆ, ತಿಂಡಿ, ಮಕ್ಕಳಾಟಿಗೆ, ಪುಸ್ತಕಗಳು, ವಜ್ರಾಭರಣಗಳು ಹೀಗೆ ಅಲ್ಲಿ ದೊರೆಯದ ವಸ್ತುಗಳೇ ಇಲ್ಲ.

ತಳ್ಳುವ ಗಾಡಿಯಲ್ಲಿ ಮಗುವನ್ನು ಕೂರಿಸಿಕೊಂಡು ತೀವ್ರವಾಗಿ ಹೆಜ್ಜೆ ಹಾಕುತ್ತಾ ಸತ್ಯ ಹೊರಟರು. ನುಣುಪಾದ ಫಳಫಳನೆ ಹೊಳೆಯುವ ನೆಲದ ಮೇಲೆ ಅದೂ ಹೊಸದಾಗಿ ತೊಟ್ಟುಕೊಳ್ಳುತ್ತಿದ್ದ ಭಾರತದಲ್ಲಿ ಕೊಂಡ ಬೂಟುಗಳನ್ನು ಹಾಕಿಕೊಂಡು ನಡೆಯಲು ಸಾಧ್ಯವಿಲ್ಲದೆ ನಾವು ಹಿಂದುಳಿಯಬೇಕಾಯಿತು. ಹೀಗಾಗಿ ಅವರು-ನಾವು ಬೇರೆ ಬೇರೆಯಾದೆವು. ಹುಡುಕಿಕೊಂಡು ಅಲೆದರೂ ಪರಸ್ಪರ ಸಿಕ್ಕಲಿಲ್ಲ. ದಿಕ್ಕು ತೋಚದಂತಾಗಿ ಕಾರಿನ ಬಳಿ ನಿಲ್ಲೋಣವೆಂದು ಅಂಗಡಿಯಿಂದ ಹೊರಬಂದುದಾಯಿತು. ಕಪ್ಪು ಇರುಳು, ಸಹಸ್ರಸಂಖ್ಯೆಯಲ್ಲಿ ಕಾರುಗಳು, ಭಯಂಕರವಾಗಿ ಬೀಸಿ, ರಕ್ತ ಹೆಪ್ಪುಗಟ್ಟಿಸುವ ಛಳಿಗಾಳಿ.

(ಸಶೇಷ)

ಮಹರ್ಷಿ ಶ್ರೀ ಅರವಿಂದರು

ತ್ರಿನೇತ್ರಿ

ಮಹರ್ಷಿ ಶ್ರೀ ಅರವಿಂದರು ಈ ಶತಮಾನದ ಶ್ರೇಷ್ಠ ದಾರ್ಶನಿಕರು, ತತ್ತ್ವಜ್ಞಾನಿಗಳು ಮತ್ತು ಯೋಗಿಗಳು. ಆಗಸ್ಟ್ 15, 1872 ರಂದು ಕಲ್ಕತ್ತದಲ್ಲಿ ಜನ್ಮತಳೆದ ಶ್ರೀ ಅರವಿಂದರು ಏಳನೆಯ ವಯಸ್ಸಿನ ಬಾಲಕನಾಗಿದ್ದಾಗಲೇ, ಶಿಕ್ಷಣಕ್ಕೆಂದು ಇಂಗ್ಲಂಡಿಗೆ ಕಳುಹಿಸಲ್ಪಟ್ಟರು. ಪ್ರತಿಭಾವಂತ ವಿದ್ಯಾರ್ಥಿಯಾಗಿ ಗ್ರೀಕ್, ಲ್ಯಾಟಿನ್, ಇಂಗ್ಲಿಷ್, ಫ್ರೆಂಚ್‌ಗಳಲ್ಲಿ ಅಪೂರ್ವ ಪಾಂಡಿತ್ಯವನ್ನು, ಜರ್ಮನ್, ಇಟಾಲಿಯನ್ ಮತ್ತು ಸ್ಪಾನಿಷ್ ಭಾಷೆಗಳಲ್ಲಿ ತಿಳುವಳಿಕೆಯನ್ನೂ ಪಡೆದರು. ಇಂಡಿಯನ್ ಸಿವಿಲ್ ಸರ್ವಿಸ್ ಪರೀಕ್ಷೆಯ ಎಲ್ಲ ವಿಷಯಗಳಲ್ಲಿಯೂ ಉತ್ತಮ ಅಂಕಗಳನ್ನು ಪಡೆದರೂ, ಮನಸ್ಸಿನ ಒಲವು ಭಾರತೀಯತ್ವದ ಕಡೆಗೆ ಹರಿದುದರಿಂದ ಕುದುರೆ ಸವಾರಿ ಸ್ಪರ್ಧೆಯಲ್ಲಿ ಭಾಗವಹಿಸದೇ ಉಳಿದರು. 1893ರಲ್ಲಿ ಮಾತೃಭೂಮಿಗೆ ಮರಳಿ, ಬರೋಡ ರಾಜ್ಯದಲ್ಲಿ ಹದಿಮೂರು ವರ್ಷಗಳ ಕಾಲ ಸೇವೆ ಸಲ್ಲಿಸಿದರು. ಈ ಅವಧಿಯಲ್ಲೇ ಅವರ ಅಧ್ಯಾತ್ಮಿಕ ಒಲವು, ರಾಷ್ಟ್ರಭಕ್ತಿ ಉದ್ದೀಪನಗೊಂಡವು. ಸಂಸ್ಕೃತವನ್ನೇ ಅಲ್ಲದೆ ಇತರ ಭಾರತೀಯ ಭಾಷೆಗಳನ್ನೂ ಕಲಿತರು, ಅಮೂಲ್ಯವಾದ ದಿವ್ಯದರ್ಶನವನ್ನೂ ಪಡೆದರು.

ಬರೋಡಾ ರಾಜ್ಯ ಸರ್ಕಾರದ ಸೇವಾವೃತ್ತಿಯನ್ನು 1906ರಲ್ಲಿ ತೊರೆದು, ಬಂಗಾಳಕ್ಕೆ ಹೋಗಿ ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿ ನೇರವಾಗಿ ಕಣಕ್ಕೆ ಇಳಿದರು. ನಾಡಿನ ಸ್ವಾತಂತ್ರ್ಯವು ಪ್ರಜೆಯ ಜನ್ಮಸಿದ್ಧ ಹಕ್ಕೆಂದು ಉಗ್ರವಾದಿಗಳಾಗಿ ಹೋರಾಡಿದರು. 1908ರಲ್ಲಿ ಬ್ರಿಟಿಷ್ ರಾಜಷಾಹಿಯು ಅಲಿಪುರ ಪ್ರಕರಣದಲ್ಲಿ ರಾಜದ್ರೋಹಿ ಎಂದು ಅವರಿಗೆ ಆರೋಪ ನೀಡಿತು. ಒಂದು ವರ್ಷಕಾಲ ಬಂಧನದಲ್ಲಿರಿಸಿತು ಆ ಬಂಧನವು ಶ್ರೀ ಅರವಿಂದರ ಅಂತರ್ಮುಖ ಜೀವನಕ್ಕೆ ಪ್ರೇರಣೆ ನೀಡಿತು. ಅವರು ಹೆಚ್ಚು ಹೆಚ್ಚಾಗಿ ಅಂತರ್ಮುಖಿಗಳಾಗಿ ಯೋಗಾಭ್ಯಾಸದಲ್ಲಿ ತೊಡಗಿದರು. ಕೋಶಾವಸ್ಥೆಯನ್ನು ಪ್ರವೇಶಿಸಿದ ಚಿಟ್ಟೆಯು, ತನ್ನ ಮುನ್ನಿನ ಕುರೂಪವನ್ನು ಕಳೆದುಕೊಂಡು ನೂತನ ಬಣ್ಣಬಣ್ಣದ ರೆಕ್ಕೆಗಳನ್ನು ಹೊಂದುವಂತೆ, ಈ ಬಂಧನದ ಅವಸ್ಥೆಯು ಅರವಿಂದರ ವ್ಯಕ್ತಿತ್ವವನ್ನು ವಿರಾಟ್ ರೂಪದಲ್ಲಿ ಬೆಳೆಸಿತು. ಆಗಲೇ ಅವರು ಶ್ರೀ ಕೃಷ್ಣನ ಸಾಕ್ಷಾತ್ಕಾರವನ್ನು ಮತ್ತು ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಿದುದು. ಪಾಲುಂಡು ಮೇಲುಂಬರೇ ? ಎಂಬಂತೆ ಈ ದಿವ್ಯಾನುಭೂತಿಯನ್ನು

ಪಡೆದಾದ ಬಳಿಕ ಅವರ ಮನ ರಾಜಕೀಯದಲ್ಲಿ ಇಳಿಯಲಿಚ್ಛಿಸಲಿಲ್ಲ. ದೈವೀಕರೆಗೆ ತಲೆಬಾಗಿ ರಾಜಕೀಯದಿಂದ ನಿವೃತ್ತರಾದರು.

1910ರಲ್ಲಿ ಶ್ರೀ ಅರವಿಂದರು ಪಾಂಡಿಚೆರಿಗೆ ಬಂದರು. ನಾಲ್ಕು ವರ್ಷಗಳ ಕಾಲ ಆಳವಾದ, ಉತ್ಕಟ ಸಾಧನೆಯಲ್ಲಿ ತೊಡಗಿದರು. 1914ರಲ್ಲಿ 'ಆರ್ಯ' ಎಂಬ ತಾತ್ತ್ವಿಕ ಮಾಸಪತ್ರಿಕೆ ನಡೆಸತೊಡಗಿದರು. ಅವರ ತಾತ್ತ್ವಿಕ, ದಾರ್ಶನಿಕ, ಸಾಹಿತ್ಯಿಕ ಕೃತಿಗಳು ಧಾರ್ಮಿಕ ಪ್ರಪಂಚದಲ್ಲಿ ಗೌರಿಶಂಕರ, ವಿಂಧ್ಯ ಪರ್ವತಗಳಂತ ಹವು. ದಿವ್ಯ ಜೀವನ, ಗೀತೆಯನ್ನು ಕುರಿತು ಬರೆದ ಪ್ರಬಂಧಗಳು, ವೇದಗಳನ್ನು ಕುರಿತ ವಿಚಾರಗಳು, ಮಾನವ ಕುಲದ ಭಾವೈಕ್ಯತೆ, ಸಮನ್ವಯ ಯೋಗ ಮುಂತಾದ ಉದ್ದಾಮ ಕೃತಿಗಳೆಲ್ಲ ಈ ಪತ್ರಿಕೆಯ ಮೂಲಕವೇ ಹೊರಗೆ ಬಂದವು. ಅವರ ಜೀವನದ ಮಹತ್ಸಾಧನೆಯಾದ 'ಸಾವಿತ್ರಿ' ದಾರ್ಶನಿಕ ಪ್ರಪಂಚದ ಕೋಹಿನೂರ್.

1910ರಿಂದ, ತಮ್ಮ ದೇಹವನ್ನು 1950ರಲ್ಲಿ ತೊರೆಯುವ ವರೆಗೆ ಮುಂದೆ ಶ್ರೀ ಅರವಿಂದರು ಅಂತರ್ಮುಖಿಗಳಾಗಿ, ಏಕಾಂತ ಪ್ರಿಯರಾಗಿ, ಸಾಧನಾಸಕ್ತರಾಗಿ ಉಳಿದರು. ಆದರೂ ಬಹಿರಂಗ ಜಗತ್ತಿನಲ್ಲಿ ನಡೆಯುತ್ತಿದ್ದ ಆಗುಹೋಗುಗಳ ಬಗೆಗೆ, ಭಾರತದಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ ಬಗೆಗೆ ಗಮನವಿಡದೆ ಇರಲಿಲ್ಲ. ಮಹಾತ್ಮ ಗಾಂಧಿಯವರು ಕ್ರಿಯಾತ್ಮಕವಾಗಿ ಕೈಗೊಂಡಿದ್ದ ಹೋರಾಟಕ್ಕೆ, ತಮ್ಮ ಸಂಕಲ್ಪ-ತಪಸ್ಸುಗಳ ಶಕ್ತಿಯನ್ನು ಧಾರೆ ಎರೆಯುತ್ತಿದ್ದರು. ದೈವಭಕ್ತಿ-ದೇಶಭಕ್ತಿ ಒಂದು ನಾಣ್ಯದ ಎರಡು ಮುಖಗಳೆಂದರಿದು ಮಾತೃಭೂಮಿಯ ಬಿಡುಗಡೆಗಾಗಿ ತಪಸ್ಸು ಮಾಡುತ್ತಿದ್ದರು.

ದೈವಲೀಲೆ ವಿಚಿತ್ರ ; ಅದರ ಯೋಜನೆ ಅಪಾರ : ಯಾರ್ಯಾರನ್ನೋ ಯಾವಾವಾಗಲೋ ತಂದು ಬೆಸೆಯುವುದು ; ಬೇರ್ಪಡಿಸುವುದು. ಇನ್ನೂ ಸೀಮೆ ಸಂಬಂಧಗಳಲ್ಲಿ ನಿಂತು ವಿಚಾರಮಾಡುವ ಮನುಷ್ಯ ಇದೇಕೆ ಹೀಗಾಯಿತು ಎಂದು ಅಚ್ಚರಿ ಪಡುವನು, ದಿಗ್ಭ್ರಾಂತನಾಗುವನು, ಇಲ್ಲವೇ ದುಃಖಿತನಾಗುವನು. ಆದರೆ ಶರಣಾಗತರನ್ನು ರಕ್ಷಿಸುವ ಹೊಣೆಗಾರಿಕೆ ಹೊತ್ತ ಆ ಸಾರ್ವಭೌಮನು ತನ್ನದೇ ಆದ ರೀತಿಯಲ್ಲಿ ಎಲ್ಲವನ್ನು ನಿಯಂತ್ರಿಸುವನು, ನಿಯೋಜಿಸುವನು. ಪ್ರಭುದೇವರು ಗುರುಕಾರುಣ್ಯವಾದ ಮೇಲೆ "ಎತ್ತಣ ಮಾಮರ ಎತ್ತಣ ಕೋಗಿಲೆ" ಎಂದು ಅಚ್ಚರಿಪಡುವಂತೆ, ಶ್ರೀ ಮಾತೆಯವರ ಆಗಮನವಾಯಿತು ಶ್ರೀ ಅರವಿಂದರ ಬಾಳಿನಲ್ಲಿ. ಲೋಕದ ಕಣ್ಣಿಗೆ ಪುರುಷ-ಸ್ತ್ರೀಯರಿದ್ದಿರಬಹುದು. ಆದರೆ ಮಾತೆಯವರ ಆಗಮನ ಆ ವರೆಗೆ 'ಸ್ವಯಂಭು' ವಾಗಿದ್ದ ಅರವಿಂದರ ಶಕ್ತಿಗೆ ವಿದ್ಯುತ್ ಚಾಲನೆ ಕೊಟ್ಟಿತು. ಜ್ಞಾನಶಕ್ತಿ

ಯಾಗಿದ್ದ ಅವರ ಬಾಳಿಗೆ ಈ ಕ್ರಿಯಾಶಕ್ತಿಯ ಸಂಯೋಜನೆಯಾಗುವುದೇ ತಡ ಅದ್ಭುತ ಯೋಜನೆಯೊಂದು ಇಳೆಯಲ್ಲಿ ಮೈದಳೆಯಿತು. ಶ್ರೀ ಅರವಿಂದರ 'ದರ್ಶನ' ವನ್ನು ಸಾಕಾರಗೊಳಿಸುವ ಕ್ರಿಯಾಮೂರ್ತಿಯಾಗಿ ಮಾತೆಯವರು ನಿಂತರು. ಫೆಬ್ರುವರಿ 21, 1878 ರಲ್ಲಿ ಹುಟ್ಟಿದ ಮಾತೆಯವರು ಜನ್ಮತಃ ಫ್ರಾನ್ಸಿನವರು 1914 ಮಾರ್ಚಿ 29 ರಂದು ಪಾಂಡಿಚೆರಿಗೆ ಆಗಮಿಸಿದರು. ಜಾಗತಿಕ ಪ್ರಥಮ ಯುದ್ಧದ ಅಂಗವಾಗಿ ಶ್ರೀಮಾತೆಯವರು ಫ್ರಾನ್ಸಿಗೆ ಮರಳಬೇಕಾಯಿತು. ಆದರೆ 1920, ಏಪ್ರಿಲ್ 24ರಂದು ಭಾರತಕ್ಕೆ ಸ್ಥಿರವಾಗಿ ನೆಲೆಸಲು ಪುನಃ ಬಂದರು.

ಶ್ರೀ ಅರವಿಂದರು ಮತ್ತು ಶ್ರೀಮಾತೆಯವರು ಜ್ಞಾನ-ಕ್ರಿಯಾ ಶಕ್ತಿಗಳ ಸಂಗಮವಾಗಿ ವಿಶೇಷ ಕಾರ್ಯಕ್ಕೆ ಸನ್ನದ್ಧರಾದರು. ಅದುವೇ ನೂತನ ವಿಶ್ವದ ರಚನೆ, ಭೌತಿಕ ವಿಶ್ವವಲ್ಲ ಆಧ್ಯಾತ್ಮಿಕ-ನೈತಿಕ ವಿಶ್ವ ! ಹೊಸ ಜನಾಂಗವನ್ನು ರೂಪಿಸುವ ಕನಸನ್ನು ಕಂಡರು. ದೈವಪ್ರಜ್ಞೆಯನ್ನು ರೂಢಿಸಿಕೊಂಡ, ಅಂಗಗತ ಮಾಡಿಕೊಂಡ ನವ ಮಾನವ ಕುಲದ ಕನಸು ಕಂಡರು. ಇದು ಒಂದು ಸಮುದಾಯದ ಆದರ್ಶ, ಸಮುದಾಯದಿಂದಲೇ ಸಾಧಿಸಬಲ್ಲಂಥಾದ್ದು. ಇಂಥ ಕಲ್ಪನೆಯನ್ನು, ಕನಸನ್ನು ದಿಟ ಮಾಡಲು ಆಶ್ರಮ ಸ್ಥಾಪನೆಗೆ ಕೈಹಾಕಿದರು.

ತಮ್ಮ ಸಿದ್ಧಾಂತ, ವಿಚಾರ, ಆಶೆ-ಆಕಾಂಕ್ಷೆಗಳು ಜೀವಂತ ರೂಹು ತಳೆಯುವಂತೆ ಮಾಡಲೋಸುಗ ಆರೋವಿಲ್ಲೆ ಎಂಬ ಅಂತರರಾಷ್ಟ್ರೀಯ ನಗರದ ಯೋಜನೆ ಹಾಕಿದರು. ಆತ್ಮ-ದೇಹಗಳ ಸಾಮರಸ್ಯ, ಜಡ-ಚೇತನಗಳ ಸಂಗಮ, ಸ್ವರ್ಗ-ಪೃಥ್ವಿಗಳ ಸಂಯೋಗ ಅವರ ವಿಚಾರಧಾರೆಯ ಗುರಿ. ಜಗತ್ತಿನ ಎಲ್ಲ ಮಾನವರು ರಾಷ್ಟ್ರ, ವರ್ಣ, ವರ್ಗ, ಜಾತಿ, ಮತ, ಭಾಷೆಗಳ ಭೇದವಿಲ್ಲದೆ ಸಂಪೂರ್ಣ ಹೊಂದಾಣಿಕೆಯಿಂದ ಬಾಳಿ, ಮಹತ್ತನ್ನು ಇಳೆಗಿಳಿಸಬೇಕೆಂಬ ಆಕಾಂಕ್ಷೆ ಅವರದಾಗಿತ್ತು. 1960ರಲ್ಲಿ ಆರೋವಿಲ್ಲೆಯ ಭೂಮ ಯೋಜನೆ-ಅರವಿಂದರ ಕನಸಿನ ಲೋಕವನ್ನು. ಇಳೆಗಿಳಿಯಲು ನೂತನ ಯೋಜನೆ ಆರಂಭವಾಯಿತು. ಅದು ಪೂರ್ಣಗೊಳ್ಳುವ ಮುನ್ನವೇ ಶ್ರೀ ಮಾತೆಯವರ ದೇಹಾವಸಾನವಾಯಿತು. ಅವರ ಅನೇಕ ಆಶೋತ್ತರ, ಕನಸುಗಳೂ ಅವಸಾನವಾಗಿರಲು ಸಾಕು !

ಯಾವುದೇ ರುಚಿ, ಬಣ್ಣಗಳಿರದ ಮೋಡದ ನೀರು ನೆಲವನ್ನು ಮುಟ್ಟುತ್ತಿದ್ದಂತೆಯೇ ನೆಲದ ಗುಣ, ಮಲಿನ ವಾಯುವಿನ ಕಲಂಕ, ಎಲ್ಲ ಹೊಂದಿ ತನ್ನ ನಿಜರೂಪ ಕಳೆದುಕೊಳ್ಳುವಂತೆ, ಮಹಾತ್ಮರ ಅಪೂರ್ವ ವಿಚಾರಧಾರೆಗಳು ದುರ್ಬಲ ಮಾನವರ ಸಂಪರ್ಕದಿಂದ ಕಲಂಕಿತಗೊಳ್ಳುತ್ತವೆ. ಕಾಮ-ಕ್ರೋಧದ ಕೆಸರು, ಲೋಭ-

ಮೋಹ–ಸ್ವಾರ್ಥಗಳ ಮಾಲೀನ್ಯ, ಮದ-ಮತ್ಸರ, ಅಹಂಕಾರ-ಅಭಿಮಾನ, ಕೀರ್ತಿ ಲಾಲಸೆಗಳ ಕಾಮನೆ ಸಾಧಕರಿಗೆ ಗಂಟುಬೀಳುತ್ತಿದ್ದಂತೆಯೇ ಅವರಿಗೆ ತಮ್ಮ ತಮ್ಮದೇ ಚಿಂತೆ. ಆಶ್ರಮದ ಬೆಳವಣಿಗೆ, ಸಂಸ್ಥಾಪಕರ ಧ್ಯೇಯೋದ್ದೇಶ ನನಸು ಮಾಡುವ ತ್ಯಾಗಪ್ರಜ್ಞೆ, ಸಮುದಾಯದ ಹಿತವನ್ನು ಚಿಂತನೆ ಮಾಡುವುದಕ್ಕೆ ಇನ್ನು ವೇಳೆ ಇನ್ನೆಲ್ಲಿ ಅವರಿಗೆ? ಹೀಗಾಗಿ ಆದರ್ಶಗಳ ಕನಸು ಹೊತ್ತು ಸಂಸ್ಥಾಪಿತವಾದ ಆಶ್ರಮಗಳ ಬೆಳವಣಿಗೆ ಕುಂಠಿತವೇ ಆಗಿಬಿಡುತ್ತದೆ. ಅಂಥದೇ ಪರಿಸ್ಥಿತಿ ಒದಗಿದೆ ಎಂಬ ಊಹಾಪೋಹ. ಇದನ್ನು ತಪ್ಪಿಸಲು ಕೇಂದ್ರ ಸರ್ಕಾರದ ಮಧ್ಯಪ್ರವೇಶ ಈಗಾಗಿದೆ. ಆದರೂ ನಿರಾಶರಾಗಬೇಕಾಗಿಲ್ಲ. ಶ್ರೀ ಅರವಿಂದರ, ಶ್ರೀ ಮಾತೆಯವರ ಸಾನ್ನಿಧ್ಯದಲ್ಲಿ ಒಡನಾಡಿಗಳಾಗಿ ಇದ್ದುಕೊಂಡು ತ್ಯಾಗ–ಶ್ರದ್ಧೆ–ಸೇವೆಗಳ ತ್ರಿವೇಣೀ ಸಂಗಮವಾಗಿರುವ ಅನೇಕ ಹಿರಿಯ ಚೇತನಗಳಲ್ಲಿವೆ. ಅವರೇ ಚಟುವಟಿಕೆ, ಜೀವಂತಿಕೆಗಳ ಕೇಂದ್ರಬಿಂದುಗಳು. ಆರೋವಿಲ್ಲೆ ಪೂರ್ಣವಾಗಲಿ ಆಗದಿರಲಿ, 'ಸ್ಥಾವರಕ್ಕಳಿವುಂಟು–ಜಂಗಮಕ್ಕಳಿವಿಲ್ಲ' ಎಂಬ ಬಸವವಾಣಿಯಂತೆ ಆರೋವಿಲ್ಲೆ ಸ್ಥಾವರ. ಶ್ರೀ ಅರವಿಂದರಿತ್ತ ಸಿದ್ಧಾಂತ–ವಿಚಾರಧಾರೆ ಜಂಗಮ. ಅದಕ್ಕೆ ಅಳಿವಿಲ್ಲ. ಇಂತಹ ಶ್ರೀ ಅರವಿಂದರು ಜನ್ಮಿಸಿದುದು ಭಾರತದ ಸ್ವಾತಂತ್ರ್ಯ ದಿನಾಚರಣೆಯಾಗಲಿದ್ದ ಆಗಸ್ಟ್ 15ರಂದು ಎಂಬುದು ಮಹತ್ತರ ಭವಿಷ್ಯ ಸೂಚಕ ಘಟನೆ.

ಅರವಿಂದರ ಕೆಲವು ವಿಚಾರಗಳು

೧. ಇಂಟಗ್ರಲ್ ಯೋಗದ ಗುರಿ ದೈವೀ ಪ್ರಜ್ಞೆಯೊಳಗೆ ಅಹಂ ಪ್ರಜ್ಞೆಯನ್ನು, ಜೀವೋಹಂ ಭಾವವನ್ನು ಕರಗಿಸುವುದು. ಅತಿ ಮಾನಸ ದೈವೀ ಪ್ರಜ್ಞೆಯನ್ನು ಮರ್ತ್ಯಕ್ಕೆ ಇಳಿಸಿ, ದೇಹ, ಪ್ರಾಣ, ಮನಗಳನ್ನು ದೈವೀಕರಣಗೊಳಿಸುವುದು.

[ಹೋಲಿಸಿ : (ಅ) ಅರಿವಿನ ತೃಪ್ತಿಗೆ ಅನುಭಾವವೇ ಆಶ್ರಯ ಲಿಂಗಾನುಭಾವದಿಂದ ನಿಮ್ಮ ಕಂಡು ಎನ್ನ ಮರೆದೆ ಕಾಣಾ ಕೂಡಲ ಸಂಗಮದೇವಾ.]

(ಆ) ತನು ನಿಮ್ಮದೆಂದ ಬಳಿಕ ಎನಗೆ ಬೇರೆ ತನುವಿಲ್ಲ
ಮನ ನಿಮ್ಮದೆಂದ ಬಳಿಕ ಎನಗೆ ಬೇರೆ ಮನವಿಲ್ಲ
ಧನ ನಿಮ್ಮದೆಂದ ಬಳಿಕ ಎನಗೆ ಬೇರೆ ಧನವಿಲ್ಲ
ಇಂತೀ ತ್ರಿವಿಧವು ನಿಮ್ಮದೆಂದರಿದ ಬಳಿಕ
ಎನಗೆ ಬೇರೆ ವಿಚಾರವುಂಟೆ ? ಕೂಡಲ ಸಂಗಮದೇವಾ ?

(ಇ) ರುದ್ರಲೋಕವ (Supramental Consciousness) ಮರ್ತ್ಯಲೋಕಕ್ಕೆ (Earth) ತಂದಾತ ನಮ್ಮ ಬಸವಣ್ಣ.

೨. ಜೀವನದ ಗುರಿ ಪರಮಾತ್ಮನ ಸಾಕ್ಷಾತ್ಕಾರ. ಅಂವರೆ ಆಧ್ಯಾತ್ಮಿಕ ಪರಮ ಸತ್ಯದ ಅನ್ವೇಷಣೆ ಮತ್ತು ಆಧ್ಯಾತ್ಮಿಕವಾದ ಬದುಕು ಆ ಗುರಿಯ ಸಾಧನೆಗೆ ಪ್ರಮುಖ ಮಾರ್ಗಗಳು. ತನ್ನಲ್ಲಿಯೇ ಇರುವ ಆ ಪರಮ ಚೇತನವನ್ನು ಕಂಡ ಬಳಿಕ ಚಿರವಾದ ಶಾಂತಿ, ಜ್ಯೋತಿ, ಪ್ರೀತಿ, ಶಕ್ತಿ, ಆನಂದಗಳು ನೆಲೆಗೊಂಡು ತಾನು ಪರಮಾತ್ಮನ ಒಂದು ಅವಯವ, ಅವನ ಕೈಯೊಳಗಣ ಒಂದು ಯಂತ್ರ ಎಂಬ ಭಾವ ಬಲಿಯುವುದು.

೩. ಮನುಷ್ಯನ ಹೃದಯವಷ್ಟೆ ಪರಿಶುದ್ಧವು, ದೈವೀಮಯವೂ ಆದರೆ ಸಾಲದು; ಬುದ್ಧಿಯೂ ಕೂಡ ಆಗಬೇಕು. ಅದಕ್ಕೆ ಭಕ್ತಿಯೊಡನೆ ಜ್ಞಾನವೂ ಬೇಕು. ತನ್ನ ಹೃದಯದ ಭಾವನೆಗಳನ್ನು ಬುದ್ಧಿಯ ವಿಚಾರಗಳನ್ನು ಕ್ರಿಯಾರೂಪಕ್ಕಿಳಿಸಬೇಕಾದರೆ ಸತ್ಕ್ರಿಯೆಯೂ ಬೇಕು. ಪೂರ್ಣಯೋಗದಲ್ಲಿ ಪುರುಷನು (ಆತ್ಮನು) ಪ್ರಕೃತಿಯಿಂದ ಬೇರೆಯಾದರಷ್ಟೇ ಸಾಲದು, ಅದನ್ನು ಸಾಧನವಾಗಿ ಮಾಡಿಕೊಂಡು ಮೇಲೇರಿ; ಅದನ್ನೂ ದೇವನಿಗೆ ಸಮರ್ಪಿಸಿ, ದೈವೀಕರಣಗೊಳಿಸಬೇಕು. ಆದ್ದರಿಂದ ಸಾಧಕನು ಯಾವುದಾದರೊಂದು ಅಂಶ ಕರ್ಮ, ಜ್ಞಾನ, ಭಕ್ತಿ–ಇವುಗಳಲ್ಲೊಂದರಿಂದ ಸಾಧನೆಯನ್ನು ಆರಂಭಿಸಿದರೂ ತನ್ನ ಯೋಗವು ಸಮಗ್ರವಾಗಬೇಕಾದರೆ ಉಳಿದವನ್ನು ಅಳವಡಿಸಿಕೊಳ್ಳಲೇಬೇಕು.

೪. ಪೂರ್ಣಯೋಗದ ಜೀವಾಳ ದೇವನಲ್ಲಿ ಶರಣಾಗತಿ. ಶರಣಾಗತಿಯ ಉತ್ಕಟತೆಯ ಮೇಲೆ ದೈವಾನುಗ್ರಹ ಹರಿದು ಬರುವುದು. ಅದು ಕೊಂಚ ಕೊಂಚ ಧಾರೈಸುತ್ತ ಹೋದಂತೆ ಜ್ಞಾನ, ಭಕ್ತಿ, ಕ್ರಿಯೆಗಳು ತುಂಬಿಕೊಳ್ಳುತ್ತ ಪ್ರಕೃತಿಯ ದೈವೀಕರಣ ಆರಂಭವಾಗುವುದು.

೫. ಶಾಂತವಾದ ಮನಸ್ಸು ಸಾಧನೆಗೆ ಸಹಕಾರಿ.

೬. ಶ್ರದ್ಧೆ, ನಿರಂತರ ಪ್ರಯತ್ನ ಅತ್ಯಾವಶ್ಯಕ. ಮೇಲಕ್ಕೇರುವ ಹಂಬಲವು ಉತ್ಕಟವಾಗಿರಬೇಕು ; ಆದರೆ ಉದ್ವಿಗ್ನ ಹೊಯ್ದಾಟ ಬೇಡ. ಹಂಬಲದ ಉತ್ಕಟತೆ ಮತ್ತು ಶಾಂತತೆಯಿಂದ ಅನುಭವವೂ ಉತ್ಕಟವಾಗುವುದು.

೭. ಆಸೆ–ಆಕಾಂಕ್ಷೆಗಳನ್ನು ದಮನ ಮಾಡಬಾರದು, ನಿರ್ಲಿಪ್ತತೆ ಉದಾಸೀನತೆಯಿಂದ ತಿರಸ್ಕರಿಸಬೇಕು. ಆಸೆಯ ಅಲೆ ಬಂದೆರಗುತ್ತಿದ್ದಂತೆಯೇ ಅದನ್ನು

ಶಾಂತವಾಗಿ ನಿರ್ಲಿಪ್ತವಾಗಿ, ಆದರೆ ಎಚ್ಚರಿಕೆಯಿಂದ ಗಮನಿಸಿ ಉದಾಸೀನತೆಯಿಂದ ತಿರಸ್ಕರಿಸಬೇಕು.

೬. ಸಾಧ್ಯವಾದಷ್ಟೂ ದೈವೀಶಕ್ತಿಗೆ ತನ್ನನ್ನು ತಾನು ಕೊಟ್ಟುಕೊಳ್ಳಬೇಕು. ದೈವೀಶಕ್ತಿ ಮೇಲೆ-ಕೆಳಗೆ, ಹೊರಗೆ-ಒಳಗೆ ಎಲ್ಲೆಡೆಯಲ್ಲೂ ತುಂಬಿರುತ್ತದೆ. ಹಾಗೆ ಇರುತ್ತದೆ ಎಂಬ ಅರಿವು ಬೇಕು. ಅದು ಅನುಗ್ರಹಿಸುತ್ತದೆಂಬ ನಂಬಿಗೆ ಬೇಕು. ದೈವೀಶಕ್ತಿಯ ಅನುಗ್ರಹವು ದೇಹ ಮನಸ್ಸುಗಳನ್ನು ಶಾಂತಿಯ ರೂಪದಲ್ಲೋ, ಬೆಳಕಿನ ರೂಪದಲ್ಲೋ, ಪರಮಾನಂದದ ರೂಪದಲ್ಲೋ ಪ್ರವಹಿಸಿ ಮೀಯಿಸಬಹುದು. ಆ ಅನುಗ್ರಹಕ್ಕಾಗಿ ಹಂಬಲಿಸಬೇಕು, ಮೊರೆಯಿಡಬೇಕು, ಪ್ರಾರ್ಥಿಸಬೇಕು, ಅವನನ್ನು ಕುರಿತು ಧ್ಯಾನಿಸಬೇಕು.

೭. ತನ್ನ ತಾನಾರೆಂದರಿಯುವ ಪ್ರಯತ್ನದಲ್ಲಿ, ಆತ್ಮ ಸ್ವರೂಪವನ್ನರಿಯುವುದು ಮಾತ್ರವೇ ಅಲ್ಲ, ತನ್ನ ಸ್ವಭಾವ ಗುಣಧರ್ಮಗಳನ್ನರಿಯುವುದೂ ಸಾಧ್ಯವಾಗುತ್ತದೆ. ಹಾಗೆ ಅರಿತಾಗ ತನ್ನ ಪ್ರವೃತ್ತಿಯನ್ನು, ನೈಸರ್ಗಿಕ ಗುಣಗಳನ್ನು ತಿದ್ದಿಕೊಳ್ಳಲೂ ಸಾಧ್ಯವಾಗುತ್ತದೆ.


೮. ನಂಬಿಕೆ ಅರಿವಿನ ಮೊದಲ ಮೆಟ್ಟಲು. ಆಗಿನ್ನೂ ಪರಮಸತ್ಯವನ್ನು ಗ್ರಹಿಸಿಕೊಳ್ಳಲು ಸಾಧ್ಯವಾಗಿರದಿದ್ದರೂ, ಅಂತಹ ಗ್ರಹಿಕೆಗೆ ಸಹಾಯಕಾರಿ ಹಂತ. ಕೇವಲ ಬುದ್ಧಿಯ ಬಲದಿಂದ ಸಾಧನೆಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ ಇಲ್ಲಿ ಅಂತರ್ಮನದ ಸ್ಫುರಣಾತ್ಮಕ ಜ್ಞಾನ ತುಂಬಾ ಸಹಾಯಕ. ★

(ಆಧಾರಿತ)

ಜ್ಞಾನದ ಸಾಧನಗಳು

ಕೆಲವು ವಿಷಯಗಳನ್ನು ತಿಳಿದವರಿಂದ ಕಲಿತು, ಇನ್ನು ಕೆಲವನ್ನು ಶಾಸ್ತ್ರಂಗಳನ್ನು ಶ್ರವಣ ಮಾಡುತ್ತ ತಿಳಿದು, ಸದಾಚಾರ ಸಂಪನ್ನರಾಗಿ ಇರುವವರ ಆಚರಣೆಯಿಂದ ಮತ್ತಷ್ಟು ಅರಿತು, ಸ್ವಯಂ ಚಿಂತನದಿಂದ ಇನ್ನಷ್ಟು ತಿಳಿದು, ಸಜ್ಜನರ ಸತ್ಸಂಗದಲ್ಲಿ ಒಡನಾಡಿ ಇನ್ನಷ್ಟು ತಿಳಿಯಲು ನರನು ಸರ್ವಜ್ಞನಾಗುತ್ತಾನೆ. ಹಲವು ಮೂಲಗಳಿಂದ ಸಂಪಾದಿಸಿದ ಜ್ಞಾನದಿಂದ ಮನುಷ್ಯನೂ ಉತ್ತಮಜ್ಞಾನಿಯಾಗುವನು.

—ಸೋಮೇಶ್ವರ ಕವಿ



ಮಾತಾಜಿ

೧. ಸಾರ್ಥಕ ಬದುಕಿನ ಬಗೆ

ಪೂಜೆಗೆ ಬಂದು ಕುಳಿತುಕೊಂಡವಳೇ ಬೆಂಕಿಕಡ್ಡಿಯನ್ನು ತೀಡಿ ಒಂದು ದೀಪವನ್ನು ಮತ್ತು ಊದಿನ ಕಡ್ಡಿಯನ್ನು, ಒಂದೇ ಬೆಂಕಿಕಡ್ಡಿಯಿಂದ ಹಚ್ಚಿದೆ. ಊದಿನ ಕಡ್ಡಿಯ ಬೆಂಕಿ ಆರಿರಲಿಲ್ಲ, ಕಡ್ಡಿ ಸುಡುತ್ತಿತ್ತು. ಸಿಕ್ಕಾಪಟ್ಟೆ ಸುಟ್ಟು ವ್ಯರ್ಥವಾಗುತ್ತಿದೆ ಎಂದರಿತು ಅದರ ಉರಿಯನ್ನು ಆರಿಸಿ, ಅದು ಶಾಂತವಾಗಿ ಸುಡಲಿಕ್ಕೆ ವ್ಯವಸ್ಥೆ ಮಾಡಿದೆ. ದೀಪ ಉರಿಯಬೇಕು. ಅದು ಉರಿದರೆ ಅದರ ಸಾರ್ಥಕತೆ. ಊದಿನ ಕಡ್ಡಿ ನಿಧಾನವಾಗಿ ಸುಡಬೇಕು. ಆಗ ಅದರ ಸಾರ್ಥಕತೆ. ಎರಡರ ಕರ್ತವ್ಯಗಳಲ್ಲಿ ಯಾವುದೂ ಮೇಲಲ್ಲ-ಕೀಳಲ್ಲ; ಶ್ರೇಷ್ಠವಲ್ಲ ಕನಿಷ್ಟವಲ್ಲ. ಹಾಗೆಯೇ ಸಾಧಕರು, ಸನ್ಯಾಸಿಗಳಲ್ಲಿಯೂ ಎರಡು ಬಗೆ. ಕೆಲವರಲ್ಲಿ ವಾಗ್ಮಿತ್ವ, ಧೈರ್ಯ ಇದ್ದಾಗ ಅವರನ್ನು ಪ್ರವಚನ ಬೋಧೆಯ ಮೂಲಕ ಸಮಾಜ ಜಾಗೃತಿಗೆ ಬಿಡುತ್ತೇವೆ. ಅಂತಹ ಧೈರ್ಯ, ವಾಗ್ಮಿತ್ವ ಇಲ್ಲದಾಗ ಅವರಲ್ಲಿರುವ ಶ್ರದ್ಧೆ, ನಿಷ್ಠೆಗಳು ಸದುಪಯೋಗವಾಗಲೆಂದು ಸಂಸ್ಥೆಯ ನಿರ್ಮಾಣಕಾರ್ಯಕ್ಕೆ ತೊಡಗಿಸುತ್ತೇವೆ. ಅವರು ಯಶಸ್ವಿಯಾಗಿ ಕಾಯಕ ಮಾಡುವರು. ಆದರೂ ಕೆಲವರು ತಮ್ಮನ್ನು ಪ್ರವಚನಕ್ಕೆ ಕಳಿಸಲಿಲ್ಲ ಎಂದು ಗುರುಗಳನ್ನು ದೂರುವರು. ಇಲ್ಲವೇ ತಮ್ಮಲ್ಲಿ ಪ್ರವಚನ ಹೇಳುವ ಶಕ್ತಿ ಇಲ್ಲವಲ್ಲ ಎಂದು ಕೊರಗುವರು, ಅಳುವರು. ಆದರೆ ಅವರಲ್ಲಿರುವ ಅಜ್ಞಾನವೇನೆಂದರೆ ಪ್ರವಚನ ಹೇಳುವುದು ಮಾತ್ರ ಶ್ರೇಷ್ಠ, ನಿಷ್ಠೆಯಿಂದ ಸಂಸ್ಥೆಯನ್ನು ಕಟ್ಟುವುದು ಅಲ್ಲ ಎಂಬ ನಂಬಿಗೆ. ಈ ನಂಬಿಕೆಯಿಂದಲೇ ಇಂದು ಹಿಂದೂ ಸಮಾಜವು ಶಿಥಿಲವಾಗಿದೆ. ಜ್ಞಾನಿಯಾದವನು ಕೇವಲ ವ್ರತಾನುಷ್ಠಾನಗಳಲ್ಲಿ ತೊಡಗಬೇಕೆಂದು ಕೆಲವರು, ಅಥವಾ ಬೋಧೆ ಮಾಡುತ್ತ, ನಮಸ್ಕಾರ-ಪುರಸ್ಕಾರಗಳನ್ನು ಪಡೆಯಬೇಕೆಂದು ಇನ್ನು ಕೆಲವರು ಹಂಬಲಿಸುತ್ತಾರೆಯೇ ವಿನಾ, ಜನಜಾಗೃತಿ, ಜನಸೇವೆ ಮಾಡುವುದು ಅತ್ಯಂತ ಪವಿತ್ರ ಸೇವೆ ಎಂಬ ತಿಳುವಳಿಕೆ ಬಹಳ ಕಡಿಮೆ: ಆದ್ದ

ರಿಂದಲೇ ಈ ಎರಡನೆ ನಂಬಿಕೆ ಹೆಚ್ಚಾಗಿ ರೂಢಿಸಿಕೊಂಡಿರುವ ಕ್ರೈಸ್ತ ಸಮಾಜದಲ್ಲಿ ಧರ್ಮಗುರುಗಳು ಧರ್ಮಪ್ರಚಾರ, ವಿದ್ಯಾದಾನ, ವೈದ್ಯಕೀಯ ಸೇವೆಯಲ್ಲಿ ತಲ್ಲೀನ ರಾಗಿ ಸೇವಾವ್ರತಿಗಳಾಗಿದ್ದಾರೆ. ಹಿಂದೂ ಸಮಾಜದಲ್ಲಿ ಆ ಕಾರ್ಯದಲ್ಲಿ ಬಹಳಷ್ಟು ಜನ ಆಸಕ್ತರಾಗಿಲ್ಲ.

೨. ಶಾಖ ರಕ್ಷಕ ಆವರಣ

ಒಂದು ಲೋಟ ಬಿಸಿಬಿಸಿಯಾದ ಹಾಲನ್ನು ಒಂದು ದಿನ ಸೇವಕಿ ತಂದಿಟ್ಟಳು. ಮೇಲೆ ಉಗಿಯಾಡುತ್ತಿದ್ದರೂ ಕೈ ಸುಡುತ್ತಿರಲಿಲ್ಲ. ಅದು ಸ್ಟೀಲಿನ ಲೋಟವೇ ಆದರೂ ಒಂದು ವಿಶೇಷ ಜೋಡಣೆಯನ್ನು ಪಡೆದಿತ್ತು. ಹೊರಗಡೆ ಒಂದು ಪದರ, ಒಳಗಡೆ ಇನ್ನೊಂದು ಪದರ. ಮಧ್ಯದಲ್ಲಿ ಪೊಳ್ಳುಭಾಗ. ಆ ಪೊಳ್ಳು ಭಾಗವೇ ಕೈಯನ್ನು ಸುಡದಂತೆ ಇಡುವುದು ಮಾತ್ರವಲ್ಲ; ಒಳಗಡೆಯ ಹಾಲಿನ ಬಿಸಿ ಬೇಗನೆ ಆರದಂತೆಯೂ ರಕ್ಷಿಸುವುದು. ಇದನ್ನು ಗಮನಿಸುತ್ತಾ ಒಂದು ವಿಚಾರ ಸ್ಫುರಿಸಿತು. ಸಾಧಕರ ಆಧ್ಯಾತ್ಮಿಕ ಜೀವನ, ಅಥವಾ ಆದರ್ಶಗಳ ಪಥದಲ್ಲಿ ನಡೆಯಬಯಸುವ ಓರ್ವ ವ್ಯಕ್ತಿಯ ಜೀವನದ ಆದರ್ಶಗಳ ಬಿಸಿ ಬೇಗನೇ ಹೊರಗಣ ಪರಿಸರದ ಪ್ರಭಾವಕ್ಕೆ ಒಳಗಾಗಿ ಆರಬಾರದೆಂದಿದ್ದರೆ ಶರಣರ ಸಂಗ, ಸತ್ಸಂಗದ ಒಂದು 'ಪೊಳ್ಳು ಭಾಗ' ಅತ್ಯಾವಶ್ಯಕ. ಒಂದೇ ಪದರದ ಲೋಟದಲ್ಲಿ ಬೇಗನೇ ಉಷ್ಣತೆ ಆರುವಂತೆ ಕಲುಷಿತ ವಾತಾವರಣದಲ್ಲಿ ಇಳಿದ ಸಾಧಕ ಬೇಗನೇ ತನ್ನ ಆದರ್ಶಗಳನ್ನು ಬಿಟ್ಟು ಬಿಡುವನು.

೩. ಅಂತರ್ಜಲದ ನಿರಂತರತೆ

ಈ ವರ್ಷ ವಿಲಕ್ಷಣ ಪರಿಸ್ಥಿತಿ ಅಖಂಡ ಭಾರತಕ್ಕೆ. ಒಂದೆಡೆ ಲಕ್ಷಾಂತರ ಮಂದಿ ಪ್ರವಾಹದ ಒತ್ತಡಕ್ಕೆ ಸಿಕ್ಕು ನಿರಾಶ್ರಿತರು. ಉತ್ತರ ಭಾರತದಲ್ಲಿ ಭಯಾನಕ ಮಳೆ, ಪ್ರವಾಹ. ದಕ್ಷಿಣದಲ್ಲಿ ಮಳೆಯೇ ಇಲ್ಲ. ಬೆಂಗಳೂರು ಸದಾ ಉತ್ತಮ ರೀತಿ ಯಲ್ಲಿ ಮಳೆ ಹೊಂದುವ ಪ್ರದೇಶ : ಆದರೆ ಈವರೆಗೂ ಸರಿಯಾದ ಮಳೆ ಬಿದ್ದಿಲ್ಲ. ಇದರಿಂದಾಗಿ ಹೊಲದಲ್ಲಿ ಬಿತ್ತನೆ ಮಾಡುವುದು ಅಸಾಧ್ಯವಾಗಿದೆ. ಕುಡಿಯುವ ನೀರು ನಮ್ಮ ಗಂಗೋತ್ರಿಯಲ್ಲಿ ಈ ವರ್ಷ ಸಾಕಾಗುತ್ತಿದೆ. ವಿದ್ಯಾರ್ಥಿಗಳ ಸಂಖ್ಯೆ ತೀರಾ ವಿಪುಲವಾದ್ದರಿಂದ ಭಾವಿಯನ್ನು ದಿನಕ್ಕೆರಡು ಬಾರಿ ಖಾಲಿ ಮಾಡಬೇಕಾಗುತ್ತಿದೆ. ಹೀಗಿರುವಾಗ ಇನ್ನು ಮುಂದಿನ ಬೇಸಿಗೆಯಲ್ಲಿ ಏನಾದೀತು ? ಮುಂದಿನ ವರ್ಷ ಸ್ವಾಭಾವಿಕವಾಗಿಯೇ ವಿದ್ಯಾರ್ಥಿಗಳ ಸಂಖ್ಯೆ ಏರುತ್ತದೆ. ಆಗ ನೀರನ್ನು ಒದಗಿಸುವು ದೆಂತು ? ಈ ವಿಚಾರದಿಂದಾಗಿ, ಒಂದು ಬೋರ್‌ವೆಲ್ ಹಾಕಿಸೋಣ ಎಂದು ಬ್ಯಾಂಕಿನ

ಸಾಲ ಪಡೆಯಲುದ್ದೇಶಿಸಿ, ಅಂತರ್ಜಲ ಶೋಧಕರನ್ನು ಕರೆತಂದೆವು. ಕೊಳವೆಭಾವಿ ತೋಡಬಹುದಾದ ಕೆಲವು ಜಾಗಗಳನ್ನು ಅವರು ತೋರಿಸಿದರು. ಬೇಸಿಗೆಯ ಕಾಲದಲ್ಲಿ ಕೆರೆಹಳ್ಳ ನದಿಗಳು ಬತ್ತಿದರೂ, ಅಂತರ್ಜಲವು ಸಹಸ್ರಾರು ವರ್ಷಗಳ ಸಂಗ್ರಹವಾಗಿ ರುವುದರಿಂದ ಬತ್ತದು ಎಂದು ಅದರ ವಿಜ್ಞಾನವನ್ನು ಹೇಳುತ್ತಾ ಹೋದರು. ಮಳೆ ಕಡಿಮೆಯಾದ ವರ್ಷ ಭೂಮಟ್ಟದ ಭಾವಿಯ ನೀರು ಹಿಂಗಿ ಹೋಗುತ್ತದೆ ; ಆದರೆ ಅಂತರ್ಜಲ ಬತ್ತದು. ನಿರಂತರವಾಗಿ ಹೊರಹೊಮ್ಮುತ್ತದೆ. ಇದನ್ನು ಆಲೋಚಿಸು ವಾಗ ನನಗೆ ಪಾಂಡಿತ್ಯ-ಪ್ರತಿಭೆಗಳ ವ್ಯತ್ಯಾಸ ಸ್ಫುರಿಸಿತು. ಭೂಮಿಯ ಮೇಲೆ ಬಿದ್ದ ನೀರನ್ನು, ಮೇಲ್ಪದರಗಳಲ್ಲಿ ಹರಿಯುವ ನೀರನ್ನು ಹೊಂದಿದ ಭೂಮಟ್ಟದ ತೆರೆದ ಭಾವಿ, ಮಳೆ ಕಡಿಮೆಯಾದಾಗ ಬತ್ತಿಹೋಗುವಂತೆ ಅನುಭವ ಜ್ಞಾನವಿಲ್ಲದೆ ಕೇವಲ ಅವರಿವರು ಮಾಡುವ ಪ್ರವಚನ, ಉಪನ್ಯಾಸ ಕೇಳಿ ಗಿಳಿಯಂತೆ ಕಲಿತು ಮಾತನಾಡು ವವರ ಪಾಂಡಿತ್ಯವೂ ಇಷ್ಟೆ. ಅನ್ಯರಿಂದ ಎರವಲು ಪಡೆದ ಜ್ಞಾನ ಬಹುಬೇಗ ಬತ್ತಿ ಹೋಗುತ್ತದೆ. ಅನುಭವ ಪ್ರಧಾನವಾದ ಪ್ರತಿಭಾತ್ಮಕವಾದ ಜ್ಞಾನವು ಅನಂತ ಜನ್ಮಗಳ ಸಂಸ್ಕಾರದ ಫಲವಾಗಿ ಅಂತರ್ಜಲದಂತೆ ಗುಪ್ತಗಾಮಿನಿಯಾಗಿರುವ ಕಾರಣ ಪ್ರತಿಭಾವಂತನು ಬಳಸಿದಷ್ಟೂ ಶಕ್ತಿಶಾಲಿಯಾಗಿ ಪುಟಿಯುತ್ತಾ ಹೋಗುತ್ತದೆ. ಮಳೆ ನೀರು ಬಿದ್ದಾಗ ಅದು ಶಿಲಾಪದರಗಳಲ್ಲಿ ಹಿಂಗುತ್ತಾ ಹೋಗಿ, ಗಟ್ಟಿಯಾದ ಮಾತೃ ಶಿಲೆಯ ಮೇಲೆ ಸೆಲೆಯಾಗಿ. ಗುಪ್ತಗಾಮಿನಿಯಾಗಿ ಹರಿಯತೊಡಗುತ್ತದೆ ಕೊಳವೆ ಭಾವಿಯನ್ನಿಳಿಸಿದಾಗ ಅದರ ಮುಖಾಂತರ ಈ ಗುಪ್ತಗಾಮಿನಿ ಸೆಲೆ ಪುಟಿಯುತ್ತದೆ. ಅದೇ ರೀತಿ ಅನಂತ ಜನ್ಮಗಳಲ್ಲಿ ಮಾನವಜೀವಿ ಸಂಗ್ರಹಿಸುವ ಸಂಸ್ಕಾರ, ಜ್ಞಾನ, ಪುಣ್ಯಗಳು 'ಜೀವ'ನ ಆಶ್ರಯದಲ್ಲಿ ತಂಗಿ, ಸಾಹಿತ್ಯ, ವಾಣಿ, ಕ್ರಿಯೆ – ಈ ಮುಖಾಂತರ ಹೊರಹೊಮ್ಮತೊಡಗುತ್ತದೆ. ★

ಕೈಯಲ್ಲಿ ಉತ್ತಮವಾದ ಕನ್ನಡಿ ಇದ್ದಾಗ ಮುಖವನ್ನು ನೋಡಿಕೊಳ್ಳಲು ಯಾರಾದರೂ ನೀರಿನ ನೆಳಲನ್ನು ಆಶ್ರಯಿಸುತ್ತಾರೆಯೆ ? ಕಾಮಧೇನುವೇ ಇದ್ದಾಗ ಗೊಡ್ಡಾಕಳನ್ನು ಸಾಕಲು ಯಾರಾದರೂ ಬಯಸುವರೆ? ಅಮೃತ ಸಮಾನವಾದ ಹಾಲನ್ನುಂಡ ಬಳಿಕ, ಮತ್ತಿನ್ನಾವ ಖಾದ್ಯವನ್ನಾದರೂ ಜನ ಬಯಸುವರೆ? ಮುದ್ದು ಮಾತನಾಡುವ ಗಿಳಿಗಿಂತಲೂ ಕಾಗೆಯ ಕಾಕಾರವದಲ್ಲಿ ಇಂಪಿರುವುದುಂಟೆ ? ನಾಟ್ಯ ಚತುರೆಯಾದ ಅಪ್ಸರೆಯ ನೃತ್ಯಕ್ಕಿಂತ ಡೊಂಬರ ಕುಣಿತ ಚೆಂದವಾಗಿರುವುದೆ? ವಿಶ್ವಾಸಿಕರಾದ ಸ್ನೇಹಿತರಿಗಿಂತಲೂ ಮಿಗಿಲಾದ ಮತ್ತೊಂದು ವಸ್ತು ಈ ಜಗತ್ತಿ ನಲ್ಲಿರುವುದುಂಟೆ ?

— ಸೋಮೇಶ್ವರ ಕವಿ

ನಿಸರ್ಗದ ಅದ್ಭುತಲೀಲೆ

ಮಾತಾಜಿ

೧. ಸಹಾಯಕ್ಕೆ ಕರೆ

ಬಸವ ಗಂಗೋತ್ರಿಯ ಪ್ರಸಾದ ನಿಲಯದ ವಿಶಾಲ ಮಂದಿರದಲ್ಲಿ ಸಂಜೆಯ ಪ್ರಾರ್ಥನಾ ಕಾರ್ಯಕ್ರಮ ನಡೆಯುತ್ತಿತ್ತು. ಪಕ್ಕದ ಹಸುಗಳ ಕೊಟ್ಟಿಗೆಯಿಂದ ಅಂಬಾ ಎನ್ನುವ ಅರಚುವಿಕೆ ಕೇಳಿತು. ಪೂಜ್ಯ ಗುರೂಜಿಯವರು ತಡೆಯಲಾಗದೆ "ನೋಡ್ರಿ, ಏಕೋ ಹಸುಗಳು ಕೂಗುತ್ತಿವೆ" ಎಂದು ಡೇರಿಯ ಕೆಲಸಗಾರರನ್ನು ಪ್ರಾರ್ಥನಾ ಸಭೆಯಿಂದ ಕಳುಹಿಸಿದರು. ನಂತರ ಪ್ರಾರ್ಥನಾ ಗೀತೆ ಮುಗಿಯುತ್ತಿದ್ದಂತೆಯೇ ಸಮಾಧಾನವಾಗದ ಕಾರಣ ತಾವೂ ಎದ್ದು ನಡೆದರು. ಹತ್ತು ನಿಮಿಷಗಳಲ್ಲಿಯೇ ಬಂದು "ಸಂತೋಷದ ಸುದ್ದಿ ; ಮುಕ್ತಾಯಕ್ಕ ಹೆಣ್ಣು ಕರು ಹಾಕಿದೆ." ಎಂದು ಹೇಳಿ ಮತ್ತೆ ಡೇರಿ ಕಡೆಗೆ ನಡೆದರು. ನಮ್ಮ ಪ್ರಾರ್ಥನೆ, ಮಂಗಲ ಮುಗಿಸಿ ನಾನೂ ಅತ್ತ ಹೋದೆ. ಅಲ್ಲೊಂದು ವಿಶೇಷ ವರದಿ ಕಾದಿತ್ತು. ನಮ್ಮ ಡೇರಿಗೆ ಮೊಟ್ಟ ಮೊದಲು ಬಂದ ಕರು ಮುಕ್ತಾಯಿ ; ಅದರ ತಾಯಿ ನೀಲಾಂಬಿಕೆ. ಬಸವ ಗಂಗೋತ್ರಿ ಉದ್ಘಾಟನೆ 8-10-78ರಂದು ; ಅಂದು ಇವರೀರ್ವರ ಆಗಮನ. ಅದೇ ಮುಕ್ತಾಯಿ ತುಂಬು ಗರ್ಭಿಣಿ. ಎಲ್ಲ ಹಸುಗಳ ಮಧ್ಯೆ ಕಟ್ಟಿದ್ದರು, ಅಲ್ಲೇ ಮಲಗಿತ್ತು. ಆದರೆ ನಿರಾಯಾಸವಾಗಿ ಚೊಚ್ಚಿಲ ಕರುವನ್ನು ಹಾಕಿಬಿಟ್ಟಿದೆ. ಅರ್ಧ ತಾಸು ಸಹ ಬೇನೆ ತಿಂದಿಲ್ಲ. ಕರು ಕೆಳಗೆ ಬಿದ್ದಿದೆ. ಡೇರಿ ಕೆಲಸಗಾರರೆಲ್ಲ ಪ್ರಾರ್ಥನಾ ಸಭೆಯಲ್ಲಿ ಇದ್ದುಬಿಟ್ಟಿದ್ದಾರೆ. ಅನನುಭವಿಯಾದ, ಚೊಚ್ಚಿಲು ಹೆರಿಗೆಯ ಮುಕ್ತಾಯಿಗೆ ತನ್ನ ಹಿಂದೆ ಬಿದ್ದ ಕರುವನ್ನು ನೆಕ್ಕಲೂ ಆಗಿಲ್ಲ. ಆದರೆ ಇದನ್ನು ಗಮನಿಸಿವೆ ಅದರ ಹಿಂದಿನ ಸಾಲಿನಲ್ಲಿ ಕಟ್ಟಿದ ಸಾವಿತ್ರಿ ಮತ್ತು ಕಲ್ಯಾಣಿ. ಅವುಗಳಿಗೆ ಇವೆಲ್ಲ ಅನುಭವ. ಆಗಲೇ ಎರಡು ಮೂರು ಕರು ಹಾಕಿವೆ. "ಯಾರಾದರೂ ಬನ್ನಿ, ಪಾಪು ಹುಟ್ಟಿದೆ...." ಎಂಬ ಸೂಚನೆ ಕೊಡಲೋಸುಗ ದೊಡ್ಡದನಿ ತೆಗೆದು ಕೂಗಿವೆ. ಆಗ ಇವರೆಲ್ಲ ಬಂದಿದ್ದಾರೆ. ಆ ಮೇಲ್ವಿಚಾರಕ ಅನುಭವಿ ಹಸುಗಳ ವರ್ತನೆ ಕಂಡು ಅಗಾಧ ವಿಸ್ಮಯ ನಮಗೆ. ವಿನಾ ಕಾರಣ ಕೂಗುವ ಹಸುಗಳೇ ಅಲ್ಲ. ಎರಡೂ ದನಿ ತೆಗೆದು ಕೂಗಿದಾಲೇ ನಮಗೆ ಬಹಿಪ್ರ್ರಜ್ಞೆ. ಪ್ರಾಣಿಗಳಿಗೆ ದೇವರು ಬಾಯಿ, ಮಾತನಾಡುವ ಶಕ್ತಿ ಕೊಟ್ಟರದಿದ್ದರೂ ಅವುಗಳ ಸಂವೇದನಾ ಶೀಲತೆ ಕಂಡು ನಮಗೆ

ಆಶ್ಚರ್ಯ! ಅವುಗಳ ಸೂಚನೆಯಿಂದಲೇ ಬಂದು, ಹಾಲು ಹಿಂಡಿ ಕರುವಿಗೆ ಕುಡಿಸಿ, ಅದಕ್ಕೆ "ಶಿವಾಂಬಿಕ್ಕೆ" ಎಂದು ನಾಮಕರಣ ಮಾಡಿದೆವು.

೨. ಇನ್ನೊಂದು ಪ್ರಸಂಗ

ನಾವಿನ್ನೂ ಬಾಲ್ಯದಲ್ಲಿದ್ದೆವು. ರಜೆ ಬಂದ ತಕ್ಷಣ ಪಟ್ಟಣವಾಸ ಬೇಡವೆನಿಸಿ ಸಾಸಲ ಹಟ್ಟಿ ಎಂಬ ಹಳ್ಳಿಗೆ ಹೋಗುತ್ತಿದ್ದೆವು. ಅಲ್ಲಿಯ ತೋಟಗಳು, ಹುಣಸೆ ಗಿಡ ಎಲ್ಲ ತುಂಬ ಪ್ರಿಯ. ಮುಖ್ಯ ಆಕರ್ಷಣೆ ವೀರಮ್ಮಜ್ಜಿ ಎಳ್ಳು ಹಾಕಿ, ಗರಿಗರಿಯಾಗಿ ಮಾಡಿಕೊಡುತ್ತಿದ್ದ ಸಜ್ಜೆಯ ರೊಟ್ಟಿ, ಹರಳು ಹರಳಾದ ಗಮಗಮ ವಾಸನೆಯ ಗಟ್ಟಿ ತುಪ್ಪ! ಬೇಸಿಗೆಯ ರಜದಲ್ಲಿ ಇರುವಾಗಲೇ ನಡೆದೊಂದು ಪ್ರಸಂಗ. ಸೋಮವಾರ ಚಿತ್ರದುರ್ಗದ ಸಂತೆ. ಹಳ್ಳಿಗೆ ಅಲ್ಲಿಂದಲೇ ಸಾಮಾನು ಒಯ್ಯಬೇಕು. ನಾವೆಲ್ಲ ಹುಡುಗರನ್ನು ಬಿಟ್ಟು ಹೋಗದ್ದಕ್ಕೆ ಅಜ್ಜಿ ಮನೆಯಲ್ಲೇ ಉಳಿದು ಎತ್ತಿನ ಗಾಡಿಯ ಸವಾರನಿಗೇ ಸಾಮಾನು ತರಲು ಹಣ ಕೊಟ್ಟಿತ್ತು. ಆ ಸವಾರನಿಗೆ (ನನಗೆ ಹೆಸರು ಮರೆತಿದೆ, ಗಂಗಣ್ಣನೋ, ಮಾರಯ್ಯ ಎಂಬುವವನೋ ಇರಬೇಕು) ಮಧ್ಯಾಹ್ನದ ಸುಮಾರಿಗೆ ತುಂಬಾ ಜ್ವರ ಬಂದುಬಿಟ್ಟಿದೆ. ಕಷ್ಟಪಟ್ಟು ಸಾಮಾನು ಖರೀದಿಸಿ ಗಾಡಿ ಹತ್ತಿ ಟೋಲ್ ನಾಕಾ ದಾಟುತಿದ್ದಂತೆಯೇ ಬವಳಿ ಬಂದು ಹಿಂದಕ್ಕೆ ಮಲಗಿ ಬಿಟ್ಟಿದ್ದಾನೆ. ಮುಗುದಾಣ ಸಡಲಿವೆ. ಎತ್ತುಗಳು ಇದನ್ನು ಗಮನಿಸಿ, ತಾವೇ ಕಾಳಜಿಯಿಂದ ಊರ ಕಡೆಗೆ ಬಂದಿವೆ. ಮಾರ್ಗಮಧ್ಯದಲ್ಲೇ ಒಂದು ಗದ್ದೆ ಇತ್ತು. ಅಲ್ಲಿಗೆ ಆಗಾಗ ಹೋಗುವ ಅಭ್ಯಾಸವಿತ್ತು. ಅತ್ತ ಕಡೆಗೆ ಸದ್ಯ ಹೋಗಿಲ್ಲ. ಐದು ಮೈಲಿಯ ದೂರವನ್ನು ತಾವೇ ಸವೆಸಿ, ಮುಖ್ಯ ರಸ್ತೆಯಿಂದ ಮುಕ್ಕಾಲು ಮೈಲಿ ಒಳಗಿರುವ ಹಳ್ಳಿಯೊಳಕ್ಕೆ ಬಂದು, ದಿನಾಲೂ ಗಾಡಿ ನಿಲ್ಲಿಸುತ್ತಿದ್ದ ಜಾಗದಲ್ಲಿ ನಿಂತು 'ಅಂಬಾ' ಎನ್ನತೊಡಗಿವೆ. ಇದನ್ನು ಗಮನಿಸಿ ಒಳಗೆ ಕೊಟ್ಟಿಗೆಯಲ್ಲಿದ್ದ ಅವುಗಳ ಮಿತ್ರರೂ ಉತ್ತರಪೂರ್ವಕವಾಗಿ ಸ್ವಾಗತಿಸುತ್ತಿವೆ. ಎಚ್ಚರವಾಗಿ ಹೋಗಿ ನೋಡಿದರೆ ಗಾಡಿಗನು ಪ್ರಜ್ಞಾಶೂನ್ಯನಾಗಿದ್ದಾನೆ. ಎತ್ತುಗಳೇ ಗಾಡಿಯನ್ನು ತಂದಿವೆ. ಸ್ವಯಂಪ್ರಜ್ಞೆಯ ಬೌದ್ಧಿಕತೆ ಇಲ್ಲದಿದ್ದರೂ, ಅಭ್ಯಾಸಬಲದಿಂದ ಸಾಮಾನ್ಯ ಜ್ಞಾನ ಬೆಳೆಸಿಕೊಳ್ಳುವ ಪ್ರಾಣಿಗಳ ಜೀವನ ಅಚ್ಚರಿ ಉಂಟುಮಾಡಿತು.

೩. ಜೀವ ಮಿತ್ರರು

ಮನೆಯಲ್ಲೇ ಹುಟ್ಟಿದ ಎರಡು ಹೋರಿಕರುಗಳನ್ನು ಚೆನ್ನಾಗಿ ಸಾಕಿದ್ದು. ಅವೆರಡೂ ಎತ್ತುಗಳಾಗಿ ಕೆಲಸ ಮಾಡುತ್ತಿದ್ದವು. ಒಂದನ್ನೊಂದು ಬಿಟ್ಟಿರುತ್ತಿರಲಿಲ್ಲ. ಏನಾದರೂ ಕಾರಣಕ್ಕೆ ಜೋಡಿ ಅಗಲಿಸಿ ಇನ್ನೊಂದನ್ನು ಕಟ್ಟಿದರೆ ಮುಂದೆ ಹೆಜ್ಜೆ ಇಡಲಾರದೆ ಮುಷ್ಕರ ಮಾಡುತ್ತಿದ್ದವು. ಒಂದು ಎತ್ತಿಗೆ ಏನೋ ಆಯಿತು. ಸೂಜಿ

ಯನ್ನೊ ಏನೋ ಮೇಯಲು ಹೋದಾಗ ತಿಂದಿತ್ತು. ಅಥವಾ ಸೊನೆತುಂಬಿದ ಜೋಳವನ್ನೋ ತಿಂದು ಸೊಕ್ಕಿತ್ತು. ಸ್ವಲ್ಪ ಗಂಟೆಗಳ ಅವಧಿಯಲ್ಲೇ ಸತ್ತು ಹೋಗಿತ್ತು. ಆದರೆ ಅದರ ಸಂಗಾತಿಯು ಕಣ್ಣೀರು ಸುರಿಸುವುದು ಬಿಡಲಿಲ್ಲ. ಮುಂಕು ಹಿಡಿದು, ಹುಲ್ಲು ನೀರು ಬಿಟ್ಟು ಮೌನ ತಾಳಿತು. ಅಗಲಿದ ಮಿತ್ರನ ನೆನಹಿನಲ್ಲೇ ಕೊರಗಿ ಕೆಲವೇ ವಾರಗಳಲ್ಲಿ ಸತ್ತುಹೋಯಿತು. ಈ ಅವಿನಾಭಾವ ಸ್ನೇಹ ಕಂಡು ಈಗಲೂ ನೆನಪಾದಾಗ ನನಗೆ ವಿಚಿತ್ರವೇದನೆಯಾಗುತ್ತದೆ.

೪. ಜೀವ ರಕ್ಷಕ ನಾಯಿ

ರಾಮಗಿರಿಯಲ್ಲಿ ಪೂರ್ವಾಶ್ರಮದ ತಂದೆ ವೈದ್ಯ ವೃತ್ತಿಯಲ್ಲಿದ್ದರು. ರಜೆ ಬಂದಾಗ ಚಿತ್ರದುರ್ಗದಲ್ಲಿ ಓದುತ್ತಿದ್ದ ನಾವು ಅಲ್ಲಿಗೆ ಹೋಗಿದ್ದೆವು. ಒಂದು ಪ್ರೀತಿ ಪಾತ್ರ ನಾಯಿಯಿತ್ತು. ಅದರ ಹೆಸರು ರಾಜು. ನೋಡಿದರೆ ತೋಳದಂತೆ ಕಾಣಿಸು ತ್ತಿತ್ತು. ತಂದೆಯವರ ಬಗ್ಗೆ ಬಹಳ ಮಮತೆ. ಆದರೆ ಅಜ್ಜಿ ರುದ್ರಮ್ಮನಿಗೆ ಮಾತ್ರ ಅದನ್ನು ಕಂಡರೆ ಅಲರ್ಜಿ. ಮುಟ್ಟ ಎಲ್ಲಿ ಮೈಲಿಗೆ ಮಾಡುತ್ತದೋ ಎಂಬ ಭಯ. ಮನೆಯ ಒಳಗೆ ಕಾಲಿಡುವ ಅಭ್ಯಾಸ ಸಹ ಆ ನಾಯಿಗೆ ಇರಲಿಲ್ಲ. ಆದರೂ ಅಜ್ಜಿ ಅದನ್ನು ಕಂಡರೆ ಗೊಣಗುತ್ತಿತ್ತು. ರಾಮಗಿರಿ ಬೆಟ್ಟವನ್ನೇರಿ ಪ್ರತಿ ಸೋಮವಾರವೂ ಹೋಗಿ, ಬೆಟ್ಟದ ತುದಿಯ ಶಿವಾಲಯದಲ್ಲಿ ಹಣ್ಣುಕಾಯಿ ಮಾಡಿಸಿಕೊಂಡು ಬರು ತ್ತಿತ್ತು. ಒಮ್ಮೆ ಹೀಗೆ ಕೋಲೂರಿಕೊಂಡು ಬೆಟ್ಟ ಹತ್ತುವಾಗ ನಾಯಿ 'ರಾಜ'ನೂ ಹಿಂಬಾಲಿಸಿದ್ದಾನೆ. ಅಜ್ಜಿಗೆ ತುಂಬಾ ಸಿಟ್ಟುಬಂದಿದೆ, ಬೆದರಿಸಿದೆ ಕೋಲೆತ್ತಿ; ಹೊಡೆದಿದೆ ಕಲ್ಲಿಂದ. ಆದರೂ ರಾಜ ಮಾತ್ರ ಮರಳಿಲ್ಲ. ಮಾರ್ಗಮಧ್ಯದಲ್ಲಿ ರಾಮಗಿರಿ ಬೆಟ್ಟ ದಲ್ಲಿ ಹಾವಳಿಗಾಗಿ ಪ್ರಸಿದ್ಧಿಯಾಗಿರುವ ಕಪಿಗಳ ಹಿಂಡು ಕಾಣಿಸಿಕೊಂಡು, ಅಜ್ಜಿಯ ಮೇಲೆ ಧಾಳಿ ಮಾಡಿ ಹಣ್ಣು-ಕಾಯಿ ಕಿತ್ತುಕೊಳ್ಳಲು ಬಂದಿವೆ. 'ರಾಜ' ಛಂಗನೆ ಓಡಿ ಬಂದು, ವೀರಾವೇಶದಿಂದ ಹೋರಾಡಿ ಕಪಿಗಳನ್ನೆಲ್ಲ ಓಡಿಸಿದ್ದಾನೆ. ಅಜ್ಜಿಗೆ ಅಂಗರಕ್ಷಕನಾಗಿ ನಿಂತಿದ್ದಾನೆ. ಗಾಬರಿಯಿಂದ ನಿಂತ ಅಜ್ಜಿ ಸನಿಹದ ಕಲ್ಲಿನ ಮೇಲೆ ಕುಳಿತು ಆಯಾಸ ಪರಿಹರಿಸಿಕೊಂಡಿದೆ. ಹಣ್ಣು-ಕಾಯಿ ಮಾಡಿಸಿಕೊಂಡು ಬಂದುದೇ ಮಗನಿಗೆ ಹೇಳಿತು: "ಬಸಪ್ಪಾ, ಇವತ್ತು ನಿನ್ನ ರಾಜ ನನ್ನ ಜೀವ ಉಳಿಸಿದ. ಮಡಿ ಉಳಿಸಿದ. ಇನ್ನು ಅವನನ್ನು ಬೈಯುವುದಿಲ್ಲ."

ಅಜ್ಜಿ ತನ್ನನ್ನು ಪ್ರೀತಿಸುವುದಿಲ್ಲ, ಹೆದರಿಸುತ್ತದೆ, ನಿರ್ಲಕ್ಷಿಸುತ್ತದೆ ಎಂದು ತಿಳಿದಿದ್ದೂ ಸಹ ರಾಜ ಮನೆಯ ಋಣ ಉಂಡುದಕ್ಕಾಗಿ ಅಜ್ಜಿಯನ್ನು ಪ್ರಸಂಗ ಎದುರಾದಾಗ ರಕ್ಷಿಸಿದ್ದ. ಇಂಥ ಕರ್ತವ್ಯಪ್ರಜ್ಞೆ; ಸ್ವಾಮಿನಿಷ್ಠೆ, ಕೃತಜ್ಞತೆ ಮನುಷ್ಯ ನಲ್ಲಿ ಸಹ ಸಿಕ್ಕುವುದು ದುರ್ಲಭ.

★

ಬಸವ ಪಂಚಮಿಯಂದು ಬಯಲಾದ ಬೆಳಕು

ಮಾತಾಜಿ

"ಬಯಲು"; ಇದು ವಚನ ಸಾಹಿತ್ಯ ವಾರಿಧಿಯಲ್ಲಿ ಸಿಕ್ಕುವ ಅಮೂಲ್ಯ ಪದ ಮೌಕ್ತಿಕ. ವಚನ ಧರ್ಮದ ಪ್ರಕಾರ 'ಬಯಲ'ನ್ನು ಬೆರೆಯುವುದು, ಬಯಲಾಗುವುದು, ಬಯಲನ್ನು ಆರಾಧಿಸುವುದು, ಮಾನವ ಜೀವಿತದ ಗುರಿ. ಈ ಶಬ್ದಕ್ಕೆ ಇರುವ ಅರ್ಥ ಅನೇಕ.

1. ಬಯಲು : ಸಾಮಾನ್ಯ ಮೈದಾನ, ಪೊಳ್ಳು ಇತ್ಯಾದಿ.
2. ಬಯಲಾಗು : ಇಲ್ಲವಾಗು, ಕಣ್ಮರೆಯಾಗು.
3. ಬಯಲು : ಎಂದರೆ ಪರಿಪೂರ್ಣ ಪರಬ್ರಹ್ಮ. ಬಯಲಾಗು ಎಂದರೆ ಪರಿಪೂರ್ಣ ಪರಬ್ರಹ್ಮನೇ ಆಗು.
4. ಬಯಲಾಗು : ಬಯಲನ್ನು ಬೆರೆದು ಬಯಲು ತಾನಾಗುವುದು.

ಶ್ರಾವಣಶುದ್ಧ ಪಂಚಮಿಯಂದು ಬಸವಣ್ಣನವರು ಬಯಲಾದ ದಿನ, ಅಂದರೆ ಶರೀರವನ್ನು ವಿಸರ್ಜಿಸಿ, ಇಹಲೋಕವನ್ನು ತೊರೆದು, ಕಣ್ಮರೆಯಾದ ದಿನ; ಬಯಲನ್ನು (ಪರಮಾತ್ಮನನ್ನು) ಬೆರೆದು ಬಯಲ ಸ್ವರೂಪವೇ ಆದ ದಿನ.

ಅವರು ಲಿಂಗೈಕ್ಯರಾದ ದಿನ ಮತ್ತು ಬಗೆಯ ಬಗ್ಗೆ, ಅಧಿಕೃತವಾದ ಸಾಹಿತ್ಯವು ಇತ್ತೀಚೆಗೆ ದೊರೆಯುತ್ತಿದ್ದು, ಈವರೆಗೆ ಮುಚ್ಚಿದ್ದ ಅಸ್ಪಷ್ಟತೆಯ ಮಂಜು ನಿಧಾನವಾಗಿ ಕರಗತೊಡಗಿದೆ. ಅವರ ಅಂತ್ಯದ ದಿನಗಳ ಬಗ್ಗೆ ಉಪಯುಕ್ತ ಮತ್ತು ಅಧಿಕೃತ ಮಾಹಿತಿ ದೊರೆಯುವುದು ಕರ್ನಾಟಕ ವಿಶ್ವವಿದ್ಯಾಲಯದವರ ಪ್ರಕಟಣೆಯಾದ ಬಸವಣ್ಣನವರ ಹೆಚ್ಚಿನ ವಚನಗಳಿಂದ. ಅನೇಕ ಅತ್ಯಂತ ತಾತ್ತ್ವಿಕ ವಚನಗಳು ಮತ್ತು ವೈಯಕ್ತಿಕವಾದ ಬದುಕಿನ ಬಗ್ಗೆ ಬೆಳಕು ಚೆಲ್ಲುವ ವಚನಗಳು ಈ ನೂತನ ವಾರಾಶಿಯಲ್ಲಿ ದೊರೆಯುತ್ತಿವೆ.

ಕೆಲವರು, 'ಬಸವಣ್ಣನವರ ಷಟ್‌ಸ್ಥಲ ವಚನಗಳ ಕಟ್ಟು ಮಾತ್ರ ಅಧಿಕೃತ, "ಹೆಚ್ಚಿನ ವಚನಗಳು" ಅನಧಿಕೃತ; ಬಹುಪಾಲು ಪ್ರಕ್ಷಿಪ್ತ ವಚನಗಳು ಸೇರಿವೆ.

ಅವನ್ನು ಮಾನ್ಯ ಮಾಡಬಾರದು.' ಎಂದು ಸಾರಾಸಗಟು ಅಲ್ಲಗಳೆಯುತ್ತಾರೆ. ಇದು ತಪ್ಪು. ಬಸವಣ್ಣನವರ ಸೈದ್ಧಾಂತಿಕ ವಿಚಾರಗಳ ಒಂದು ಚೌಕಟ್ಟನ್ನು ನಾವು ರೂಪಿಸಿಕೊಂಡು ಬಿಟ್ಟರೆ, ಅವರ ವಿಚಾರಗಳಿಗೆ ಹೊರತಾಗಿ, ವಿರುದ್ಧವಾಗಿ ಬಂದ ವಿಚಾರಗಳನ್ನು ಬೇಕಾದರೆ ಪ್ರಕ್ಷಿಪ್ತ ಎನ್ನಬಹುದು. ಎಲ್ಲವನ್ನೂ ಅಂತು ಕಡೆಗಣಿಸಬೇಕಾದುದಿಲ್ಲ.

ಬಸವಣ್ಣನವರ ಮಾತಿನ ಮೌಕ್ತಿಕಗಳು ಬಿಡಿ ಬಿಡಿಯಾದ ಹೂವುಗಳಂತೆ ಅರಳಿವೆ. ಅಂಥವನ್ನು ವಿವಿಧ ರೀತಿಯಲ್ಲಿ ವಿವಿಧ ಕವಿಗಳು, ದಾರ್ಶನಿಕರು ಮಾಲೆ ಮಾಡಿದ್ದಾರೆ. ಕೆಲವರು ಷಟ್‌ಸ್ಥಲದ ಸೂತ್ರವಿಡಿದು, ಇನ್ನು ಕೆಲವರು ಉದಾಹರಣೆಗೆ ಲಿಂಗಲೀಲಾ ವಿಲಾಸದ" ಕರ್ತೃ ಕಲ್ಲು ಮಠದ ಪ್ರಭುದೇವರು, ಗುಬ್ಬಿ ಮಲ್ಲಣಾರ್ಯ, ಶೂನ್ಯ ಸಂಪಾದನಾಕಾರರು ಬೇರೆ ಬೇರೆ ಚೌಕಟ್ಟುಗಳಲ್ಲಿ ವಚನಗಳನ್ನು ಸಂಗ್ರಹಿಸಿ, ಸಂಘಟಿಸಿ, ಸಂಪಾದಿಸಿದ್ದಾರೆ. ಈ ಸಂಪಾದನಾಕಾರರು ಸಂಪಾದಿಸುವ ಕಾಲದಲ್ಲಿ ಲಭ್ಯವಿದ್ದ ಅಥವಾ ಪ್ರಚಲಿತವಿದ್ದ ವಚನಗಳನ್ನು ತೆಗೆದುಕೊಂಡು ಪೋಣಿಸಿರುವ ಸಾಧ್ಯತೆಯುಂಟು. ಅಲಭ್ಯ ವಚನಗಳು ಈ ಚೌಕಟ್ಟಿನೊಳಗೆ ಸೇರಿಸಲ್ಪಡದಿರಬಹುದು. ಅಂಥವು ಇದೀಗ ಬೇರೆ ಬೇರೆ ಗ್ರಂಥ, ಕಾವ್ಯಗಳ ಮೂಲಕ ದೊರೆತು ಕರ್ನಾಟಕ ವಿಶ್ವವಿದ್ಯಾಲಯದ ಪ್ರಕಟಣೆ " ಬಸವಣ್ಣನವರ ವಚನಗಳು " ಈ ಬುಟ್ಟಿಯಲ್ಲಿ ಬಿಡಿ ಬಿಡಿಯಾಗಿವೆ ಇವನ್ನು ಪುನಃ ಸಿದ್ಧಾಂತ ಸೂತ್ರದಿಂದ ಬಂಧಿಸಲು ಸಾಧ್ಯವಿದ್ದಾಗ, ಪ್ರಕ್ಷಿಪ್ತವೆಂದು ಅಲ್ಲಗಳೆದು ತಿರಸ್ಕರಿಸುವುದ ಅಪಾರ ಹಾನಿಗೆ ಕಾರಣವಾಗುತ್ತದೆ. ದೊರೆಯಬಹುದಾದ ಸತ್ಯವನ್ನು ಕಡೆಗಣಿಸಿದಂತಾಗುತ್ತದೆ.

ಬಸವಣ್ಣನವರು, "ಲಿಂಗೈಕ್ಯ"ರಾದ ಬಗೆಗೆ ಅನೇಕ ನಂಬಿಗೆಗಳೂ, ಆಖ್ಯಾಯಿಕೆಗಳು, ವದಂತಿಗಳು ಇವೆ.

1. ಬಸವಣ್ಣನವರು ಕೂಡಲ ಸಂಗಮದ ದೇವಾಲಯದ ಸ್ಥಾವರ ಲಿಂಗದಲ್ಲಿ, ಅದನ್ನು ಸೀಳಿಕೊಂಡು ಅಡಗಿದರು.
2. ಅವರು ಕಾಯಧಾರಿಯಾಗಿಯೇ ಕೈಲಾಸಕ್ಕೆ ಹೋದರು.
3. ಅವರು ಅದೃಶ್ಯರಾಗಿಬಿಟ್ಟರು.
4. ಎರಡು ನದಿಗಳ ಸಂಗಮದಲ್ಲಿ ಹಾರಿ ಆತ್ಮಹತ್ಯೆ ಮಾಡಿಕೊಂಡರು.
5. ರಾಜದ್ರೋಹವನ್ನು ಮಾಡಿ ಓಡಿ ಬಂದ ಬಸವಣ್ಣನವರನ್ನು ಬಿಜ್ಜಳನ ಸೈನಿಕರು ಬೆನ್ನು ಹತ್ತಿ ಹತಮಾಡಿದರು. ನಾಲ್ಕು ಮತ್ತು ಐದನೆಯ

ವದಂತಿಗಳು ಬಸವಣ್ಣನವರನ್ನು ಮತ್ತು ಅವರ ತತ್ತ್ವ ಸಿದ್ಧಾಂತಗಳನ್ನು ದ್ವೇಷಿಸುವವರಿಂದ ಹುಟ್ಟಿದವುಗಳು. ಬಿಜ್ಜಳ ಮಹಾರಾಜನ ಕೊಲೆಗೆ ಯತ್ನಿಸಿ, ಅವನ ಸಿಂಹಾಸನವನ್ನು ಕಬಳಿಸುವ ಹವಣಿಕೆಯಲ್ಲಿದ್ದಾಗ ಅವನ ಸೈನಿಕರು ರೋಷಗೊಂಡು ಬಸವಣ್ಣನವರ ಬೆನ್ನು ಹತ್ತಿದರು. ಅವರಿಂದ ತಪ್ಪಿಸಿಕೊಳ್ಳಲೋಸುಗ ನದಿಯಲ್ಲಿ ಹಾರಿದರು. ಅಥವಾ ಸೈನಿಕರೇ ಅವರನ್ನು ಹತಿಸಿದರು.

ನಮ್ಮ ದೇಶದಲ್ಲಿ ಹೊಸ ವಿಚಾರ ಮತ್ತು ಹೊಸಕ್ರಾಂತಿಯನ್ನು ಸ್ವಾಗತಿಸಿದ್ದು ತೀರಾ ಅಪರೂಪ. ಜಡ ಸಂಪ್ರದಾಯವನ್ನು ವಿರೋಧಿಸಿದ ಎಲ್ಲರೂ ಅನೇಕ ಸಂಕ್ಷೋಭೆಗೆ ಒಳಗಾಗುವುದು ಸ್ವಾಭಾವಿಕ. ಇಪ್ಪತ್ತನೆಯ ಶತಮಾನದಲ್ಲಿಯೇ ಜಾತ್ಯತೀತ ಸಂವಿಧಾನದ ರಕ್ಷೆಯಲ್ಲಿ ನಿಂತು, ಬಸವಣ್ಣನವರ ತತ್ತ್ವದ ಬೆಂಬಲವಿಡಿದು ಸ್ತ್ರೀ ಸಮಾನತೆ, ಸ್ತ್ರೀಯರಿಗೆ ಗುರುತ್ವ, 'ಎಲ್ಲ ಜಾತಿಯವರೂ ಮಠಪೀಠಗಳಿಗೆ ಅಧಿಕಾರಿಗಳಾಗಲು ಸಾಧ್ಯ' ಎಂಬ ತತ್ತ್ವ ಹೇಳಿದರೆ ಕನಲಿ ಕೆಂಡವಾಗುವ, ಮೂದಲಿಸಿ ಮೂಗೆಳೆಯುವ, ನೂರೆಂಟು ಎಡರು ಒಡ್ಡುವ, ತೇಜೋವಧೆ ಮಾಡಲು ಸತತವಾಗಿ ಶ್ರಮಿಸುವ ಧಾರ್ಮಿಕಜನರು ಇರುವಾಗ ತೀಕ್ಷ್ಣಕ್ರಾಂತಿವಾದಿಯಾಗಿ, ಸಮಾಜದಲ್ಲಿ ಸಮಗ್ರ ಪರಿವರ್ತನೆ ತರಲೆತ್ನಿಸಿದ ಬಸವಣ್ಣನವರಿಗೆ ಎಂತೆಂಥಾ ಎಡರನೊಡ್ಡಿರಬಹುದು! ಅವರ ಜೀವನ, ಸಾಧನೆ, ಸಂದೇಶ, ಅಂತ್ಯಗಳ ಬಗ್ಗೆ ಕುಹಕ ಕಥೆಗಳನ್ನು ಕಟ್ಟಿರಲೂ ಸಾಕು. ಅಂಥದೊಂದು ಕುಹಕ ಕಥೆ ಆತ್ಮಹತ್ಯೆಯ ಕಥನ.

ನಮ್ಮ ಪರಂಪರೆಯಲ್ಲಿ ಕ್ರಾಂತಿಪುರುಷರ ವಿರುದ್ಧ ಎರಡು ರೀತಿಯ ಚಟುವಟಿಕೆ, ಪ್ರತಿಕ್ರಿಯೆ ತೋರಿಬಂದಿವೆ. ಒಂದು ಅವರನ್ನು ಉಗ್ರವಾಗಿ ವಿರೋಧಿಸಿರುವುದು, ಇನ್ನೊಂದು ಅವರನ್ನು ಆರಾಧಿಸಿ ಹೊಗಳಿ ಕ್ರಾಂತಿಯ ತೀಕ್ಷ್ಣತೆಯನ್ನು ಕಡಿಮೆ ಮಾಡುವುದು. ಉದಾಹರಣೆಗೆ ದಶಾವತಾರಗಳಲ್ಲಿ ಬುದ್ಧಾವತಾರ ಸೇರಿಸುವುದು. ಪೌರಾಣಿಕ ಕಲ್ಪನೆಯ ಬೌದ್ಧಾವತಾರದ ಕಥೆಯೊಂದಿದೆ ಆದರೆ ಇತಿಹಾಸ ಪುರುಷನಾದ ಬುದ್ಧನನ್ನು ಹತ್ತು ಅವತಾರಗಳ ಮಾಲಿಕೆಯಲ್ಲಿ ಸೇರಿಸುವ ಪ್ರಯತ್ನವೂ ಇದ್ದೇ ಇದೆ. ಬುದ್ಧನು ಉಳಿದ 9 ಅವತಾರಗಳಲ್ಲಿ ಮಾಡಿದ್ದಕ್ಕೆ ತದ್ವಿರುದ್ಧವಾದುದನ್ನು ಅದೆಂತು ಬುದ್ಧಾವತಾರದಲ್ಲಿ ಮಾಡಲು ಸಾಧ್ಯ? ಹೀಗೆ ಸೇರಿಸಿ, ಗೌರವಿಸುವುದರ ಉದ್ದೇಶವೇನು? ವಿರೋಧ ಪಕ್ಷಗಳಲ್ಲಿದ್ದು, ಆಡಳಿತ ಪಕ್ಷದ, ಸರ್ಕಾರದ ಹುಳುಕನ್ನು ಬಯಲಿಗೆಳೆಯುವ ಪ್ರತಿಭಾವಂತ ಸದಸ್ಯರನ್ನು ಆಮಿಷಕ್ಕೊಳಗುಮಾಡಿ, ಪಕ್ಷಾಂತರ ಗೈಯಿಸಿ ಅಧಿಕಾರಕೊಟ್ಟುಬಿಟ್ಟರೆ, ಅವರು ತಣ್ಣಗಾಗಿ ಬಿಡುವರು ಎಂದು

ಕೆಲವು ಜಾಣ ರಾಜಕಾರಣಿಗಳು ಪಕ್ಷಾಂತರ ಮಾಡಿಸುವಂತೆ ಕ್ರಾಂತಿಪುರುಷರನ್ನು ಪೌರಾಣೀಕರಣ ಗೊಳಿಸಿ ಆರಾಧಿಸುವುದು ಸ್ವಾಭಾವಿಕ ಈ ಧಾರ್ಮಿಕ ಕ್ಷೇತ್ರದಲ್ಲಿ.

ಎಂಥ ಪ್ರಸಂಗದಲ್ಲಿಯೂ 'ರಾಜಿ' ಮಾಡಿಕೊಳ್ಳದಂತಹ ಕ್ರಾಂತಿಪುರುಷರ ಅವಹೇಳನ, ತೇಜೋವಧೆ ಸತತವಾಗಿ ಸಾಗಿರುವುದೂ ಅಷ್ಟೇ ಸ್ವಾಭಾವಿಕ. ಅಂಥ ಪ್ರಯತ್ನ "ಆತ್ಮಹತ್ಯೆಯ" ಕಥನದಲ್ಲಿದ್ದರೆ, ಅವಾಸ್ತವಿಕವಾದ ಪವಾಡ ಮಾಡುವ ಯತ್ನ ಲಿಂಗವನ್ನು ಭೇದಿಸಿ ಒಳಹೋಗುವ ನಿರೂಪಣೆಯಲ್ಲಿದೆ. ಇವೆರಡನ್ನೂ ಬದಿಗಿಟ್ಟು ವಚನಗಳಲ್ಲಿ ಹುದುಗಿರುವ ವಾಸ್ತವಿಕತೆಯನ್ನು ಅರಸಿ ನಾವು ಕಥೆಯನ್ನು ನಿರೂಪಿಸಬಹುದು.

ಸಮಗಾರ ಹರಳಯ್ಯನವರ ಮಗ ಶೀಲವಂತ ಮತ್ತು ಬ್ರಾಹ್ಮಣ ಮಧುವರಸರ ಮಗಳು ಲಾವಣ್ಯವತಿ ಶರಣಧರ್ಮ ಸ್ವೀಕರಿಸಿ ವಿವಾಹವಾದಾಗ, ವರ್ಣ ಸಂಕರ ವಾಯಿತೆಂದು ಅನೇಕರು ಚಾಡಿ ಹೇಳಿದಾಗ, ಬಸವಣ್ಣನವರೊಡನೆ ಅರಸು ಭಿನ್ನಾಭಿಪ್ರಾಯ ತಳೆಯುತ್ತಾನೆ. ಸಾಮಾಜಿಕ ಕ್ರಾಂತಿ ಮಾಡಲೆತ್ನಿಸುವ ಬಸವಣ್ಣನವರನ್ನು ಗಡಿಪಾರು ಮಾಡಿದಾಗ ಅವರು ನಾಡಿನ ಗಡಿಯನ್ನು ಬಿಟ್ಟು ಹೊರಡುತ್ತಾರೆ. ಹೊರಟ ಸನ್ನಿವೇಶದಲ್ಲಿ ಅವರು ಚನ್ನಬಸವಣ್ಣನನ್ನು ಕರೆದು, ಬಿಜ್ಜಳನೊಡನೆ ಸಹಕರಿಸಿಕೊಂಡು ಬಾಳಲು ಮತ್ತು ಹೊಸ ಧರ್ಮವನ್ನು ಸಂರಕ್ಷಿಸಲು ಮಾರ್ಗದರ್ಶನ ಮಾಡುತ್ತಾರೆ.

ಕರೆದು ಆಶೀರ್ವದಿಸಿ ಹರಸಿ ಒಪ್ಪಿಸಿ ಬಸವ
ವರ ಚನ್ನಬಸವ ಶರಣರಿಗೆ । ಕಂಟಕದ
ಹುರಿಯಾಳು ಕಾಯೋ ಹೊಸ ಮತವ ॥೪೫॥ ಜನಪದ ಸಾಹಿತ್ಯ
ಹೇಳಿ ಹೊರಟನು ಬಸವ ಕೇಳಲಾರದೆ ಮಾತ
ಗೋಳಿಟ್ಟು ಜನವು ಸರಮಾಲೆ । ಸಂಗಮಕೆ
ಆಳು ಬಸವಯ್ಯ ದಯವಿಟ್ಟು ॥೫೬॥

ಶರಣರೆಲ್ಲರೂ ದುಃಖತಪ್ತರಾಗಿ ತಮ್ಮ ಭಾಗ್ಯದೇವತೆಯನ್ನು ಬೀಳ್ಕೊಡಲು ಬಂದಿದ್ದಾಗ ಬಸವಣ್ಣನವರು ಹೇಳುತ್ತಾರೆ :

ಆನು ಮಾಡಿದ ತಪ್ಪನೆಣಿಸಿಹನೆಂದಡೆ ಗಣನೆಯಿಲ್ಲ
ನಡೆದು ತಪ್ಪುವೆ, ನುಡಿದು ತಪ್ಪುವೆ
ಮಾಡಿ ತಪ್ಪುವೆ, ನೀಡಿ ತಪ್ಪುವೆ
ಅರಿದು ತಪ್ಪುವೆ, ಮರೆದು ತಪ್ಪುವೆ

ಎನ್ನ ತಪ್ಪನೊಪ್ಪವ ಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು
ಕೂಡಲ ಸಂಗಯ್ಯನೆಂಬ ಗಂಡನು ಬೆರೆಸಬೇಕೆಂದು ಕರೆಯಲಟ್ಟಿದನು
ಶಿವಶರಣರೆಲ್ಲರಿಗೆ ಶರಣೆಂದು ಬೀಳ್ಕೊಂಬ ತವಕದಲ್ಲಿದ್ದೆನು.

ಬ. ಷ. ವ. 1181

ತಾವೇನಾದರೂ ಅರಿತೋ ಅರಿಯದೆಯೋ ತಪ್ಪು ಮಾಡಿದ್ದರೆ ಅದನ್ನು ಕ್ಷಮಿಸಬೇಕೆಂದು ಕೇಳಿಕೊಳ್ಳುತ್ತಾರೆ. ಅಲ್ಲಿಂದ ಹೊರಡುತ್ತಾರೆ. ಸಂಗಮದಲ್ಲಿ ಇದ್ದು ಆತ್ಮಾನಂದದಲ್ಲಿ ತಲ್ಲೀನರಾಗಿ ಶಾಂತವಾದ ಜೀವನ ನಡೆಸುತ್ತಿರುವಾಗಲೇ ಒಂದು ದಿನ ಪ್ರಭುದೇವರ ಚೈತನ್ಯ ಬಯಲಾದುದನ್ನು ಅರಿಯುತ್ತಾರೆ.

ಲಿಂಗ ಗಂಭೀರ ಗಮನಗೆಟ್ಟಿದಲ್ಲಾ,
ಜಂಗಮ ಗಂಭೀರ ಸುಳುಹುಗೆಟ್ಟಿದಲ್ಲಾ,
ಪ್ರಸಾದ ಗಂಭೀರ ರೂಪುಗೆಟ್ಟಿದಲ್ಲಾ,
ಆಚಾರ ಗಂಭೀರ ಅವಯವಗೆಟ್ಟಿದಲ್ಲಾ,
ಜ್ಞಾನ ಗಂಭೀರ ನಡೆಗೆಟ್ಟಿದಲ್ಲಾ,
ಕೂಡಲ ಸಂಗಮದೇವರಲ್ಲಿ ಪ್ರಭುದೇವರು ನಿಜವನೈದಲು
ಸಂಗನ ಬಸವಣ್ಣನ ಪ್ರಾಣ ಒಡನೆ ಬಳಿಸಂದಿತ್ತಲ್ಲಾ ।

ಬ. ಷ. ವ. 1387

ಲಿಂಗ ಚೈತನ್ಯವೇ ತಾನಾಗಿ ಸಂಚರಿಸುತ್ತಿದ್ದ ಪ್ರಭುದೇವರು, ಯೋಗ ಅನುಭಾವಗಳ ಸಂಗಮವಾಗಿ ವಿಜೃಂಭಿಸುತ್ತಿದ್ದ ಪ್ರಭುದೇವರು ತಮ್ಮ ಅಸ್ತಿತ್ವವನ್ನು ಇಲ್ಲವಾಗಿ ಮಾಡಿಕೊಂಡರು. ಅನ್ನ ಪ್ರಸಾದದಿಂದ ಒಡಲಿನ ಧಾರಣೆ. ಇಂಥ ಪ್ರಸಾದಕಾಯವು ರೂಪವನ್ನು ಕಳೆದುಕೊಂಡಿದೆ. ಸದಾಚಾರ ಸಂಪನ್ನನಾಗಿ, ಲಿಂಗದೇಹಿಯಾದ ಪ್ರಭುದೇವರ ಕಾಯವು ಅವಯವ ಗೆಟ್ಟಿದೆ. ಜ್ಞಾನದೇಗುಲವಾಗಿ ಸಂಚರಿಸುತ್ತಿದ್ದ ಪ್ರಭುದೇವರು ಐಹಿಕ ವ್ಯಾಪಾರಗಳಿಗೆ ಮಂಗಲವನ್ನು ಹಾಡಿ ಬಯಲನ್ನು ಬೆರೆದಿದ್ದಾರೆ.

ಒಂದು ದಿನ ಪೂಜಾಮಗ್ನರಾಗಿದ್ದ ಬಸವಣ್ಣನವರಿಗೆ, ತಮ್ಮ ಇಷ್ಟಲಿಂಗ ದರ್ಪಣದಲ್ಲಿ ಇದೆಲ್ಲ ಗೋಚರವಾಗುತ್ತಿದೆ. ಪ್ರಭುದೇವರು ನಿಜವನೈದಿ ಪರಮಾತ್ಮನಲ್ಲಿ ಬೆರೆತುದು ದೃಗ್ಗೋಚರವಾಗುತ್ತಿದ್ದಂತೆಯೇ ಬಸವಣ್ಣನವರ ಪ್ರಾಣವೂ ದೇವನಲ್ಲಿ ಬೆರೆಯಲು ತವಕಿಸುತ್ತಿದೆ. ತಾವು ಬಂದ ಮಣಿಹವು ಪೂರೈಸಿತು ಎಂಬ ಭಾವ ಬಲಿಯಿತು. ಆಗ ತಮ್ಮ ಬಿನ್ನಹವನ್ನು ಈ ರೀತಿ ದೇವನ ಮುಂದಿಡುತ್ತಾರೆ.

ಅಯ್ಯಾ ಹಿಂದೆಯಾನು ಮಾಡಿದ ಮರೆಹಿಂದ ಬಂದೆ ನೀ ಭವದಲ್ಲಿ
ನಿಮ್ಮ ಲೀಲೆ ನಿಮ್ಮ ವಿನೋದ ಸೂತ್ರದಿಂದ
ಲಕ್ಷದ ತೊಂಭತ್ತಾರು ಸಾವಿರ ಗೀತಂಗಳ ಆಡಿ ಹಾಡಿ
ದಾಸೋಹವೆಂಬ ಮಹಾಗಣ ಸಂಕುಳದೊಳೆನ್ನ ನಿರಿಸಿ
ನಿಮ್ಮ ಭಕ್ತಿಯ ಘನವ ನೀವೇ ಮೆರೆಯಲೆಂದು
ಪರವಾದಿ ಬಿಜ್ಜಳನ ತಂದೊಡ್ಡಿ, ಎನ್ನನ್ನು ಅವನೊಡನೆ ಹೋರಿ
ಮುನ್ನೂರು ಅರವತ್ತು ಸತ್ತ ಪ್ರಾಣವನೆತ್ತಿಸಿ
ಮೂವತ್ತಾರು ಕೊಂಡೆಯ ಗೆಲಿಸಿ,
ಎಂಭತ್ತೆಂಟು ಪವಾಡಂಗಳ ಕೊಂಡಾಡಿ
ಮರ್ತ್ಯಲೋಕದ ಮಹಾಗಣಂಗಳ ಒಕ್ಕುದನಿಕ್ಕಿ ಎನ್ನ ಸಲಹಿದಿರಿ
ನಿಮ್ಮ ಮಹಾಗಣಂಗಳು ಮೆಚ್ಚಿ, ಎನ್ನ ಸೂತಕವ ತೊಡೆದು
ಪ್ರಭುದೇವರ ಕರುಣದಿಂದ ಪ್ರಾಣಲಿಂಗ ಸಂಬಂಧ ಸ್ವಯವಾಗಿತ್ತು
ನೀವು ಕಳಿಸಿದ ಬೆಸನು ಸಂದಿತ್ತು
ಉಫೇ ! ಇನ್ನು ಕೂಡಿಕೊಳ್ಳ ಕೂಡಲಸಂಗಮದೇವಾ.

ತಮ್ಮ ಸಮಗ್ರ ಜೀವನದ ಸಿಂಹಾವಲೋಕನ ಮಾಡಿಕೊಳ್ಳುತ್ತಾರೆ. ಪರವಾದಿ ಬಿಜ್ಜಳ ಅಂದರೆ ಬಸವಣ್ಣನವರ ವಿಚಾರಗಳಿಗೆ ಭಿನ್ನ ವಿಚಾರಗಳುಳ್ಳ ಬಿಜ್ಜಳನನ್ನು ದೇವನು ತನ್ನ ಶಕ್ತಿಲೀಲಾವಿಲಾಸವನ್ನು ಪ್ರದರ್ಶಿಸಲೋಸುಗವೇ ಬಸವಣ್ಣನವರ ಬಾಳಿನಲ್ಲಿ ತೂರಿಸಿದ್ದಾನೆ. ಅವರು ಮುನ್ನೂರ ಅರವತ್ತು ಜನ ಸತ್ತವರಿಗೆ ಪ್ರಾಣ ನೀಡಿದ್ದಾರೆ. ಎಂಭತ್ತೆಂಟು ಪವಾಡಗಳನ್ನು ಮಾಡಿದ್ದಾರೆ, ಮೂವತ್ತಾರು ಬಾರಿ ಕೊಂಡೆಯ ಮಾತುಗಳು, ಆರೋಪಗಳು ಬಂದಾಗ ಅವನ್ನು ಪರಿಹರಿಸಿ ತಮ್ಮ ವ್ಯಕ್ತಿತ್ವವನ್ನು ಎಲ್ಲರಿಗೆ ತೋರಿಸಿಕೊಟ್ಟಿದ್ದಾರೆ. ದೇವನು ಇವರನ್ನು ಹುಟ್ಟಿಸಿದ ಉದ್ದೇಶ ಪೂರೈಸಿದೆ ಎಂಬ ಭಾವ ಈಗ ಬಲಿತಿದೆ. ಅಂತೆಯೇ ಇನ್ನು ತಾವೂ ಅವನನ್ನು ಬೆರೆಯಬೇಕೆಂದು ಸಂಕಲ್ಪಿಸಿದ್ದಾರೆ. ಸ್ವಯಂಸ್ಫೂರ್ತಿಯಿಂದ ದೇಹವನ್ನು ವಿಸರ್ಜಿಸಲು ಬಯಸಿದ್ದಾರೆ.

ಸ್ವಯಂಸ್ಫೂರ್ತಿಯ ದೇಹ ವಿಸರ್ಜನೆ ಎಂದರೆ ಆತ್ಮಹತ್ಯೆ ಎಂದಲ್ಲ, ಯೋಗ ಸಿದ್ಧಿಯ ಮುಖಾಂತರ, ಊರ್ಧ್ವ ಚಕ್ರಗಳ ಮೂಲಕ ಪ್ರಾಣವಾಯುವನ್ನು ಬಿಡುಗಡೆ ಮಾಡುವುದು ಎಂದರ್ಥ. ಆತ್ಮಹತ್ಯೆಯಲ್ಲಿ ಬಾಳಲಾರದ ಹೇಡಿತನವಿದ್ದರೆ, ಇಚ್ಛಾ ಮರಣತ್ವದಲ್ಲಿ ಸಂತೃಪ್ತಿ, ಜೀವನದ ಗುರಿಯನ್ನು ಮುಟ್ಟಿದೆನೆಂಬ ಸಮಾಧಾನ, ಯೋಗಶಕ್ತಿಯಿಂದ ದೇವರಲ್ಲಿ ಒಂದಾಗುವ ಸಂಕಲ್ಪ, ಸಂಗಮಿಸಿರುತ್ತವೆ.

ಉರಿಯೊಳಗಣ ಕರ್ಪುರಕ್ಕೆ ಕರಿಯುಂಟೆ ಅಯ್ಯಾ ?
ಬಯಲು ಮರೀಚಿ ಜಲಕ್ಕೆ ಕೆಸರುಂಟೆ ?
ವಾಯುವನಪ್ಪಿದ ಪರಿಮಳಕ್ಕೆ ನಿರ್ಮಾಲ್ಯವುಂಟೆ ?
ನೀವು ನೆರೆ ಒಲಿದ ಬಳಿಕ ಎನಗೆ ಭವವುಂಟೆ ?
ಕೂಡಲಸಂಗಮದೇವಾ,
ನಿಮ್ಮ ಚರಣಕಮಲದೊಳಗೆನ್ನನಿಂಬಿಟ್ಟುಕೊಳ್ಳಯ್ಯಾ.
ಬ. ಷ. ವ. 1390

ಪರಿಶುದ್ಧವಾದ ಕರ್ಪುರ ಉರಿಯ ಸಂಪರ್ಕದಿಂದ ಉರಿದ ಬಳಿಕ ಅಲ್ಲಿ ಶ್ಲೇಷ ಅಥವಾ ಕರುಕು ಉಳಿಯುವುದೆ ? ಮರೀಚಿಯ ಜಲದ ಪರಿಣಾಮವಾಗಿ ಕೆಸರಿರುವದುಂಟೆ ? ಹೂವಿನಿಂದ ಬೇರ್ಪಟ್ಟ ಸುಗಂಧವನ್ನು ವಾಯುವು ಅಪ್ಪಿಕೊಂಡು, ಹೊತ್ತು ತಂದಾಗ ಅಲ್ಲಿ ಮತ್ತೇನಾದರೂ ನಿರ್ಮಾಲ್ಯ ಉಳಿಯುವುದುಂಟೆ ? ಹಾಗೆಯೇ ಪರಮಾತ್ಮನೆಂಬ ಚಿದ್ಘನದ ಉರಿಯಲ್ಲಿ ಶುದ್ಧಾತ್ಮದ ಕರ್ಪುರವು ಕರಗಿದ ಬಳಿಕ ಇನ್ನು ಪಾಪ-ಪುಣ್ಯಗಳ ಶ್ಲೇಷವು ಉಳಿಯುವುದುಂಟೆ? ಆದ್ದರಿಂದ ಸರ್ವಾಂಗ ಶುದ್ಧಿ ಹೊಂದಿದ ಜೀವಾತ್ಮನನ್ನು ಇಂಬಿಟ್ಟುಕೊಳ್ಳಲು ಪರಮಾತ್ಮನಲ್ಲಿ ಬೇಡಿಕೊಳ್ಳುತ್ತಿದ್ದಾರೆ.

ತಮ್ಮ ಮನಸ್ಸಿನ ಸ್ಥಿತಿ ಹೇಗಿದೆ ಎಂಬುದನ್ನು ಅತ್ಯಂತ ತಾತ್ತ್ವಿಕವಾಗಿ, ಮಾರ್ಮಿಕವಾಗಿ ಹೇಳುತ್ತಾರೆ :

ಅರಿವನ್ನಕ್ಕರ ಅರ್ಚಿಸಿದೆ, ಅರಿವನ್ನಕ್ಕರ ಪೂಜಿಸಿದೆ
ಅರಿವನ್ನಕ್ಕರ ಹಾಡಿ ಹೊಗಳಿದೆ
ಅರಿವುಗೆಟ್ಟು, ಮರಹು ನಷ್ಟವಾಗಿ
ಭಾವ ನಿರ್ಭಾವವಾಗಿ ನಿಜವೊಳಕೊಂಡಿತ್ತಾಗಿ
ಕೂಡಲ ಸಂಗಯ್ಯನಲ್ಲಿ ಸರ್ವ ನಿವಾಸಿಯಾಗಿರ್ದೆನು.

ಅರಿಕೆ-ಅರಿವು-ಅರಿಯುವವ, ಪೂಜ್ಯ-ಪೂಜೆ-ಪೂಜಕ, ಧ್ಯೇಯ-ಧ್ಯಾನ-ಧ್ಯಾತೃ ಎಂಬ ಈ ತ್ರಿಪುಟಿಗಳು ಅಳಿದ ಬಳಿಕ ಭಾವ ನಿರ್ಭಾವವಾಗಿ ಸರ್ವಾಂಗದಲ್ಲೂ ಪರಮಾತ್ಮನು ತುಂಬಿ ತುಳುಕುತ್ತಿದ್ದಾನೆ. ಹೀಗಾಗಿ ಇವರ ಮನದಲ್ಲಿ ಭೂಮ ಭಾವನೆ ಅಳವಟ್ಟಿದೆ.

ಪಶ್ಚಿಮ ಪದ್ಮಾಸನದಲ್ಲಿ ಕುಳಿತು ನೆಟ್ಟಲುವ ಮುರಿದು
ತುಟಿ ಮಿಡುಕದೆ ಅಟ್ಟಿಯಾಡಿತ್ತಲ್ಲಾ !
ಬಿಟ್ಟ ಕಣ್ಣು, ಬಿಗಿದ ಹುಬ್ಬು, ಬ್ರಹ್ಮರಂಧ್ರದಲ್ಲಿ ಕಟ್ಟು ಗುಡಿಯ
ಕೂಡಲ ಸಂಗಮದೇವ ಹಿಡಿವಡೆದ. ಬ ಷ. ವ. 814

ಈ ರೀತಿ ಯೋಗಮುದ್ರೆಯಲ್ಲಿ ಕುಳಿತು ಪ್ರಾರ್ಥಿಸುತ್ತ ಹಂಬಲ ತುಂಬಿ ದೈವೀಶಕ್ತಿಯಲ್ಲಿ ಬೆರೆಯುವ ಯತ್ನದಲ್ಲಿರುವಾಗಲೇ ಪರಮಾತ್ಮನ ಚಿದ್ಬೆಳಗು ಕೋಟಿ ರವಿ-ಶಶಿಯರಿಗೆ ದಾಟದ ಪ್ರಭೆಯಾಗಿ, ಬಳಿಸಾರಿ ಅವರನ್ನು ಆವರಿಸಿಕೊಳ್ಳುತ್ತದೆ. ಆಗ ಆನಂದದಿಂದ ಹಾಡುತ್ತಾರೆ :

ಧರೆಯಾಕಾಶದ ನಡುವೆ ಒಂದು ಮಾಮರ ಹುಟ್ಟಿತ್ತು
ಆ ಮರಕ್ಕೆ ಕೊಂಬೆ ಎರಡು, ಎಲೆ ಮೂರು
ಮೂವತ್ತಾರು ಪುಷ್ಪ, ಕಾಯಿ ಒಂದೆ !
ಹಣ್ಣು ರಸ ತುಂಬಿದಲ್ಲಿ ಏನನೂ ಕಾಣೆ !
ಎಲೆ ಉದುರಿದಡೆ ಹಣ್ಣು ತೊಟ್ಟು ಬಿಟ್ಟು ಬಿದ್ದಿತ್ತು
ಆ ಹಣ್ಣ ಪ್ರಭುದೇವರು ಆರೋಗಣೆಯ ಮಾಡಿ
ನಿಜದಲ್ಲಿ ನಿರ್ವಯಲಾದರು.
ಪ್ರಭುವಿನ ಕಾರುಣ್ಯ ಪ್ರಸಾದವ ನಾನು ಕೊಂಡೆನಾಗಿ
ಕೂಡಲ ಸಂಗಮದೇವರು ತಮ್ಮ ಹೃದಯಕಮಲದಲ್ಲಿ
ಇತ್ತ ಬಾರೆಂದು ಇಂಬಿಟ್ಟುಕೊಂಡರು.

ಪೃಥ್ವಿಯಾಗಸಗಳ ನಡುವಿನ ಭೂಭಾಗವೇ ಜೀವನ ಲೀಲಾರಂಗ. ಈ ಅವಕಾಶದಲ್ಲಿ, ಬಯಲಲ್ಲಿ ಮಾನವ ಜೀವನವೆಂಬ ವೃಕ್ಷ ಮೂಡುತ್ತದೆ. ಇದರಲ್ಲಿ ಐಹಿಕ-ಪಾರಮಾರ್ಥಿಕ, ಕಾಯ-ಆತ್ಮ ಎಂಬ ಎರಡು ಕೊಂಬೆಗಳು. ಈ ಜೀವನವೃಕ್ಷ ತಳೆಯುವ ಎಲೆಗಳು ಮೂರು : ತ್ಯಾಗಾಂಗ, ಭೋಗಾಂಗ ಮತ್ತು ಯೋಗಾಂಗ ಎಂಬವು. ಪದಾರ್ಥ ತ್ಯಾಗ, ಪ್ರಸಾದ ಭೋಗ, ಲಿಂಗ ಯೋಗ ಎಂಬ ಮೂರು ಎಲೆಗಳಿಲ್ಲದ್ದರೆ, ಇಲ್ಲಿ ಬಿಡುವ ಪುಷ್ಪಗಳು ಮೂವತ್ತಾರು. ಭಕ್ತ, ಮಹೇಶ, ಪ್ರಸಾದಿ ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲಗಳಲ್ಲಿ ಒಂದೊಂದು ಸ್ಥಲದಲ್ಲಿ ಮತ್ತೆ ಆರು ಸ್ಥಲಗಳು. ಈ ಆರು ಸ್ಥಲ ಮತ್ತು ಉಪಸ್ಥಲಗಳಲ್ಲಿ ಒಂದೊಂದು ಇಂದ್ರಿಯವೂ ಲಿಂಗೇಂದ್ರಿಯವಾಗುತ್ತದೆ. ಅದರ ಫಲವಾಗಿ ಲಿಂಗಾಂಗ ಸಾಮರಸ್ಯವೆಂಬ ಕಾಯಿ ಬಿಡುತ್ತದೆ. ಜೀವನ್ಮುಕ್ತ ಸ್ಥಿತಿ ಪ್ರಾಪ್ತವಾಗಿ ಪಕ್ವವಾದ ಹಣ್ಣಿನಂತೆ ಈ ಶರಣಜೀವಿ ಜೀವನ ವೃಕ್ಷಕ್ಕೆ ಅಂಟಿಕೊಂಡಿರುವನು. ಒಂದು ದಿನ ಇದು ಹಳಚಿ ಬೀಳುವುದು. ಇಂಥ ಜೀವನ್ಮುಕ್ತ ಸ್ಥಿತಿಯನ್ನು ಹೊಂದಿದ್ದ ಪ್ರಭುದೇವರು ನಿಜದಲ್ಲಿ ಅಡಗಿದರು.

"ನಾನು ಸಹ ಅಂಥ ಪ್ರಸಾದವನ್ನು ಪಡೆದ ಕಾರಣ, ಕೂಡಲ ಸಂಗನು ಇತ್ತ ಬಾರೆಂದು ನನ್ನನ್ನು ಇಂಬಿಟ್ಟುಕೊಳ್ಳುತ್ತಿದ್ದಾನೆ." ಬಹುಶಃ ಬಸವಣ್ಣನವರು ಬರೆದ ಕಡೆಯ ವಚನವಿದು. ಮುಂದೆ ಬರೆಯಲಾಗದ ನಿರ್ವಿಕಾರ ಸ್ಥಿತಿ. ದಿವ್ಯಾನುಭವದ

ಪರಾಕಾಷ್ಠ ಸ್ಥಿತಿಯನ್ನು ಏರುತ್ತ ಶಬ್ದ ನಿಂತ ಸ್ಥಿತಿ. ಉಪ್ಪಿನ ಗೊಂಬೆ ಸಮುದ್ರದ ಆಳವನ್ನರಿಯಲೋಸುಗ ಧುಮುಕಿದರೆ, ತನ್ನನುಭವ ಹೇಳಲು ಹೊರಬರಲು ಸಾಧ್ಯವೆ ?

ಆತ್ಮಚೈತನ್ಯವು ದೇಹವನ್ನು ತೊರೆದು, ಬಯಲಿನಲ್ಲಿ ಬೆರೆಯಿತು. ಪಶ್ಚಿಮ ಚಕ್ರದ ಕವಾಟ ಬಿಚ್ಚಿ ದೊಡ್ಡ ಬೆಳಕೊಂದು ಹೊರಹೊಮ್ಮಿ ಬ್ರಹ್ಮಾಂಡದಲ್ಲಿ ಬೆರೆಯಿತು. ಬಸವಣ್ಣನವರು ಆಕಾರವ ನಿರಾಕಾರವ ಮಾಡಿಕೊಂಡು, ಪ್ರಾಣವ ನಿಃಪ್ರಾಣವ ಮಾಡಿಕೊಂಡು, ನಿಶ್ಶಬ್ದ ರೂಪಿಯಾಗಿ ಮಹಾದೇವನ ಹೃದಯ ಕಮಲವ ಹೊಕ್ಕು ದೇವನಲ್ಲಿ ಬಯಲಾದರು. (ವಚನ ಸಾಹಿತ್ಯ ಸಂಗ್ರಹ. ಪುಟ 589 ಮಡಿವಾಳ ಮಾಚಿದೇವರ ವಚನ)

ಗುರುಕುಲ ವಾಸಿಗಳು ಪೂಜಾಮಂದಿರಕ್ಕೆ ಧಾವಿಸಿ ನೋಡುತ್ತಾರೆ. ಲಿಂಗಾಂಗ ಸಾಮರಸ್ಯದ ನಿಜಾನಂದದಲ್ಲಿ ಕುಳಿತಂತೆ ಬಸವಣ್ಣನವರು ಕುಳಿತಿದ್ದಾರೆ. ದಶವಾಯುಗಳು ಪಶ್ಚಿಮ ಚಕ್ರದಲ್ಲಿ ಹಾಯ್ದು, ದೃಷ್ಟಿ ಬ್ರಹ್ಮರಂಧ್ರದಲ್ಲಿ ನೆಲೆಗೊಂಡು, ಅಲುಗದೆ ದೇಹ ಕುಳಿತಿದೆ. ಆಶ್ರಮವಾಸಿಗಳು ಮುಂದಿನ ಕಾರ್ಯಕ್ರಮಕ್ಕೆ ಅಣಿಯಾಗುತ್ತಿರುವಾಗಲೇ, ಕ್ರಾಂತಿಯ ಸುದ್ದಿಯನ್ನು ಹೊತ್ತ ಮಡಿವಾಳ ಮಾಚಿದೇವರು ಆಗಮಿಸುತ್ತಾರೆ. ಆದರೆ ತಮ್ಮ ವಿಚಾರವನ್ನು ಬಿತ್ತರಿಸಿದರೆ ಕೇಳುವ ಕ್ರಾಂತಿ ಪುರುಷನೆಲ್ಲಿ ? ಅನಿರೀಕ್ಷಿತ ಪ್ರಸಂಗದಿಂದ ದಿಗ್ಭ್ರಾಂತರಾಗಿದ್ದಾರೆ. ಚೇತರಿಸಿಕೊಂಡು ಬಸವಣ್ಣನವರ ವ್ಯಕ್ತಿತ್ವ ಕುರಿತು ಹೀಗೆ ಹಾಡುತ್ತಾರೆ :

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣಾ !
ಮೆಟ್ಟಿಹ ಕೆರಹ ಕಳೆದುಹೋದಾತ ನೀನಲಾ ಬಸವಣ್ಣಾ !
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣಾ !
ಸೀಮೆ ಸಂಬಂಧವ ತಪ್ಪಿ ಹೋದಾತ ನೀನಲಾ ಬಸವಣ್ಣಾ !
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣಾ !
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು
ಹೋದೆಯಲ್ಲಾ ಬಸವಣ್ಣಾ !
ಬೆಳಗನುಟ್ಟು ಬಯಲಾದೆಯಲ್ಲಾ ಬಸವಣ್ಣಾ !
ಆ ಬಸವಣ್ಣಂಗೆ ಶರಣೆಂಬ ಪದವನೇ
ತೋರು ಕಂಡಾ ಕಲಿದೇವರದೇವಾ. (ವ. ಸಾ. ಸಂ. ಪುಟ 589)

ಉಟ್ಟಸೀರೆ ಎಂದರೆ ದೇಹ ಮತ್ತು ದೇಹಭಾವ. ದೇಹಭಾವವನ್ನು ಅಳಿದುಕೊಂಡು ಆತ್ಮಭಾವದಲ್ಲಿ ತಲ್ಲೀನರಾಗಿದ್ದ ಬಸವಣ್ಣನವರು ಈಗ ಆ ದೇಹವನ್ನೂ ಕಳಚಿದ್ದಾರೆ.

ಮೆಟ್ಟಿಹ ಕೆರಹ ಅಂದರೆ ಕುಲಮದ. ನಾನು ಶ್ರೇಷ್ಟ ಕುಲಜ ಎಂಬ ಮದವನ್ನು ಮೆಟ್ಟಿ, ಅದನ್ನೂ ತೊರೆದು ಮಹಾಪುರುಷರಾಗಿದ್ದಾರೆ. "ಕಟ್ಟಿದ ಮುಡಿಯನ್ನು ಬಿಟ್ಟು ಹೋಗಿದ್ದಾರೆ," ಅಂದರೆ 'ನಾನು ಅರಿದೆ, ಪರಮಾತ್ಮನ ಜ್ಞಾನವನ್ನು ಪಡೆದೆ' ಎಂಬ ಅಹಂಕಾರ ಸಹ ತೊಡೆದು ಹಾಕಿದ ನಿರ್ವಿಕಾರ ಮೂರ್ತಿಯಾಗಿದ್ದಾರೆ. ಈವರೆಗೆ ಇದ್ದ ಸೀಮೆ (Finity) ಸಂಬಂಧ (relation or attachment to earthly elements) ಗಳನ್ನು ಸಹ ತೊರೆದು ನಿಸ್ಸೀಮನಾದ ಪರಮಾತ್ಮನಲ್ಲಿ ಬೆರೆಯಲು ಹೊರಟಿದ್ದಾರೆ.

"ಲಿಂಗಕ್ಕೆ ಮಾಡಿದುದು ಸೋಂಕದೆ ಹೋದೆಯಲ್ಲಾ" ಎಂಬಲ್ಲಿ ಎರಡು ಅರ್ಥ ಮಾಡಬಹುದು. (1) ಬಸವಣ್ಣನವರು ಲಿಂಗೈಕ್ಯವಾದುದು ಅನಿರೀಕ್ಷಿತ ಪ್ರಸಂಗ. ಅವರ ಪೂಜಾನಂತರ ಪ್ರಸಾದದ ಆರೋಗಣೆ ಮಾಡಿಸಲಿಕ್ಕಾಗಿ ಅಡಿಗೆಯು ಪಾಕಗೃಹ ದಲ್ಲಿ ಸಿದ್ಧವಾಗಿದೆ. ಅದನ್ನು ಸಹ ರುಚಿನೋಡದೆ ದೇಹವನ್ನು ವಿಸರ್ಜಿಸಿದ್ದಾರೆ. 2) ಬಸವಣ್ಣನವರು ಮಹೋನ್ನತ ಸಾಧನೆಯನ್ನು ಮಾಡಿದರು; ಮನುಕುಲದ ಸೇವೆ ಮಾಡಿದರು. ಅದನ್ನು ಲಿಂಗಕ್ಕರ್ಪಿತವಾಗಲೆಂದು, ಕೇವಲ ಪರಮಾತ್ಮನ ಒಂದು ಅವಯವವಾಗಿ ತಾವು ಕಾರ್ಯ ಮಾಡುತ್ತಿರುವುದಾಗಿ ನಂಬಿ, ಮಾಡಿದೆ ಎಂಬುದನ್ನು ಮನದಲ್ಲಿ ಇರಿಸಿಕೊಳ್ಳದೆ ಮಾಡಿಹೋದರು.

ಅವರ ಬದುಕಿನಲ್ಲಿ ಅವರು ಒಯ್ದು ಹೋದುದು ಏನು? ಜಂಗಮಕ್ಕೆ ಅಂದರೆ ಸಮಾಜಕ್ಕೆ, ಜೀವಂತ ವ್ಯಕ್ತಿಗಳ ಸಮುದಾಯವಾದ ಮನುಕುಲಕ್ಕೆ ಮಾಡಿದ ಸೇವೆಯೊಂದನ್ನೇ! ಪರಮಾತ್ಮನ ದಿವ್ಯಾನುಭವದ ಮತ್ತು ಅವನ ದಿವ್ಯಾನುಗ್ರಹದ ಬೆಳಕನ್ನುಟ್ಟು ಆ ಬೆಳಕಿನಲ್ಲಿ ಬಯಲಾಗಿ ಬಿಟ್ಟರು.

ಈ ವಚನ ಬಸವಣ್ಣನವರು ಲಿಂಗೈಕ್ಯರಾದ ಕೊಂಚಕಾಲದಲ್ಲಿಯೇ ಬರೆಯಲ್ಪಟ್ಟು, ಒಂದು ಐತಿಹಾಸಿಕ ಘಟನೆಯನ್ನು ಸಾರಿ ಸಾರಿ ಹೇಳುತ್ತದೆ. ನೀಲಾಂಬಿಕಾ ದೇವಿಯ ಇನ್ನೊಂದು ಗೀತೆ ಇದಕ್ಕೆ ಪುಷ್ಟಿ ನೀಡುತ್ತದೆ.

> ನೋಡು ನೋಡು ನೋಡು ನೋಡು ನೋಡು ಲಿಂಗವೇ
> ನೋಡು ಬಸವಯ್ಯನವರು ಮಾಡಿದಾಟವ
> ನುಡಿಯಲಾಲಿಸು ಬೇಗ ಕೆಡುವುದೀ ಈ ಕಲ್ಯಾಣ
> ಒಡೆಯ ಸಂಗಮನೊಳು ಬೆರದನಂತೆ!

ಬಸವಣ್ಣನವರು, 'ಕಲ್ಯಾಣದಲ್ಲಿ ಕ್ರಾಂತಿ ಸಂಭವಿಸಲಿದೆ. ಹರಳಯ್ಯ-ಮಧುವಯ್ಯಗಳಿಗೆ ಬಿಜ್ಜಳನು ಎಳೆಹೂಟೆ ಶಿಕ್ಷೆ ಕೊಡುವನು. ಅದ್ದರಿಂದ ಪ್ರಮುಖ

ಶರಣರು ಅಲ್ಲಿಂದ ದೂರ ಹೋಗುವುದು ಲೇಸು ಎಂದು ಹೇಳಿಕಳುಹಿಸಿ, ತಾವು ಒಡೆಯ ಸಂಗಮನಲ್ಲಿ ಬೆರೆದಿದ್ದಾರೆ. "ಬೆರೆದಿದ್ದಾರೆ" ಎಂಬ ಶಬ್ದ ಬಸವಣ್ಣನವರ ಅಂತ್ಯ ಪ್ರಸಂಗವನ್ನು ಮಾರ್ಮಿಕವಾಗಿ, ಗಂಭೀರವಾಗಿ, ಯೌಗಿಕ ಪರಿಭಾಷೆಯಲ್ಲಿ ಹೇಳುತ್ತದೆ.

ಇದರಿಂದ ನಾವು ಕೆಲವೊಂದು ನಿರ್ಧಾರಕ್ಕೆ ಬರಬಹುದು.

೧. ಬಸವಣ್ಣನವರು ರಾಜದ್ರೋಹವನ್ನು ಮಾಡಿ ಸಿಂಹಾಸನ ಕಬಳಿಸುವ ಹಂಚಿಕೆ ಹಾಕಿದ್ದರಿಂದ ಬಿಜ್ಜಳನ ಸೈನಿಕರು ಬೆನ್ನುಹತ್ತಿದರು. ಆಗ ಓಡಿ ಹೋಗಿ ನದಿ ಹಾರಿದರು ಎಂಬ ಕಥೆಯಾಗಲೀ, ಅಥವಾ ಸೈನಿಕರೇ ರೋಷದಿಂದ ಹತಿಸಿದರು ಎಂಬುದು ನಿರಾಧಾರ, ಶುದ್ಧ ಸುಳ್ಳು.

ಅವರು ಪ್ರಾಣವನ್ನು ವಿಸರ್ಜನೆ ಮಾಡಿದ ಬಗೆಯನ್ನು ಅವರ ಸ್ವಂತ ರಚನೆಯ ವಚನಗಳು, ನೀಲಾಂಬಿಕೆಯ ಪದ, ಮಾಚಿದೇವರ ವಚನ ವಿವರಿಸುತ್ತವೆ. ಯೋಗ ಮುದ್ರೆಯಲ್ಲಿ ಕುಳಿತು ಪ್ರಶಾಂತವಾದ ಸ್ಥಿತಿಯಲ್ಲಿ ಬಯಲಾಗಿದ್ದಾರೆಂಬುದನ್ನು ಚಿತ್ರಿಸುತ್ತವೆ. ಒಂದು ವೇಳೆ ಸೈನಿಕರು ಬೆನ್ನು ಹತ್ತಿ ಹತ ಮಾಡಿದರು ಎಂದರೆ ನಾವೇನು ಸಂಕೋಚ ಪಡಬೇಕಾಗಿಲ್ಲ. ಏಕೆಂದರೆ ಬಸವಣ್ಣನವರು ಅವರ ವಚನಗಳಲ್ಲಿ ವ್ಯಕ್ತವಾದಂತೆ ದೇವನಿಷ್ಠ, ಧರ್ಮನಿಷ್ಠ, ಸ್ವಾಮಿನಿಷ್ಠ, ಪ್ರಜಾಪ್ರೇಮಿ. ಎಂಥ ಪ್ರಸಂಗದಲ್ಲೂ ಸ್ವಾರ್ಥಕ್ಕೆ ಬಲಿಯಾಗಿ ರಾಜದ್ರೋಹ ಮಾಡುವವರಲ್ಲ. ಸಂಪ್ರದಾಯವನ್ನು ವಿರೋಧಿಸಿ, ಮೂಢ ನಂಬಿಕೆಗಳನ್ನು ತಿರಸ್ಕರಿಸಿ ಕ್ರಾಂತಿ ಮಾಡಿದ್ದು ದಿಟ. ಇಂಥ ಸಮಾಜ ಪರಿವರ್ತನೆ, ಪಲ್ಲಟ ಬಯಸದ ಬಿಜ್ಜಳನೇ ಆದಿಯಾಗಿ ಸಂಪ್ರದಾಯ ನಿಷ್ಠರು ಅವರನ್ನು ಬೆನ್ನು ಹತ್ತಿ ಹತ ಮಾಡಿದರೆ ಬಸವಣ್ಣನವರನ್ನು ಓರ್ವ ಹುತಾತ್ಮರೆಂದು ನಾವು ಇನ್ನೂ ಹೆಚ್ಚು ಗೌರವಿಸಬೇಕಾಗುತ್ತದೆ. ಈ ರೀತಿಯ ವೀರ ಮರಣ ಅವರನ್ನು ಇನ್ನಷ್ಟು ಮೇಲಕ್ಕೇರಿಸುತ್ತದೆ.

ಆದರೆ ವಾಸ್ತವಿಕವಾಗಿ ಅವರು ಹತರೂ ಆಗಿಲ್ಲ, ಆತ್ಮಹತ್ಯೆಯನ್ನೂ ಮಾಡಿಕೊಂಡಿಲ್ಲ. ತಪಶ್ಶಕ್ತಿಯ ಬಲದಿಂದ ಇಚ್ಛಾಮರಣತ್ವವನ್ನು ತಂದುಕೊಂಡಿದ್ದಾರೆ. ಮೇಲಿನ ಅವಾಸ್ತವಿಕ ಕುಹಕ ಕಲ್ಪನೆಗಳು ಸುಳ್ಳಾದಂತೆ ಅತಿಭಕ್ತಿಯ ಪಿತ್ತ ತಲೆಗೇರಿ, 'ಸ್ಥಾವರ ಲಿಂಗವನ್ನು ಸೀಳಿಕೊಂಡು ಒಳಹೋದರು' ಎಂಬುದು ಅವಾಸ್ತವಿಕವೆ! ಲಿಂಗೋದ್ಭವ-ಲಿಂಗೈಕ್ಯಗಳು ಸ್ವಾಭಾವಿಕ ಕ್ರಿಯೆಗಳು. ಶರಣ ಧರ್ಮದ ಪರಿಭಾಷೆಯಲ್ಲಿ, "ಊಟವಾಯಿತೇನ್ರಿ?" ಎಂದು ನಾವು ಕೇಳುವುದಿಲ್ಲ. ಪ್ರಸಾದವಾಯಿತೆ? ಎನ್ನುತ್ತೇವೆ. ಅದರರ್ಥ ಊಟವಾಯಿತೆಂದೇ!

ಪ್ರಸಾದವೆಂದರೆ ದೈವಾನುಗ್ರಹ ಸೇಚನೆಯಿಂದ ಕೂಡಿದುದಷ್ಟೆ. ಹಾಗೆಯೇ ಹುಟ್ಟಿದ–ಸತ್ತ ಎಂಬ ಸಾಮಾನ್ಯ ಭಾಷೆ ಬಳಸದೆ ಲಿಂಗೋದ್ಭವನಾದ, ಲಿಂಗೈಕ್ಯನಾದ ಎಂಬುದೂ ದೈವಿಕ ಪರಿಭಾಷೆ. ಎಲ್ಲರೂ ಲಿಂಗದಲ್ಲಿ (ದೇವನಲ್ಲಿ) ಹುಟ್ಟಿ ಅಲ್ಲಿಯೇ ಅಡಗುವರು.

೨. 'ಕಾಯ ಬೆರಸಿ ಕೈಲಾಸಕ್ಕೆ ಹೋದರು' ಎಂದರೆ ಕೈಲಾಸವೆಂಬುದೊಂದು ತಾಣ. ಅದು ಮೇಲಿದೆ. ಅಲ್ಲಿಂದ ಶಿವದೂತರು ವಿಮಾನಗಳನ್ನು ತರುತ್ತಾರೆ. ಉಳಿದವರೆಲ್ಲ ಸಂಭ್ರಾಂತರಾಗಿ ನೋಡುವಾಗ, ಆ ವಿಮಾನವನ್ನೇರಿ ಮಹಾತ್ಮರು ಹೋಗಿ ಬಿಡುತ್ತಾರೆ." ಎಂಬ ಅರ್ಥ ಮಾಡಬಾರದು. ಕಾಯ ಬೆರೆಸಿ ಕೈಲಾಸಕ್ಕೆ ಹೋದರು ಎಂದರೆ ಇಚ್ಛಾಮರಣಿಗಳಾಗಿ, ಸ್ವಯಂ ಸಂಕಲ್ಪದಿಂದ ಪೂಜೆಗೆ ಕುಳಿತು ದೇಹವನ್ನು ಬಿಟ್ಟರು ಎಂದರ್ಥ. ಮುಪ್ಪು, ರೋಗ, ಅಪಘಾತಗಳಿಂದ ದೇಹವು ನಾಶವಾದಾಗ, ಬೇರೆ ಮಾರ್ಗವಿಲ್ಲದೆ ಆತ್ಮ ಆ ಮನೆಯನ್ನು ತೊರೆಯುವುದು ಬೇರೆ, ಆತ್ಮವೇ, 'ಈ ದೇಹ, ಇದರ ಚಟುವಟಿಕೆ, ಇಹಲೋಕ ವ್ಯಾಪಾರ ಸಾಕೆಂದು, ದೇವನಲ್ಲಿ ಲೀನವಾಗಬೇಕು' ಎಂದು ತಾನು ಹೊರಟು ಹೋದಾಗ, ದೇಹವು ನಿರ್ಜೀವವಾಗಿ ಜಡವಾಗುವುದು ಬೇರೆ. ಎರಡನೆಯದು ಉನ್ನತ ಸಿದ್ಧಿಯಾದರೆ, ಮೊದಲಿನದು ಸ್ವಾಭಾವಿಕ ಮರಣ. ಆದ್ದರಿಂದ ದೇಹಧಾರಿಗಳಾಗಿ ಕೈಲಾಸಕ್ಕೆ ಹೋದರೆಂದು ಹೇಳುವುದು ವಿಶೇಷ ನಿರೂಪಣೆ.

೩. ಬಸವಣ್ಣನವರು ಅದೃಶ್ಯರೇನಾಗಲಿಲ್ಲ; ಅದು ಸಾಧ್ಯವೂ ಇಲ್ಲ. ಮಣ್ಣಿನ ಕಾಯ ಮಣ್ಣಿನಲ್ಲಿ ಬೆರೆಯಲೇಬೇಕು. ಬಯಲಾದರು ಎಂದರೆ ಕಣ್ಮರೆಯಾದರು ಎಂದಲ್ಲ, ಮಣ್ಣಿನ ಕಾಯದ ರೂಪದಲ್ಲಿ ಇಲ್ಲವಾದುದು ಎಂದರ್ಥ.

ಶ್ರಾವಣಶುದ್ಧ ಪಂಚಮಿಯಂದು ಪೂಜೆಗೆ ಕುಳಿತು, ಅನುಸಂಧಾನದಲ್ಲಿರುವಾಗ ಪರಮಾತ್ಮನ ದಿವ್ಯಕರೆ ಕೇಳಿ, ಮರ್ತ್ಯಲೋಕದ ಬಾಳ್ವೆಗೆ ಮಂಗಲ ನೀಡುವ ಆಜ್ಞೆ ಕೇಳಿ ಬಂದಾಗ ಯೋಗಸಿದ್ಧಿಯ ಬಲದಿಂದ ದೇಹವಿಸರ್ಜನೆ ಮಾಡಿ, ದೇವನಲ್ಲಿ ಬೆರೆದ ಮಹಾನುಭಾವರು ಬಸವಣ್ಣನವರು. ಡಾ॥ ಬಾಡಾಲ ರಾಮಯ್ಯನವರ ಅಭಿಪ್ರಾಯದಂತೆ, ಶ್ರಾವಣಶುದ್ಧ ಪಂಚಮಿ ಆಗಸ್ಟ 4, 1981ಕ್ಕೆ ಬಸವಣ್ಣನವರು ಲಿಂಗೈಕ್ಯರಾಗಿ 785 ವರ್ಷಗಳಾದವು. (ಅವರು ಲಿಂಗೈಕ್ಯರಾದುದು 2-7-1196ರಂದು ನಳನಾಮ ಸಂವತ್ಸರ ಶ್ರಾವಣ ಶುದ್ಧ ಪಂಚಮಿ ಮಂಗಳವಾರದಂದು, ಎಂದವರ ಅಭಿಪ್ರಾಯ) ಇಂಥ ಮಹತ್ವದ ದಿನದಂದು ಬಸವಣ್ಣನವರನ್ನು ಆರಾಧಿಸಿ, ಅರಿತು, ಗೌರವಿಸಿ ಧನ್ಯರಾಗೋಣ.

★

ಮಾಮಿಡಿಯಲ್ಲಿ ಪ್ರಕಟವಾಗಿರುವ ಅನಾಮಧೇಯ ಲೇಖನಕ್ಕೆ ಉತ್ತರ

—ಜಗದ್ಗುರು ಮಾತೆ ಮಹಾದೇವಿ

'ಮಳೆ ಬಿಟ್ಟರೂ ಮರದ ಹನಿ ಬಿಡದು' ಎಂಬಂತೆ, 1980ನೆಯ ಇಸವಿ ಆಗಸ್ಟ್ 15ರಂದು ಪ್ರಕಟವಾದ ಪ್ರಜಾವಾಣಿಯ ಜಾಹಿರಾತು ಪುರವಣಿಯಲ್ಲಿ ಬೆಳಕು ಕಂಡ ನನ್ನದೊಂದು ಪುಟಾಣಿ ಲೇಖನಕ್ಕೆ ಸಾಕಷ್ಟು ಸಂದೇಹ ಮೈದಳೆದವು. ಅದಕ್ಕೆ ಉತ್ತರಗಳೂ ಪ್ರಕಟವಾದವು. ಇದೆಲ್ಲ ಸಂಭವಿಸಿ ಹನ್ನೊಂದು ತಿಂಗಳೇ ಸಂದವು. ಈಗ 'ಮಾಮಿಡಿ' ಎಂಬ ತ್ರೈಮಾಸಿಕ ಪತ್ರಿಕೆಯಲ್ಲಿ ಮತ್ತೆರಡು ಲೇಖನಗಳು ಮೂಡಿ ಬಂದಿವೆ. ಆದರೆ ಅವನ್ನು ಬರೆದ ಲೇಖಕರ ಹೆಸರುಗಳೇ ಅಲ್ಲೆಲ್ಲೂ ಇಲ್ಲ. ಹೀಗಾಗಿ ಲೇಖಕರ ವಿಚಾರಧಾರೆಯನ್ನು ನಿರ್ಧರಿಸುವುದು ಕಷ್ಟಸಾಧ್ಯ. ಪರವಾಗಿಯೇ ಆಗಲಿ ವಿರೋಧವಾಗಿಯೇ ಆಗಲಿ ಅಭಿಪ್ರಾಯ ಬರೆಯುವಾಗ, ಲೇಖಕರು ತಮ್ಮ ತಮ್ಮ ಹೆಸರನ್ನು ಕಾಣಿಸಬೇಕಾದ್ದು ಧರ್ಮ ಮತ್ತು ಬೌದ್ಧಿಕ ಪ್ರಾಮಾಣಿಕತೆ. ಆದ್ದರಿಂದ ಸದ್ಯಕ್ಕೆ ಅನಾಮಧೇಯ ಲೇಖಕರು ಎಂದು ಪ್ರಸಂಗ ಬಂದಾಗ ಬಳಸಿಕೊಳ್ಳುತ್ತೇನೆ. ಮುಂದೆ ಲೇಖಕರ ಹೆಸರು ತಿಳಿದು ಬಂದಾಗ ಅಲ್ಲಿ ಆ ಹೆಸರನ್ನು ಸೇರಿಸಬಹುದು.

ಎರಡು ಲೇಖನಗಳು, "ಬಸವಣ್ಣನ ದೀಕ್ಷಾಗುರು ಜಾತವೇದಿ ಶಿವಾಚಾರ್ಯ" ಮತ್ತು "ಇಷ್ಟಲಿಂಗ ಎಂದಿನದು?" ಎಂಬುವುಗಳಲ್ಲಿ ಅಲ್ಲಲ್ಲಿ ಕೆಲವು ಉಕ್ತಿಗಳು ಹಾಯ್ದಿವೆ. "ಮಹಾದೇವಿಯವರಿಗೆ ಈ ವಚನದ ಅರ್ಥವೂ ಆಗಿಲ್ಲ, ಅನುಭವ ಮೊದಲೇ ಆಗಿಲ್ಲ; ಅವರ ಅಧ್ಯಯನ ಅಧಿಕೃತವಲ್ಲ ಅವರ ಸಂಸ್ಕಾರ ಆನುಪೂರ್ವಿಯುಲ್ಲ; ಅಷ್ಟಕ್ಕೂ ಆಳವಾದ ಅನುಭವವಿಲ್ಲ, ಆಗಲು ಅನುವಿಲ್ಲ." ಇಲ್ಲೆಲ್ಲ ವೈಯಕ್ತಿಕ ಆಕ್ರೋಶವಲ್ಲದೆ ಬೇರೇನೂ ವ್ಯಕ್ತವಾಗಿಲ್ಲ. ಕೆಲವು ಅನವಶ್ಯಕ, ಛಂದೋಬದ್ಧ ಪದಗಳನ್ನು ಉಪಯೋಗಿಸಿ ಅಸ್ಪಷ್ಟವಾಗಿ ಬರೆಯುವುದು ಕೆಲವರ ಜಾಯಮಾನ. ಅದಷ್ಟೇ ಇಲ್ಲಿ ಪ್ರಕಾಶಗೊಂಡಿದೆ.

"ಬಸವಣ್ಣನ ಗುರು ಯಾರು?" ಎಂಬೊಂದು ಲೇಖನ ನಾನು ಬರೆದು, "ಬಸವಣ್ಣನಿಗೆ ಯಾರೂ ಗುರುವಿಲ್ಲ; ಪರಮಾತ್ಮನೇ ಅವರ ಗುರು. ಇಹದಲ್ಲಿ

ಅವರ ಬದುಕನ್ನು ರೂಪಿಸಿದ, ಅವರ ಬದುಕಿನಲ್ಲಿ ಮಂದ ಮಾರುತದಂತೆ ಹಾಯ್ದ ಅನೇಕ ವ್ಯಕ್ತಿಗಳು, ಶಿಕ್ಷಣ ನೀಡಿದ ವಿದ್ಯಾಗುರುಗಳು, ಮುಂತಾಗಿ ಇದ್ದಿರಬಹುದೇ ವಿನಾ ದೀಕ್ಷಾಗುರುಗಳು ಯಾರೂ ಇಲ್ಲ ಎಂದು ಸಾಧಾರ ಪೂರ್ವಕವಾಗಿ ವಿವರಿಸಿದ್ದೆ. ಈ ವಿಚಾರವನ್ನು ಅಲ್ಲಗಳೆದು ಆ ಲೇಖಕರು ಕೊಟ್ಟಿರುವ ಕೆಲವು ವಾದಗಳಿಗೆ ಉತ್ತರವನ್ನು ನಾನು ನೀಡಬಯಸಿದ್ದೇನೆ.

೧. ಗುರು ವಚನವಿಲ್ಲದೆ ಲಿಂಗವೆಂದೆನಿಸದು, ನಿತ್ಯವೆಂದೆನಿಸದು, ನೇಮವೆಂದೆನಿಸದು; ತಲೆಯಿಲ್ಲದ ಅಟ್ಟೆಗೆ ಪಟ್ಟವ ಕಟ್ಟುವ ಉಭಯ ಭ್ರಷ್ಟರ ಮೆಚ್ಚುವನೆ ನಮ್ಮ ಕೂಡಲ ಸಂಗಮದೇವ ?"

೨. ಶಿವಪಥವರಿವಡೆ ಗುರುಪಥ ಮೊದಲು.

೩. ಗುರುಪಥವ ಮೀರಿ ಮಾಡುವ ನೇಮ ಸಲ್ಲವು. ಸಲ್ಲವು. ಇವೆಲ್ಲವೂ ಬಸವಣ್ಣನ ಮಾತುಗಳು, ಬಸವ ಧರ್ಮದ ಸೂತ್ರಗಳು, ಬಸವಣ್ಣನ ಧಾರ್ಮಿಕ ಸಂವಿಧಾನ ವಿಧಿಸುವ ಕಟ್ಟುಕಟ್ಟಳೆಗಳು. ಈ ಕಟ್ಟು ಕಟ್ಟಳೆಗಳನ್ನು ಮಾಡಿದವನು ಆದಿಗುರು ಬಸವಣ್ಣ !

ಹಿಂದು ಸಮಾಜ ಅಥವಾ ಅಂದು ಇದ್ದ ಸಮಾಜದಲ್ಲಿ ಸಮಾನವಾದ ಒಂದು ಮಿರ್ಥಾಕ ಸಂಸ್ಕಾರವಿರಲಿಲ್ಲ. ಎಲ್ಲರನ್ನೂ ಒಂದು ಸಂಸ್ಕಾರದಿಂದ ಬೆಸೆಯಲು ಯಾವುದೇ ಸೂತ್ರವಿರಲಿಲ್ಲ. ಎಲ್ಲಿಯೋ ಹುಟ್ಟಿದ ಎರಡು ಚೇತನಗಳಾದ ತರುಣ–ತರುಣಿಯರನ್ನು ಹಿರಿಯರು ಸಮಾಜ ಸಾಕ್ಷಿಯಾಗಿ ವಿವಾಹ ಗೈಯುತ್ತಿದ್ದಂತೆಯೇ ಅವರು ಪರಸ್ಪರರಲ್ಲಿ ಒಂದು ಬಂಧನ, ಅಭಿಮಾನ ಮೂಡುತ್ತದೆ. ಅದೇ ರೀತಿ ಒಂದು ಧರ್ಮದಲ್ಲಿ ಹುಟ್ಟಿದ ವ್ಯಕ್ತಿಯನ್ನು ಯಾವುದಾದರೊಂದು ಸಂಸ್ಕಾರದ ಮುಖಾಂತರ ಆ ಧರ್ಮದೊಡನೆ ಬೆಸೆದರೆ ಮಾತ್ರ ಅವನಿಗೆ ತನ್ನ ಧರ್ಮದ ಬಗ್ಗೆ ಮಮತೆ ಹುಟ್ಟುವುದು. (ಅಹಿಂದು ಮತಗಳಿಗೆ ಮತಾಂತರ ಹೊಂದುವ ಅನೇಕ ಕಾರಣಗಳಲ್ಲಿ ಇದೂ ಒಂದು.) ಇದನ್ನರಿತು ಬಸವಣ್ಣನವರು ಗುರು ಕಾರುಣ್ಯವನ್ನು, ಸಂಸ್ಕಾರವನ್ನು ಆವಶ್ಯಕತೆ ಎಂದರಿತು ಕಡ್ಡಾಯಗೊಳಿಸಿದರು.

ಆದರೆ ಅವರು ಈ ತತ್ತ್ವವನ್ನು ಕಡ್ಡಾಯಗೊಳಿಸಿದ ಸಂವಿಧಾನಕರ್ತರಾದರೂ, ತಾವೊಂದು ವ್ಯಕ್ತಿಗುರುವನ್ನು ಪಡೆಯದೆ ದೇವರನ್ನೇ ನೇರವಾಗಿ ಗುರುವಾಗಿ ಪಡೆದವರು. ಬೆಂಗಳೂರಿನಿಂದ ಮುಂಬೈಗೆ ಹೋಗುವಾಗ ಹುಬ್ಬಳ್ಳಿ ಮಧ್ಯಂತರದ ಒಂದು ನಿಲ್ದಾಣ. ಉಗಿ ಬಂಡಿಯಲ್ಲಿ ಹೋಗುವವರಿಗೆ ಇದು ಸಿಗುತ್ತದೆ, ವಿಮಾನದಲ್ಲಿ ಹೋಗುವವರು ಅಲ್ಲಿ ಇಳಿಯಬೇಕಾದುದಿಲ್ಲ. ಹಾಗೆಯೇ ಜನಸಾಮಾನ್ಯರೆಲ್ಲರೂ, ಧರ್ಮದ ಗುರು

ಗಳೆಲ್ಲರೂ ಗುರುಕಾರುಣ್ಯದ ಮುಖಾಂತರ ದೈವಾನುಗ್ರಹ ಪಡೆದರೆ, ವಿಶೇಷ ಪ್ರವಾದಿಗಳಾದ, ಧರ್ಮಗಳ ಆದ್ಯರುಗಳಾದ ಬುದ್ಧ. ಏಸು, ಬಸವಣ್ಣ ಮುಂತಾದವರು ನೇರವಾಗಿ ದೈವಾನುಗ್ರಹಕ್ಕೆ ಪಾತ್ರರಾದುದೊಂದು ವಿಶೇಷ. ಪ್ರತಿಯೊಬ್ಬನಿಗೂ ಗುರುವಿರಬೇಕು, ಹಾಗೆಯೇ ಬಸವಣ್ಣನಿಗೂ ಎಂಬ ನಿರ್ಧಾರ ತಾರ್ಕಿಕವಲ್ಲ. ಬಸವಣ್ಣನಿಗಿಂತ ಮೊದಲು ಇನ್ನಾರಾರೋ ಇದ್ದರು ಎಂದೇ ಭಾವಿಸೋಣ. ಉದಾಹರಣೆಗೆ ವೀರಭದ್ರ ಇದ್ದ. ಅವನಿಗಾರು ಗುರು ? ಸರಿ, ಅವನಿಗೆ ಶಿವನು ಅಂದರೆ ಕೈಲಾಸ ಗಿರಿವಾಸಿ ಯೋಗಿರಾಜ ಶಿವನು ಗುರುವು ಎಂದು ಭಾವಿಸುವ. ಆ ಶಿವನಿಗಾದರೂ ಗುರುವು ಇರಲೇಬೇಕಷ್ಟೆ! ಒಬ್ಬ ಮಹಾಪುರುಷನಿಗೆ, ಯಾರಿಗೆ ನಾವು ಆದಿ ಗುರು ಎನ್ನಬಹುದೋ ಅವನಿಗಾದರೂ ಪರಮಾತ್ಮನಿಂದ ನೇರವಾಗಿ ಅನುಗ್ರಹವಾಗಿರಲೇ ಬೇಕು. ಅಂಥವರಿಗೇ ದ್ರಷ್ಟಾರರು ಎನ್ನುವುದು. ವೇದಗಳು ಅಪೌರುಷೇಯ ಎಂಬ ನಂಬಿಗೆಯಾದರೂ ಇಂಥ ಅರ್ಥವನ್ನೇ ಹೊಂದಿದುದು. ದಿವ್ಯ ದರ್ಶನ (Revelation), ಅನುಗ್ರಹಕ್ಕೆ ಪಾತ್ರರಾದ ದ್ರಷ್ಟಾರರೇ ದಾರ್ಶನಿಕರಾಗಿ ಶಾಸ್ತ್ರರಚನೆಗೆ ತೊಡಗುವುದು.

ಬಸವಣ್ಣನವರ ಜೀವನದಲ್ಲಿ ನಡೆದುದು ಇಂಥ ವಿಶೇಷ ಪ್ರಸಂಗ ! ಹರಿಹರನು ಹೇಳುವಂತೆ, ಸಂಗನೇ ಪತಿಯಾಗಿ, ಬಸವನೇ ಸತಿಯಾಗಿ ಕಾರುಣ್ಯಮಂ (Grace) ನೀಡಲು, ಅವರಿಗೆ ಸಾಮರ್ಥ್ಯ (power) ಕೂಡಿತು. ವಿದ್ಯುತ್ ಹರಿದಾಗ ಬೆಳಕು ಹೊಮ್ಮುವಂತೆ ದೈವೀಕರುಣೆ ಪ್ರವಹಿಸಲು, ಅಪಾರ ಶಕ್ತಿ ಅಭಿವ್ಯಕ್ತವಾಯಿತು.

ಬಸವಣ್ಣನವರ ತಪಸ್ಸನ್ನು ಬುದ್ಧನ ತಪಸ್ಸಿನೊಡನೆ ಹೋಲಿಸಿದುದನ್ನು ಅಸಂಗತ ಪ್ರಸಂಗ ಎಂದು ಅ. ಲೇಖಕರು ಬರೆದು ಒಂದು ಅಪೂರ್ವ ವಾಕ್ಯವನ್ನೂ ಹೊಂದಿಸಿದ್ದಾರೆ. "ಆತ (ಬುದ್ಧ) ಸಂಸಾರ ತ್ಯಜಿಸಿ ಅಂತಶ್ಚಿಂತನೆಗೆ ಹೋದಾತ ! ಬಸವಣ್ಣ ಸಂಸಾರ ತ್ಯಜಿಸದೆ, ಸಮಾಜ ತ್ಯಜಿಸದೆ ಲೋಕ ಚಿಂತನೆಗೆ ನಿಂತಾತ ! ಈತನಿಗೆ ಅಂತಶ್ಚಿಂತನೆ ಮಾಡಲು ಅವಕಾಶ ತಾನೇ ಎಲ್ಲಿ ?" ಅನಾಮಧೇಯ ಲೇಖಕರ ಈ ಮಾತು Philosophy of Mysticism ನ ಮೂಲ ಸೂತ್ರಗಳನ್ನೇ ಅವರು ಅರಿತಿಲ್ಲ ಎಂಬುದನ್ನು ಅಂಗೈಯಲ್ಲಿಟ್ಟಷ್ಟು ಸ್ಪಷ್ಟವಾಗಿ ತೋರುತ್ತದೆ. ಅಂತಶ್ಚಿಂತನೆ ಆತ್ಮ ಶಕ್ತಿಯ ವಿಕಾಸದ ಮೂಲ ಸಾಧನ. ಈ Introspection ಅಥವಾ ಅಂತರಾವಲೋಕನ ಬುದ್ಧನಂತಹ ಯೋಗಿಗಳಿಗೆ ಮಾತ್ರವಲ್ಲ ಐನ್‌ಸ್ಟೀನ್, ಆರ್ಕಿಮಿಡಿಸ್‌ರಂತಹ ವಿಜ್ಞಾನಿಗಳಿಗೆ, ಕಾರ್ಲ್‌ಮಾರ್ಕ್ಸ್‌ನಂತಹ ಅರ್ಥಶಾಸ್ತ್ರಜ್ಞರಿಗೆ, ಕುಮಾರ ವ್ಯಾಸನಂತಹ ಸಾಹಿತಿಗಳಿಗೆ, ನೆಪೋಲಿಯನ್ ಬೋನೋಪಾರ್ಟ ನಂತಹ ರಾಜರಿಗೆ ಸಹ ಅತ್ಯವಶ್ಯಕ. ಯಾರು ಯಾವುದಾದರೊಂದು ವಿಷಯದ ಬಗ್ಗೆ ಅಂತಶ್ಚಿಂತನೆ ಮಾಡರೋ ಆ ವಿಷಯದ ಬಗ್ಗೆ ಅವರಿಗೆ ಪರಿಣತಿ ಸಾಧಿಸದು.

ಇನ್ನು ಧಾರ್ಮಿಕ ಸಿದ್ಧಿಯ ಜೀವಾಳವೇ ಈ ಅಂತಶ್ಚಿಂತನೆ. ಬಸವಣ್ಣನವರಲ್ಲಿ ಈ ಅಂತಶ್ಚಿಂತನೆಯ ಅದ್ಭುತ ಶಕ್ತಿ ಇತ್ತೆಂದೇ ಅವರು ಅನುಭವ ಪ್ರಧಾನ ಸಾಹಿತಿಗಳಾದರು, ನವಧರ್ಮ ದ್ರಷ್ಟಾರರಾದರು. ಬಸವಣ್ಣನವರು ಸಾಮಾಜಿಕ ಬದುಕನ್ನು ತೊರೆಯಲಿಲ್ಲ ಎಂದ ಮಾತ್ರಕ್ಕೆ ಅವರು Introspection ಮಾಡಲಿಲ್ಲ ಎಂಬುದು ಅಪಕ್ವ ವಿಚಾರಧಾರೆ. ಕೆಲವರು ಬುದ್ಧ, ಮಹಾವೀರರಂತೆ ಬಹಿರಂಗವನ್ನು ತೊರೆದು ಅಂತರಂಗದ ಆಳಕ್ಕಿಳಿದರು ; ಬಸವಣ್ಣ, ಜನಕ, ಮಹಾತ್ಮಗಾಂಧೀಜಿಯವರಂಥವರು ಬಹಿರಂಗವನ್ನು ಬಹಿಷ್ಕರಿಸದೆ ಅಂತರಂಗದ ಆಳಕ್ಕಿಳಿದರು. ಬಸವಣ್ಣನವರು ಸಮಾಜ ವಿಜ್ಞಾನಿ, ಅರ್ಥಶಾಸ್ತ್ರಜ್ಞ, ರಾಜಕಾರಣ ಮುತ್ಸದ್ಧಿ, ಸಾಹಿತ್ಯ ಸೌರ್ವಭೌಮರಾಗಿದ್ದಂತೆಯೇ ಅಸಾಮಾನ್ಯ ಯೋಗಿ ಮತ್ತು ದಾರ್ಶನಿಕರಾಗಿದ್ದರು. ಬಹಿರಂಗದಲ್ಲಿ ಹಂತಹಂತವಾಗಿ ರಾಜಕೀಯದಲ್ಲಿ ಮೇಲೇರಿದರೂ, ಅಂತರಂಗದಲ್ಲಿ ಅಧ್ಯಾತ್ಮ ಸಿದ್ಧಿ–ವ್ಯಕ್ತಿತ್ವಗಳು ಅಷ್ಟೇ ಪರಿಪಕ್ವಗೊಳ್ಳತೊಡಗಿದವು.

೧. ಜ್ಞಾನದ ಗಮನದ ಸಹಜದ ಉದಯದಲ್ಲಿ ಏನೆಂದರಿಯೆನು ;
ಲಿಂಗದ ಬೆಳಗು ಒಳಕೊಂಡುದಾಗಿ ಏನೆಂದ್ಧರಿಯೆನು.
ಕೂಡಲಸಂಗಮದೇವನ ಧ್ಯಾನದಲ್ಲಿ ನಾನೇನೆಂದರಿಯೆನು.

ಬ. ಷ. ವ. 849

೨. ಆಲಿಕಲ್ಲ ಹರಳಿನಂತೆ ಅರಗಿನ ಪುತ್ಥಳಿಯಂತೆ
ತನುಕರಗಿ ನೆರೆವ ಸುಖವ ನಾನೇನೆಂಬೆ.
ಕಡೆಗೋಡಿವರಿದುವೆನಗಯ್ಯಾ ನಯನದ ಸುಖಜಲಂಗಳು !
ನಮ್ಮ ಕೂಡಲ ಸಂಗಮದೇವರ ಮುಟ್ಟಿ
ನೆರೆವ ಸುಖವ ನಾನೇನೆಂಬೆ ! ಬ. ಷ. ವ. 847.

ಇಂತಹ ಅಪೂರ್ವ ದಾರ್ಶನಿಕ ಅನುಭವಗಳು (Mystic Experiences) ಅಂತರ್ಮುಖಿಗಳು, ಅಂತಶ್ಚಿಂತನಾಸಕ್ತರಿಗಲ್ಲದೆ ಸಾಧ್ಯವಾಗದು. ಅವರಿದನ್ನು ಬುದ್ಧನಂತೆ ಕಾಡಿನಲ್ಲೇ ಸಾಧಿಸಲಿ, ಬಸವಣ್ಣನಂತೆ ಮಹಾಮನೆಯ ಜವಾಬ್ದಾರಿ–ಜಂಜಡದ ನಡುವೆಯೇ ಸಾಧಿಸಲಿ ! ಜಿ. ಎಸ್. ಶಿವರುದ್ರಪ್ಪನವರು ಒಂದೆಡೆ ಬರೆದಂತೆ,

ನೀನಲ್ಲ ಏಕಾಂಗಿ, ನೀನಲ್ಲ ಯಾವುದೋ ದೂರ
ಗುಹಾವಾಸದೇಕಾಂತದಲಿ ಬದುಕಿದ ಸಿದ್ಧ............
ಸಂಸಾರದಲೆಗಳ ನಡುವೆ ಹೋರಾಡುತ್ತಲೇ ನಿಂತ ಸಾಧಕ ವೀರ ನೀನು
ಅಜ್ಞಾನಿಗಳ ನಡುವೆ ಪರಮ ಸುಜ್ಞಾನಿಗಳ ನಡುವೆ

ಮತ–ಮೌಢ್ಯಗಳ ನಡುವೆ, ಸದ್ದಿರದೆ ಕೈಮುಗಿದು
ನಿಂತ ದೀಪದ ಕಂಬ, ನಿನ್ನ ಸುತ್ತಲೂ ಬಂದು
ಸಂಗಮವಾಯ್ತು ನೂರು ಬೆಳಕಿನ ಬಿಂಬ.

ಒಮ್ಮೊಮ್ಮೆ ಅಂತರ್ಮುಖ ಜೀವನದ ಅಮೃತ ಸಾಗರದಲ್ಲೇ ಹಗಲಿರುಳು ತೇಲಾಡಬೇಕು ಎಂಬ ಪ್ರಲೋಭನೆ (!) ಬಸವಣ್ಣನ ಮನಸ್ಸಿಗೆ ಆಗಿರಲು ಸಾಕು.

ಗ್ರಹ ಬಂದು ಆವರಿಸಲೊಡನೆ ತನ್ನ ಮರೆಸುವುದು
ಮತ್ತೊಂದಕ್ಕಿಂಬುಗೊಡಲೀಯದಯ್ಯಾ.
ಕೂಡಲ ಸಂಗಮದೇವನ ಅರಿವು ಅನುಪಮವಾಗಲೊಡನೆ
ಬೆವಹಾರದೊಳಗಿರಲೀಯದಯ್ಯಾ.

ಬ. ಷ. ವ. 909.

ಹೇಗೆ ಸಿರಿವಂತನಾದವನು ತನ್ನ ಸುಖದ–ಸೌಲಭ್ಯದ ಬದುಕಿನಿಂದ ಬಡತನದ ಬವಣೆಗೆ ಸಿಕ್ಕಲು ಇಚ್ಛಿಸನೋ, ಅದೇ ರೀತಿ ಲಿಂಗಾನುಭಾವದ ಸೊಗಸಿನನುಭವದಲ್ಲಿ ಆನಂದಿಸುವ ಜ್ಞಾನಿಗೂ ಬೆವಹಾರದ ಲೋಕ ಇಚ್ಛೆಯಿಲ್ಲದ್ದು, ಬೇಡವಾದುದು. ಅಂತೆಯೇ ಜಗತ್ತಿನ ಅನೇಕ ಸಂತರು ಅದೇ ಸ್ಥಿತಿಯಲ್ಲಿ ಉಳಿಯಬಯಸಿದರು. ಆದರೆ ಕೆಲವರು ಬಹಳಷ್ಟು ಶ್ರೀಮಂತರಿದ್ದರೂ ಬಡತನದ ಬದುಕಿನ (ಅರ್ಥಾತ್ ಸರಳತೆಯ) ಪಥದಲ್ಲಿ ಇರಬಯಸುವಂತೆ ಕೇವಲ ಕೆಲವೇ ಕೆಲವು ಸಂತರು ಮಾತ್ರ ತಮ್ಮ ಮನಸ್ಸನ್ನು ಲೋಕ ಸೇವೆಯಲ್ಲಿ ಮತ್ತು ಬೆವಹಾರದಲ್ಲಿ ತೊಡಗಿಸುವರು. ಇಂಥ ವಿಭೂತಿ ಬಸವಣ್ಣ! ಸಂಗಮದೇವನ ಅರಿವು ಅನುಪಮವಾಗಿ, ಮನಸ್ಸು ಬೆವಹಾರ ಲೋಕಕ್ಕಿಳಿಯಲು ಇಚ್ಛಿಸದಿದ್ದರೂ ಅದನ್ನು ಲೋಕ ಸಂಗ್ರಹಕ್ಕಾಗಿ ತೊಡಗಿಸಿದವನು. ಷಟ್‌ಸ್ಥಲದ ಆರೋಹಣ ಮಾಡಿ ಐಕ್ಯ ಸ್ಥಲದಲ್ಲಿ ನಿಂತವರು ಕೆಲವರಾದರೆ, ಅದನ್ನು ಸಾಧಿಸಿಯಾದ ಬಳಿಕ ಮರ್ತ್ಯದ ಉದ್ಧಾರಕ್ಕಾಗಿ ಮತ್ತೆ ಅವರೋಹಣ ಕ್ರಮವಿಡಿದು 'ಮಹಾಭಕ್ತ' ಸ್ಥಲದಲ್ಲಿ ನಿಂತ ವಿಭೂತಿ ಪುರುಷ ಬಸವಣ್ಣ. ಇಂಥ ಸ್ಥಿತಿಯನ್ನು ಪ್ರಾಪ್ತ ಮಾಡಿಕೊಳ್ಳಲು ಅಂತಶ್ಚಿಂತನೆಯೇ ಮುಖ್ಯ ಸಾಧನ. ಅದನ್ನು ಬಸವಣ್ಣ ಮಾಡದೆಯೇ ಸಮಾಜ ಸುಧಾರಕ ಮಾತ್ರವೇ ಆದ ಎಂದರೆ ಅವನನ್ನೊಬ್ಬ ಸಾಮಾನ್ಯ ರಾಜಕಾರಣಿ ಎಂದು ನಾವು ಅರ್ಥೈಸಿದಂತೆ ಆಗುತ್ತದೆ. ಬಹಿರ್ಮುಖ ವೃತ್ತಿಯ ರಾಜ ಕಾರಣಿಯ ಲೇಖನಿಯಿಂದ ಅಪೂರ್ವ ದಾರ್ಶನಿಕ ಸಾಹಿತ್ಯ ಮೂಡುವುದು ಸಾಧ್ಯವೇಇಲ್ಲ.

"ಗುರು ತತ್ತ್ವ"ವು ಬೇಕೇ ಬೇಕು ಎಂದು ಹೇಳಿದ ಬಸವಣ್ಣನವರಿಗೊಬ್ಬ ಗುರುವಿರಬೇಕು ಎಂಬ ಒಂದು ತರ್ಕವನ್ನು ಅನಾಮಧೇಯ ಲೇಖಕರು ಮುಂದಿಟ್ಟ

ದ್ದಾರೆ. ಸಾಮಾನ್ಯವಾಗಿ ಪ್ರವಾದಿಗಳಿಗೆ ಗುರುವು ಇರನು. ದೇವರಿಂದ ನಿರ್ಮಿಸಲ್ಪಟ್ಟ ಜಗತ್ತು ಕಾರ್ಯಕಾರಣ ಸಂಬಂಧದಿಂದ ಕೂಡಿದೆ. ಕಾರ್ಯಕ್ಕೊಂದು ಕಾರಣವಿದೆ. ಈ ಕಾರ್ಯಕಾರಣ ಪರಂಪರೆಯನ್ನು ಹಿಂದರಿಸುತ್ತ ಹೋದರೆ ತಾನು ಎಲ್ಲದಕ್ಕೂ ಕಾರಣನಾಗಿ ತನಗೆ ಕಾರಣವಿಲ್ಲದಿರುವವನೇ ದೇವರು. 'ಎಲ್ಲದಕ್ಕೂ ಕಾರಣವಿದೆ; ಹಾಗೆಯೇ ದೇವರಿಗೂ ಕಾರಣವಿರಬೇಕು' ಎಂಬುದು ಹಾಸ್ಯಾಸ್ಪದ ನಿರ್ಣಯವಾದಂತೆ, 'ಎಲ್ಲರಿಗೂ ಗುರುವಿರಬೇಕು. ಹಾಗೆಯೇ ಪ್ರವಾದಿಗೂ ಸಹ' ಎಂಬುದು ಅಷ್ಟೇ ಹಾಸ್ಯಾಸ್ಪದ. ಬುದ್ಧನು ಬೌದ್ಧ ಧರ್ಮದ ಸ್ಥಾಪಕ ; ಆ ಮೊದಲು ಅವನು ಯಾರಿಂದಲಾದರೂ ಅನುಗ್ರಹ ಪಡೆದಿದ್ದರೂ ಪಡೆದಿರಬೇಕು. ಆದರೆ ಅವನು ಸ್ವೀಕರಿಸಿದ್ದು ಬೌದ್ಧ ಧರ್ಮದ ದೀಕ್ಷೆಯಲ್ಲ, ಪ್ರಚಲಿತವಿದ್ದ ಯಾವುದಾದರೊಂದು ಮತಪಂಥದ ದೀಕ್ಷೆ ನಂತರ ಬೌದ್ಧ ಧರ್ಮ ಸ್ವೀಕಾರದ ವಿಧಿವಿಧಾನಗಳನ್ನು ಅವನು ಆರಂಭಿಸಿದ. ಏಸುವು ತಾನು ಹುಟ್ಟಿದ ಯಹೂದ್ಯ ಧರ್ಮದ ಸಂಪ್ರದಾಯದಂತೆ ಬ್ಯಾಪ್ಟಿಸಮ್ ಮಾಡಿಸಿಕೊಂಡ. ಆದರೆ ನಂತರದಲ್ಲಿ ಅವನೇ ಕ್ರೈಸ್ತ ಧರ್ಮದ ಆದಿ ಪುರುಷನಾಗಿ ಕ್ರೈಸ್ತ ಧರ್ಮದ ವಿಧಿ ವಿಧಾನ ಆರಂಭಿಸಿದ. ಬಸವಣ್ಣನವರು ಸಹ ತಮ್ಮ ಜಾತಿ ಸಂಸ್ಕಾರಕ್ಕೆ ಅನುಗುಣವಾದ ಜನ್ನಿವಾರ ಸಂಸ್ಕಾರ ಪಡೆದಿದ್ದಿರಬಹುದು; ಇಲ್ಲವೇ ಪಡೆಯುವ ಮುನ್ನವೇ ಮನೆಯನ್ನು ತೊರೆದಿರಬಹುದು. ಆದರೆ ಶೈವ ಧರ್ಮದ ಒಂದು ದೀಕ್ಷೆಯಾದ ಸಮಯಾಚಾರ ದೀಕ್ಷೆಯನ್ನು ಅವರು ಪಡೆದಿರುವುದು ದಿಟ. ಅನೇಕ ಶೈವ ಮುನಿಗಳು ಹೆಣ್ಣು-ಗಂಡೆನ್ನದೆ, ಬಡವ ಬಲ್ಲಿದರೆನ್ನದೆ, ಹಾರುವ-ಅಂತ್ಯಜರೆನ್ನದೆ ಈ ಸಮಯಾಚಾರ ದೀಕ್ಷೆಯನ್ನು ಕೊಟ್ಟಿದ್ದಾರೆ. ಅದು ಪ್ರತಿಯೊಬ್ಬ ಅನುಯಾಯಿಯೂ ಕಡ್ಡಾಯವಾಗಿ ತೆಗೆದುಕೊಳ್ಳುವ ದೀಕ್ಷೆ-ಬಸವ ಪ್ರಣೀತ ಲಿಂಗದೀಕ್ಷೆಯಂತಲ್ಲ, ಸ್ವಇಚ್ಛೆಯಿಂದ ಮುಮುಕ್ಷುಗಳು ಗುರುಸನ್ನಿಧಿಗೆ ಹೋಗಿ ತೆಗೆದುಕೊಳ್ಳುವಂಥದ್ದು. ಶ್ರೀ ಬಾಡಾಲ ರಾಮಯ್ಯನವರ ಅಭಿಪ್ರಾಯದಂತೆ ಆಂಧ್ರದ ಕೆಲವು ಶೈವ ಬ್ರಾಹ್ಮಣ ಕುಲಗಳಲ್ಲಿ ಒಂದೇ ದಿನ ಉಪನಯನ ಸಂಸ್ಕಾರ, ಸಮಯದೀಕ್ಷೆ ಎರಡನ್ನೂ ತೆಗೆದುಕೊಳ್ಳುವ ಪರಿಪಾಠವಿದೆಯಂತೆ. ಶೈವಧರ್ಮದಲ್ಲಿ ಬರುವ ಈ ಸಂಸ್ಕಾರವನ್ನು ಬಸವಣ್ಣ ಪಡೆದು ಶಿವಪಥದಲ್ಲಿ ನಡೆಯಬಯಸಿದವರ ಭಕ್ತಿಪಕ್ಷವನ್ನು ಸೇರಿದ್ದಾನೆ. 'ಇಂಥದೊಂದು ದೀಕ್ಷೆ ಪಡೆದಾದ ಬಳಿಕ ಆತ್ಮವೇ ಆರಾಧ್ಯವೆಂದರಿದು, ಶಿವಪಥದಲ್ಲಿ ನಡೆಯುವವರೇ ಬಂಧುಗಳೆಂದು ಅರಿಯಬೇಕೇ ವಿನಾ ನಂಟರಿಷ್ಟರನ್ನಲ್ಲ' ಎಂದು ವಚನ. 89 ರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಬಸವಣ್ಣ ಬಾಲಕನಿದ್ದಾಗ ಪಡೆದುಕೊಂಡ ಸಮಯಾಚಾರ ದೀಕ್ಷೆಗೂ ತಾನು ರೂಪಿಸಿದ ಹೊಸ ಧರ್ಮದಲ್ಲಿ ಬಳಕೆಗೆ ತಂದ ಲಿಂಗ ದೀಕ್ಷೆಗೂ ತುಂಬಾ ವ್ಯತ್ಯಾಸಗಳಿವೆ.

ಬಸವಣ್ಣನವರಿಗೆ ನಿರಾಕಾರ, ಬಯಲಿನಿಂದ ಇಷ್ಟಲಿಂಗ ಬಂದಿತೆಂದಾಗಲೀ ಅಥವಾ ವೃಷಭ ಶಿಲಾ ವಿಗ್ರಹದಿಂದ ಬಂದಿತೆಂದಾಗಲೀ ನಮ್ಮ ಅಭಿಪ್ರಾಯವಲ್ಲ. ನಿರಾಕಾರ ನಿರ್ಗುಣ ಪರಂಜ್ಯೋತಿ ಸ್ವರೂಪವಾದ ಪರಮಾತ್ಮ ತತ್ತ್ವವು ಅವರಲ್ಲಿ ಅವತರಣವಾಗಿ ಅಪೂರ್ವ ಅನುಭವ ನೀಡಿತು. ಅವರು ಅನನ್ಯವಾಗಿ ಆರಾಧಿಸುತ್ತಿದ್ದ ಶಿವನ ಆಕಾರದ ಸಗುಣ ರೂಪದಲ್ಲಿ ಕಾಣಿಸಿಕೊಂಡು ಹಸ್ತಮಸ್ತಕ ಸಂಯೋಗ ಮಾಡಿತು. ಅದೇ ವೇಳೆಯಲ್ಲಿ ಬಸವಣ್ಣನವರ ಮನಸ್ಸಿನಲ್ಲಿ ಅಂತಃಸ್ಫುರಣವಾಗಿ, ನಿರಾಕಾರ ದೇವರನ್ನು ಕುರುಹೊಂದರ ಮುಖಾಂತರ ಸಾಕಾರಗೊಳಿಸಿ ಪೂಜಿಸುವ, ಆ ಲಾಂಛನದಲ್ಲಿ ತಾತ್ತ್ವಿಕ, ಯೌಗಿಕ, ಅಧ್ಯಾತ್ಮಿಕ ಅರ್ಥ ಹುದುಗಿಸುವ ಆಲೋಚನೆ ಮೂಡಿದೆ. ಆ ಆಲೋಚನೆಯನ್ನು ನಂತರ ಅವರೇ ಸ್ವತಃ ಕಾರ್ಯಗತಗೊಳಿಸುತ್ತಾರೆ. ಆ ವರೆಗೆ ದೇವಾಲಯದ ಸ್ಥಾವರಲಿಂಗ ಶಿವನ ಸಂಕೇತವಾಗಿ ಪೂಜಿಸಲ್ಪಡುತ್ತಿತ್ತು. ಆ ಆಕಾರಕ್ಕೆ ಬಸವಣ್ಣನು ಹೊಸದೊಂದು ಅರ್ಥವನ್ನು ನೀಡಿ, ಹುಟ್ಟು ಲಿಂಗವನ್ನು ದೇಹದ ಆಕಾರದಲ್ಲಿ ಆತ್ಮನ ಸಂಕೇತವಾಗಿ, ಮೇಲಿನ ಗೋಲಾಕಾರದ ಕಂಥೆಯನ್ನು ವಿಶ್ವದ ಆಕಾರದಲ್ಲಿ ಪರಮಾತ್ಮನ ಸಂಕೇತವಾಗಿ ಕುರುಹುಗೊಳಿಸಿ, 'ಪರಮಾತ್ಮನಲ್ಲಿ ಜೀವಾತ್ಮ ಇಂಬಿಡಲ್ಪಟ್ಟಿದ್ದಾನೆ. ಬ್ರಹ್ಮಾಂಡದಲ್ಲಿ ಪಿಂಡಾಂಡವಿದೆ' ಎಂಬುದನ್ನು ಸಂಕೇತಿಸಿ ತೋರಿಸಿದ್ದಾರೆ ಹರಿಹರನ ಬಸವರಾಜದೇವರ ರಗಳೆಯಲ್ಲಿ ಪ್ರಸ್ತಾಪವಾಗುವ ಬೀಳ್ಕೊಡುಗೆ ಪ್ರಸಂಗದಲ್ಲಿ ಇದು ಅಭಿವ್ಯಕ್ತಗೊಳ್ಳುತ್ತದೆ. Conversion from polytheism to monotheism. ಬಹುದೇವೋಪಾಸನೆಯಿಂದ ಏಕದೇವೋಪಾಸನೆಗೆ ಬಂದ ಒಂದು ಘಟ್ಟ ಇದು. ಆವರೆಗೆ ಇದ್ದ ಸ್ಥಾವರ ಲಿಂಗದ ಮೋಹ ಹರಿದು, ಎಲ್ಲೆಡೆಯೂ ಇಪ್ಪ, ಜಗದಗಲ ಮುಗಿಲಗಲನಾಗಿ ಇಪ್ಪ ದೇವನು ಚುಳುಕಾಗಿ ಬಂದುದನ್ನರಿತು ಅವರ ಮನದಲ್ಲಿ ಆನಂದದವಾಹಿನಿ ಹರಿದಿದೆ. ಹೀಗೆ ಇಷ್ಟಲಿಂಗ ಲಾಂಛನವು ಬಸವಣ್ಣನವರ ಸ್ವತಂತ್ರ ಕೊಡುಗೆ.

ಲಿಂಗಪೂಜೆ ಎಂದಿನಿಂದಲೂ ಇತ್ತು ಎಂಬ ವಾದವನ್ನು ಮತ್ತೆ ಮಂಡಿಸಿದ್ದಾರೆ. ಇನ್ನೊಂದಾವುದೋ ಲೇಖನದಲ್ಲಿ ಇಷ್ಟಲಿಂಗಪೂಜೆ (ಅಂದರೆ ಲಿಂಗಾಯತ ಧರ್ಮೀಯರು ಧರಿಸುವ ಆಕಾರದ ಲಿಂಗ) ಹರಪ್ಪಾ-ಮೊಹೆಂಜೋದಾರೋದಲ್ಲಿ ಸಹ ಇತ್ತು ಎಂಬುದಾಗಿ ಇನ್ನೋರ್ವರು ಪ್ರತಿಪಾದಿಸಿದ್ದಾರೆ. ಪೂಜ್ಯ ಶ್ರೀ ಲಿಂಗಾನಂದ ಸ್ವಾಮಿಗಳು ಸಹ 'ಲಿಂಗತತ್ತ್ವ ದರ್ಪಣ' ಎಂಬ ಒಂದು ಪುಸ್ತಕವನ್ನು ಬರೆದು ಅದರಲ್ಲಿ ಈ ವಿಚಾರ ಪ್ರತಿಪಾದಿಸಿದ್ದರು. "ನೀವು ಹೇಗೆ ಹೇಳಿದಿರಿ" ? ಎಂದು ಒಬ್ಬೊಬ್ಬರನ್ನೇ ಕೇಳುತ್ತಾ ಹೋದರೆ, 'ನಾವು ಆ ಪುಸ್ತಕದಲ್ಲಿ ಓದಿದೆವು' ಎಂದು ಹೇಳುತ್ತಾ ಹೋದರು. ರಾಷ್ಟ್ರೀಯ ವಸ್ತು ಸಂಗ್ರಹಾಲಯದಲ್ಲಿ ಸ್ವತಃ ನೋಡಿದಾಗ ಕಂತೆಯ ಲಿಂಗಗಳು ಕಾಣಬರದೆ, ಕಾಶಿ ಮುಂತಾದ ಕಡೆಗಳಲ್ಲಿ ಕಾಣಬರುವ ಕೆಳಗೊಂದು

ಪಾಣಿ ಬಟ್ಟಲು ಮೇಲೆ ಗೋಳಾಕಾರದ ಲಿಂಗಮಾತ್ರ ಕಾಣಬರುವದು ಸಿಂಧೂ ಸಂಸ್ಕೃತಿಯ ನಾಗರಿಕತೆಯ ವಿಭಾಗದಲ್ಲಿ ನಾವು ಪ್ರತ್ಯಕ್ಷ ಕಂಡುದು ಇದು.

"ಲಿಂಗಪೂಜೆ" ತುಂಬಾ ಪುರಾತನ. ಆರ್ಯರ ಆಗಮನಕ್ಕೆ ಪೂರ್ವದ ಸಿಂಧೂ ಸಂಸ್ಕೃತಿಯ ವೇಳೆಗಾಗಲೇ ಪಶುಪತಿಯ ಆರಾಧನೆ, ಮಾತೃದೇವತೆ (ಪಾರ್ವತಿ)ಯ ಆರಾಧನೆ, ಲಿಂಗಪೂಜೆ ಪ್ರಚಲಿತಗೊಂಡವು. 'ಲಿಂಗ' ಶಬ್ದ ಬಳಕೆಯಲ್ಲಿತ್ತು ಎಂದ ಮಾತ್ರಕ್ಕೆ, "ಲಿಂಗಪೂಜೆ" ಇತ್ತು ಎಂದ ಮಾತ್ರಕ್ಕೆ, ಬಸವೋತ್ತರ, ಬಸವ ಪ್ರಣೀತದ ಬಗೆಯ ಇಷ್ಟಲಿಂಗ ಪೂಜೆ ಇತ್ತು ಎಂದರ್ಥವಾಗದು. ಗಾಂಧೀ ಎಂಬ ಅಡ್ಡ ಹೆಸರು ಬಹಳ ವರ್ಷಗಳಿಂದ ಇದೆ. ಅಂದ ಮಾತ್ರಕ್ಕೆ ರಾಷ್ಟ್ರಪಿತ ಮಹಾತ್ಮಾ ಗಾಂಧೀ ಹದಿನಾರನೆಯ ಶತಮಾನದಲ್ಲಿಯೆ ಇದ್ದವರು ಎಂದಲ್ಲ. ಮಹಾತ್ಮಾ ಗಾಂಧಿ, ಇಂದಿರಾ ಗಾಂಧಿ, ಸಂಜಯಗಾಂಧಿ, ರಾಹುಲಗಾಂಧಿ ಈ ಎಲ್ಲರಲ್ಲಿಯೂ ಗಾಂಧಿ ಎಂಬುದು ಅಡ್ಡ ಹೆಸರು. ಇದು ಇದ್ದ ಮಾತ್ರಕ್ಕೆ ಎಲ್ಲರ ವ್ಯಕ್ತಿತ್ವ ಒಂದೇ ಎಂದಲ್ಲ. ಆದ್ದರಿಂದ ಸ್ಥಾವರಲಿಂಗ (ಶಿವಲಿಂಗ) ಮತ್ತು ಇಷ್ಟಲಿಂಗಗಳ ವ್ಯತ್ಯಾಸ ಸರಿಯಾಗಿ ಅರಿಯದ ಹೊರತು ಮಠಾಧೀಶರುಗಳಿಗೆ ಗೊಂದಲ ಪರಿಹಾರವಾಗದು, ಭ್ರಾಂತಿಯಳಿಯದು. ಅದೇ ರೀತಿ ಶೈವಮತ, ವೀರಶೈವ ಪಂಥ, ಲಿಂಗಾಯತ ಧರ್ಮಗಳ ವ್ಯತ್ಯಾಸ ಅರಿಯದ ಹೊರತು ಬಸವಣ್ಣನವರ ಮಹಾನ್‌ಕೊಡುಗೆ, ಅವರ ವೈಶಿಷ್ಟ್ಯ ಅರ್ಥವಾಗವು.

ಸ್ಥಾವರಲಿಂಗ	ಇಷ್ಟಲಿಂಗ
1. ಇದು ಶೈವಮತದ ಆರಾಧನಾ ವಸ್ತು.	1. ಇದು ಲಿಂಗಾಯತ ಧರ್ಮದ (ಬಸವಣ್ಣನವರಿಂದಲೇ ಕೊಡಲ್ಪಟ್ಟ ಧರ್ಮ ಎಂಬ ತಿಳುವಳಿಕೆಯಿಂದಲೇ ಈ ಶಬ್ದ ಬರೆದಿರುವುದು. ಲಿಂಗಾಯತ ಧರ್ಮ ಎಂದು ಬಳಸಿದಲ್ಲಿ ಬಸವ ಧರ್ಮ ಎಂದು ಸಹ ಓದುಗರು ಬಳಸಿಕೊಳ್ಳಬಹುದು) ಆರಾಧನಾ ವಸ್ತು.
2. ಐತಿಹಾಸಿಕ (ಶಿವನು ಐತಿಹಾಸಿಕ ಪುರುಷ, ಪ್ರಥಮ ಯೋಗಿ ಎಂಬುದು ನಮ್ಮ ಅಭಿಪ್ರಾಯ) ಶಿವನ ಆಕಾರದಲ್ಲಿ ಇದು ಪೂಜೆ ಮತ್ತು ಶಿವನ ಪ್ರತೀಕ.	2. ಜಗದಗಲ ಮುಗಿಲಗಲವಿರುವ, ಅಣೋರಣೀಯಾನ್ ಮಹತೋ ಮಹಿಯಾನ್ ಆಗಿರುವ ಪರಬ್ರಹ್ಮ, ಪರಶಿವ (Absolute Reality) ನ ಪ್ರತೀಕ, ಇಷ್ಟಲಿಂಗವು; ಇದು ವಿಶ್ವದ ಆಕಾರದಲ್ಲಿದೆ.
3. ಇದು ಪ್ರತೀಕೋಪಾಸನೆ; ತನ್ನಿಂದ ಅನ್ಯವಾದ ವಸ್ತುವಿನ ಪೂಜೆ.	3. ಅಹಂಗ್ರಹೋಪಾಸನೆ; ತನ್ನ ಸ್ವರೂಪದ ಪೂಜೆ.
4. ಅಂಗಳದಲ್ಲಿಟ್ಟು, ಸಿಂಹವಿಷ್ಟರದೊಳು ಅಂದರೆ ಪೀಠದ ಮೇಲಿಟ್ಟು ಅರ್ಚಿಸುವಂಥಾದ್ದು.	4. ಅಂಗದ ಮೇಲೆ ಧರಿಸಿ, ಅಂಗೈಯಲ್ಲಿಟ್ಟು ಅರ್ಚಿಸುವಂತಹುದು.
5. ಸಾರ್ವಜನಿಕರಿಗಾಗಿ ಸಾರ್ವಜನಿಕ ಸ್ಥಳದಲ್ಲಿ ಪ್ರತಿಷ್ಠಾಪಿಸಲ್ಪಟ್ಟದೆ.	5. ವೈಯಕ್ತಿಕವಾಗಿ ಗುರುವಿನಿಂದ ಕೊಡಲ್ಪಡುವುದು.
6. ಧರ್ಮ ಸಂಸ್ಕಾರ ಕಡ್ಡಾಯವಿಲ್ಲ.	6. ಕಡ್ಡಾಯ ಧರ್ಮಸಂಸ್ಕಾರವಿದೆ.
7. ಪೂಜಾರಿ ಪೂಜಿಸುತ್ತಾನೆ, ಭಕ್ತ ದರ್ಶನ ಪಡೆಯುತ್ತಾನೆ.	7. ಯಾವ ಮಧ್ಯಸ್ಥಿಕೆಯೂ ಇಲ್ಲದೆ ಭಕ್ತ ತಾನೇ ನೇರವಾಗಿ ಪೂಜಿಸುತ್ತಾನೆ.
8. ಆಹ್ವಾನ-ವಿಸರ್ಜನೆ ಇದೆ.	8. ಆಹ್ವಾನ ವಿಸರ್ಜನೆ ಇಲ್ಲ.
9. ಕೇವಲ ಭಕ್ತಿಯೋಗ ಸಾಧನೆಗೆ ಅನುಕೂಲಕರ.	9. ಭಕ್ತಿಯೋಗ ಸಾಧನೆಗೆ, ಅರ್ಚನೆಗೆ ಮಾತ್ರವಷ್ಟೇ ಅಲ್ಲ, ತ್ರಾಟಕಯೋಗ, ಧ್ಯಾನಯೋಗಗಳ ಸಾಧನೆಗೆ ಸಹಕಾರಿ.
10. ಸ್ಥಾವರ ಲಿಂಗಾರ್ಚನೆಗೆ ಬಳಸುವ ಮಂತ್ರಗಳೇ ಬೇರೆ. ವ್ರತ-ನೇಮಗಳು ಉಂಟು; ವರದಾ ಶಂಕರ ವ್ರತ, ಹದಿನಾರು ಸೋಮವಾರ ವ್ರತ ಇತ್ಯಾದಿ ಆಚರಿಸಲ್ಪಡುವುವು.	10. ಇಷ್ಟ ಲಿಂಗಾರ್ಚನೆಯ ವಿಧಾನ ಮತ್ತು ಮಂತ್ರಗಳೇ ಬೇರೆ. ಇಲ್ಲಿ ನಿತ್ಯ ಲಿಂಗಾರ್ಚನೆಯ ಹೊರತು ಯಾವ ವ್ರತನೇಮಗಳಿಲ್ಲ.

ಇನ್ನೂ ಸಾಕಷ್ಟು ಸೂಕ್ಷ್ಮವ್ಯತ್ಯಾಸಗಳಿವೆ. ಇದನ್ನೆಲ್ಲಾ ಸರಿಯಾಗಿ ಗಮನಿಸಬೇಕು. ಇಷ್ಟಲಿಂಗೋಪಾಸನೆಯ ಈ ನೂತನ ವಿಚಾರಗಳೆಲ್ಲ ಬಸವಣ್ಣನವರ ಕೊಡುಗೆ. ವಚನಗಳಲ್ಲಿ ಮಾತ್ರ ಉಕ್ತವಾಗಿವೆ. ಈ ಹೊತ್ತು ಅನೇಕ ಲಿಂಗಾಯತ ಮಠಾಧೀಶರು ತಮ್ಮ ಧರ್ಮದ ಮೂಲ ಸಂವಿಧಾನಕ್ಕೆ ವಿರುದ್ಧವಾಗಿ ಪಂಚಭೂತಗಳ ಪೂಜೆ ಅಂದರೆ ನೀರು, ಅಗ್ನಿ, ಗಿಡಮರ ಮತ್ತು ಪ್ರಾಣಿ ಪೂಜೆ (ಹಸು. ಹಾವು), ಸ್ಥಾವರಲಿಂಗೋಪಾಸನೆ, ವಿಗ್ರಹಾರಾಧನೆ, ಎಲ್ಲದರಲ್ಲಿ ತಲ್ಲೀನವಾಗಿರುವುದರಿಂದ ಸಂದಿಗ್ಧವಾದ ಪರಿಸ್ಥಿತಿಯಲ್ಲಿದ್ದಾರೆ. ವಚನ ಸಾಹಿತ್ಯವನ್ನು ಚೆನ್ನಾಗಿ ಅಧ್ಯಯನ ಮಾಡುತ್ತಲಿರುವ ಇಂದಿನ ಯುವ ಪೀಳಿಗೆಯವರು "ಸ್ವಾಮೀಜಿ, ಈ ಆಚರಣೆಗೆ ವಚನ ಸಾಹಿತ್ಯದಲ್ಲಿ ಮನ್ನಣೆ ಇಲ್ಲವಲ್ಲ. ನೀವೇಕೆ ಆಚರಿಸುತ್ತೀರಿ?" ಎಂದಾಗ ದಿಗ್ಭ್ರಾಂತರಾಗುತ್ತಾರೆ. ವಚನ ಸಾಹಿತ್ಯವನ್ನೇ ತಪ್ಪಾಗಿ ಅರ್ಥೈಸುತ್ತಾರೆ. ಇಲ್ಲವೇ ಅದು ನಮ್ಮ ಆಧಾರ ಸಾಹಿತ್ಯವಲ್ಲ ಎಂದು ಇನ್ನಾವುದನ್ನೋ ಉಲ್ಲೇಖಿಸಿ ತಪ್ಪಿಸಿಕೊಳ್ಳಲೆತ್ನಿಸುವರೇ ವಿನಾ ತಮ್ಮ ಆಚರಣೆಗಳನ್ನು ತಿದ್ದಿಕೊಳ್ಳಲು ಧೈರ್ಯತೋರುವುದಿಲ್ಲ.

ಈಗ ಶೈವಮತ, ವೀರಶೈವ ಪಂಥ ಮತ್ತು ಲಿಂಗಾಯತ ಧರ್ಮಗಳ ವ್ಯತ್ಯಾಸ ಸ್ವಲ್ಪ ತಿಳಿಯೋಣ. ಶೈವ ಮತ ತುಂಬಾ ಪುರಾತನ; ಮಹಾಯೋಗಿ, ನಾದಯೋಗಿ, ನಾಟ್ಯಾಚಾರ್ಯ, ಕೈಲಾಸ ಗಿರಿವಾಸ (ಅದೊಂದು ಭೌಗೋಳಿಕ ತಾಣ) ಶಿವನಿಂದ ಐತಿಹಾಸಿಕವಾಗಿ ಪ್ರಾರಂಭಿಸಲ್ಪಟ್ಟ ಮತವೇ ಶೈವಮತ. ಗೌರಿಶಂಕರವನ್ನು ರಾಜಧಾನಿಯಾಗಿ ಇರಿಸಿಕೊಂಡು ರಾಜ್ಯಾಧಿಕಾರ ನಿರ್ವಹಿಸುತ್ತ, ಅಪೂರ್ವ ಸಿದ್ಧ ಪುರುಷನಾಗಿ ಮೆರೆದ ಮಹಾನುಭಾವ ಈ ಶಿವನು. ವೇದಗಳ ಕಾಲಕ್ಕಾಗಲೇ ಮೂಲಶಿವನು ಗತಿಸಿ ಬಹಳ ಕಾಲವಾಗಿದ್ದರೂ ಅವನ ಪ್ರಭಾವ ಅದ್ಭುತವಾಗಿತ್ತು. ಹೀಗಾಗಿ ಭರತಭೂಮಿಗೆ ಬಂದು ನೆಲೆಸಿದ ಆರ್ಯರು ಪ್ರಕೃತಿ, ಪಂಚಭೂತಗಳ ಉಪಾಸಕರಾಗಿದ್ದರೂ ಶಿವನ ಪ್ರಭಾವ ವಲಯದಿಂದ ತಪ್ಪಿಸಿಕೊಳ್ಳಲಾಗದೆ ಅವನನ್ನು ಸ್ತುತಿಸಿದರು, ಪೂಜಿಸಿದರು. ಅಂತೆಯೇ ವೇದಗಳ ಕಾಲದ ಪ್ರಧಾನ ದೇವತೆಯಾಗಿ ಶಿವನ ವರ್ಣನೆ ಬಹಳ ಕಡೆ ಬರುತ್ತದೆ. ಮೂಲ ಶಿವನ ಅವಸಾನದ ನಂತರ ಈ ಪರಂಪರೆಯಲ್ಲಿ ಅನೇಕ ಗಣಾಧೀಶ್ವರರು ಬಂದರು. ಆದರೂ ಶೈವಮತ ಶಿಥಿಲವಾಗ ತೊಡಗಿತ್ತು. ಶೈವಮತದಲ್ಲಿ ಸಪ್ತ ಶಾಖೆಗಳಾಗಿ, ಅನುಯಾಯಿಗಳು ಒಡೆದರು. ಅಂಥ ಸಪ್ತ ಪಂಥಗಳಲ್ಲಿ ವೀರಶೈವವು ಒಂದು. ಇದರ ಮೂಲ ತತ್ತ್ವ; ಎಂಥದೇ ಪ್ರಸಂಗದಲ್ಲೂ ಶಿವನಲ್ಲದೆ ಅನ್ಯದೈವಕ್ಕೆರಗದಿರುವುದು (ವೀರ ವೈಷ್ಣವರಂತೆ)! ಯಜ್ಞಯಾಗಾದಿಗಳನ್ನು ಪ್ರೋತ್ಸಾಹಿಸದಿರುವುದು. ಲಿಂಗದರ್ಶನವಿಲ್ಲದೆ ಊಟ ಸಹ ಮಾಡದಿರುವುದು. ಈ ನಿಯಮಗಳ ಪಾಲನೆಗಾಗಿ ಆ ವೀರಶೈವರು ಸ್ಥಾವರ ಲಿಂಗಗಳನ್ನು ಜಡೆಯಲ್ಲಿಟ್ಟುಕೊಂಡು ಒಯ್ಯ ತೊಡಗಿದರು. ಎತ್ತುಗಳ ಮೇಲೆ, ಚೀಲಗಳಲ್ಲಿಟ್ಟು,

ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದರು ಅರ್ಥ ವ್ಯಾಪ್ತಿಯಲ್ಲಿ ಗುಡಿಯ ಸ್ಥಾವರಲಿಂಗಕ್ಕೂ, ಈ ಚರಲಿಂಗಕ್ಕೂ ವ್ಯತ್ಯಾಸವಿರಲಿಲ್ಲ. ನೇರವಾಗಿ ಸ್ಥಾವರಲಿಂಗಗಳನ್ನು ಅಂಗದ ಮೇಲೂ ಧರಿಸುತ್ತಿದ್ದರು: ಇವು ಕಂಥೆ ಇಲ್ಲದ, ದೊಡ್ಡ ಆಕಾರದ ಲಿಂಗಗಳು. ಮೈಸೂರಿನ ಚಾಮುಂಡಿ ಬೆಟ್ಟದಲ್ಲಿರುವ ಬಯಲ ಬಸವ ಎಂಬ ಶಿಲಾ ವಿಗ್ರಹದ ಕೊರಳಲ್ಲಿ ಇಂಥದೊಂದು ಸ್ಥಾವರಲಿಂಗ ಇರುವುದನ್ನೂ, ಅದು ವಿಗ್ರಹದಲ್ಲಿ ಕಟೆಯಲ್ಪಟ್ಟಿರುವುದನ್ನು ಇಂದಿಗೂ ಕಾಣಬಹುದು. ಇದರಿಂದ ವೃಷಭನು ವೀರಶೈವನೆಂದು ಅರ್ಥವಾಗುತ್ತದೆ. ಇಂಥ ಶಿವಲಿಂಗ, ಚರಲಿಂಗಗಳನ್ನು ಧರಿಸಿ ಪೂಜಿಸುತ್ತಿದ್ದರು ಆ ವೀರಶೈವರು. ಅಂಥ ವೀರಶೈವ ಜನಾಂಗವೊಂದು ತಮಿಳುನಾಡಿನ ಚಿದಂಬರಂ, ಮೈಲಾಪ್ ಮುಂತಾದೆಡೆಯಲ್ಲಿ ಇರುವುದನ್ನು ಇಂದಿಗೂ ಕಾಣಬಹುದು. ಪಾಂಡಿಚೆರಿಯಲ್ಲಿ ಆ ವೀರಶೈವರ ಮಠವಿದೆ. ಅವರು ಮಾಣಿಕ್ಯವಾಚಕರನ್ನು ತಮ್ಮ ಆದಿಗುರುವೆಂದು, ತಿರುವಾಚಕಮನ್ನು ತಮ್ಮ ಧರ್ಮ ಗ್ರಂಥವೆಂದು ನಂಬುತ್ತಾರೆ. ಈ ವೀರಶೈವ ಪಂಥಕ್ಕೆ ತಿರುವಳ್ಳುವರು, ನಕ್ಕಿರಾರ್ ಮುಂತಾದವರು ಸಂಬಂಧಿಸಿದ್ದರು ಎಂದು ಸಹ ಊಹಿಸಬಹುದು.

ಬಸವಣ್ಣನವರ ಚಳುವಳಿ ಪ್ರಾರಂಭವಾಗಿ, ಅದು ತೀವ್ರ ಸ್ವರೂಪ ಪಡೆದಾಗ, ಪ್ರಭಾವಶಾಲಿಯಾಗಿ ಹಬ್ಬಿದಾಗ ಬಸವಣ್ಣನ ಏಕದೇವೋಪಾಸನೆ, ಭಕ್ತಿ ಪಾರಮ್ಯಕ್ಕೆ ಮರುಳಾಗಿ ತಮಿಳುನಾಡಿನಲ್ಲಿ ಮತ್ತು ಹಳೆಯ ಮೈಸೂರು ಭಾಗದಲ್ಲಿ ಹೆಚ್ಚಾಗಿ ಇದ್ದ ಆ ವೀರಶೈವರು ಮತ್ತು ಚೋಳರು ಮುಂತಾದ ಶುದ್ಧ ಶೈವರು ಅಧಿಕ ಸಂಖ್ಯೆಯಲ್ಲಿ ಬಂದು ಸೇರಿದರು. ಮತಾಂತರಗೊಂಡವರಲ್ಲಿ ಸಂಖ್ಯಾಬಲ ಅಧಿಕವಿದ್ದುದರಿಂದ ತಮ್ಮ ಮೂಲ ಹೆಸರು 'ವೀರಶೈವವನ್ನು' ಟ್ಟುಕೊಡಲು ಇಚ್ಛಿಸಿರಲಿಕ್ಕಿಲ್ಲ. ಇಂದಿಗೂ ನಾವು ಧರ್ಮದ ಹೆಸರು ಕೇಳಿದರೆ ಹಳೆಯ ಮೈಸೂರು ಭಾಗದವರು ವೀರಶೈವರೆಂದು ಹೇಳಲು ಅಭಿಮಾನ ಪಟ್ಟರೆ, ಶುದ್ಧ ಶರಣ ಸಂಸ್ಕೃತಿಯನ್ನು ಒಂದು ಕಾಲದಲ್ಲಿ ಪಡೆದಿದ್ದ ಉತ್ತರ ಕರ್ನಾಟಕ, ಹೈದ್ರಾಬಾದ್ ಕರ್ನಾಟಕದವರು ಲಿಂಗಾಯತರು, ಲಿಂಗವಂತರು ಎಂದು ಹೇಳುತ್ತಾರೆ. ಉತ್ತರ ಕರ್ನಾಟಕದ ಗ್ರಾಮಾಂತರ ಪ್ರದೇಶದಲ್ಲಂತೂ ವೀರಶೈವ ಪದದ ಬಳಕೆಯೇ ಇಲ್ಲ.

ಆದ್ದರಿಂದ ಶಿವನು ಶೈವದ ಆದ್ಯ; ಅದರ ಸಂರಕ್ಷಕರು, ಸಂಘಟಕರು ವೀರಶೈವದ ಸೂತ್ರಧಾರರು ವೃಷಭ, ಭೃಂಗಿ, ವೀರಭದ್ರ ಮುಂತಾದವರು. ಲಿಂಗಾಯತ ಧರ್ಮದ ಆದ್ಯನು ಬಸವಣ್ಣನು. ಬಸವಣ್ಣನಿತ್ತ ಲಿಂಗಾಯತ ಧರ್ಮದಲ್ಲಿ ತಮಿಳುನಾಡಿನ ವೀರಶೈವರು, ಶುದ್ಧಶೈವರು ಶೈವಬ್ರಾಹ್ಮಣರಾದ ಆರಾಧ್ಯರು ಎಲ್ಲರಿಗೂ ಒಂದೊಂದು ಬಗೆಯ ತೃಪ್ತಿಸಿಕ್ಕಿತು. ಅದಕ್ಕಾಗಿ ಮಗ್ಗೆಯ ಮಾಯಿದೇವರಂತಹವರು,

'ವೀರಶೈವ ನಿರ್ಣಯ ಪರಮಾವತಾರ' ಎಂದು ಬಸವಣ್ಣನನ್ನು ಮನ ಉಬ್ಬಿ ಹೊಗಳಿದರು.

ಈಗ ಶೈವ, ವೀರಶೈವ, ಲಿಂಗಾಯತ ತತ್ತ್ವಗಳ ವ್ಯತ್ಯಾಸವನ್ನಷ್ಟು ನೋಡೋಣ.

(1) ಶೈವರು ಶಿವನ ಭಕ್ತರು; ಜೊತೆಗೆ ಅನ್ಯ ದೇವದೇವತೆಗಳನ್ನೂ ಪೂಜಿಸುವರು. ಉದಾಹರಣೆಗೆ ಶೈವಬ್ರಾಹ್ಮಣರು. ಅವರು ಐದು ವಸ್ತುಗಳನ್ನು ಪೂಜಿಸುವರು. ಆರಾಧ್ಯ ಬ್ರಾಹ್ಮಣರು ಯಜ್ಞೋಪವೀತ ಧರಿಸಿ, ಅದರ ತುದಿಯಲ್ಲಿ ಸ್ಥಾವರಲಿಂಗ ಕಟ್ಟಿಕೊಳ್ಳುತ್ತಾರೆ. ಎರಡನ್ನೂ ಪೂಜಿಸುತ್ತಾರೆ. ಆದರೆ ವೀರಶೈವರು (ತಮಿಳುನಾಡಿನಲ್ಲಿರುವ ಮಾಣಿಕ್ಯ ವಾಚಕರರ ಅನುಯಾಯಿಗಳು) ಶಿವನಲ್ಲದೆ ಅನ್ಯಕ್ಕೆ ತಲೆಬಾಗರು. ಅವರು ದೇವಾಲಯದ ಆಕಾರದ ದಪ್ಪ ದಪ್ಪ ಕರಡಿಗೆಗಳಲ್ಲಿ ದೊಡ್ಡ ದೊಡ್ಡ ಸ್ಥಾವರ ಲಿಂಗಗಳನ್ನು ಕಟ್ಟುತ್ತಾರೆ. ಬಸವ ಪ್ರಣೀತ ಲಿಂಗಾಯತ ಧರ್ಮೀಯರು (ತತ್ತ್ವಶಃ) ತ್ರಿಮೂರ್ತಿಗಳು ಯಾರನ್ನೂ ಪೂಜಿಸದೆ, ಪರಬ್ರಹ್ಮನನ್ನು ವಿಶ್ವದಾಕಾರದಲ್ಲಿ ಚುಳುಕಾಗಿಸಿಕೊಂಡು, ಗೋಳಾಕಾರದ ಕರಡಿಗೆಯಲ್ಲಿರಿಸಿಕೊಂಡು ಪೂಜಿಸುತ್ತಾರೆ.

(2) ಶಿವನನ್ನು ಆರಾಧಿಸುವವರು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಲ್ಲರಲ್ಲಿ ಇದ್ದರೂ ಶಿವಾಲಯಕ್ಕೆ ಹೋಗುವವರಲ್ಲೆಲ್ಲ ಸಮಾನತೆ, ಬಾಂಧವ್ಯವಿಲ್ಲ. ತಮಿಳುನಾಡಿನ ವೀರಶೈವ ಗುರುಗಳು ಇನ್ನೊಂದು ಹೆಜ್ಜೆ ಮುಂದರಿದು ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎಲ್ಲರಿಗೂ ದೀಕ್ಷೆ ಕೊಟ್ಟರೂ ಅನುಯಾಯಿಗಳಲ್ಲಿ ವಿವಾಹ ಸಂಬಂಧ ಏರ್ಪಡಲು ಅವಕಾಶ ನೀಡರು. ತಾವೇ ದೀಕ್ಷೆ ನೀಡಿದರೂ ಶಿಷ್ಯರ ಮನೆಯಲ್ಲಿ ಊಟ ಮಾಡದೆ, ಅಕ್ಕಿ, ಬೇಳೆ ಮುಂತಾದ ಪಡಿಯನ್ನು ಮಾತ್ರ ಪಡೆದು ಮಠದಲ್ಲಿ ಅಡಿಗೆ ಮಾಡಿಕೊಳ್ಳುತ್ತಾರೆ. ಬಸವೋಕ್ತ ಲಿಂಗಾಯತ ಧರ್ಮದ ಗುರುಗಳು ವಚನ ಸಂವಿಧಾನದ ಪ್ರಕಾರ ಯಾರಿಗೆ ಬೇಕಾದರೂ ದೀಕ್ಷೆ ನೀಡಬಹುದು. ದೀಕ್ಷಾನಂತರ ಅವರ ಮನೆಯಲ್ಲಿ ಪ್ರಸಾದವನ್ನು ಸ್ವೀಕರಿಸಬೇಕು. ತಮಿಳುನಾಡಿನ ವೀರಶೈವರಲ್ಲಿ ವರ್ಣ ವ್ಯತ್ಯಾಸವಿರುವ ಕಾರಣ ಬ್ರಾಹ್ಮಣ ವೀರಶೈವ, ಕ್ಷ. ವೀರಶೈವ, ವೈ. ವೀರಶೈವ, ಶೂ. ವೀರಶೈವರಲ್ಲಿ ಪರಸ್ಪರ ಭೋಜನ ಮತ್ತು ವಿವಾಹ ಸಂಬಂಧಗಳು ನಡೆಯುವುದಿಲ್ಲ, ನಡೆಯಕೂಡದು. ಬಸವೋಕ್ತ ಲಿಂಗಾಯತ ಧರ್ಮದ ದೀಕ್ಷೆ ಪಡೆದವರಲ್ಲಿ ವರ್ಣಭೇದ, ಇರಕೂಡದು; ಅಂತರ್ಭೋಜನ

ಮತ್ತು ವಿವಾಹ ಸಂಬಂಧ ನಡೆಯಬೇಕು. 'ಒಕ್ಕುದಕೊಂಬೆನವರಲ್ಲಿ, ಕೂಸಕೊಡುವೆನವರಿಂಗೆ' ಎಂದು ಬಸವಣ್ಣನವರೇ ಘೋಷಿಸಿದ್ದಾರೆ.

(3) ಶೈವೋಪಾಸನೆಯಲ್ಲಿ ಸ್ಥಾವರಾರ್ಚನೆ ಇದೆ. ತಮಿಳುನಾಡಿನ ವೀರಶೈವರಲ್ಲಿ ಚರಲಿಂಗ ಧರಿಸುವ ಪರಂಪರೆ ಇದ್ದರೂ ಎಲ್ಲಾ ಲಿಂಗಗಳನ್ನು ಶಿಲೆಯಿಂದ ಮಾಡಿರದೆ ಶಿಲಾಲಿಂಗ, ರತ್ನಲಿಂಗ, ಸ್ವರ್ಣಲಿಂಗ, ಮೃತ್ತಿಕಾಲಿಂಗ ಇತ್ಯಾದಿಯಾಗಿ ವರ್ಣಕ್ಕೆ ತಕ್ಕಂತೆ ಕೊಡಲಾಗುವುದು. ಈ ಶ್ರೀಮಂತ ಲಿಂಗ, ಬಡವ ಲಿಂಗ ಎಂಬ ಭೇದ ಇಷ್ಟಲಿಂಗದಲ್ಲಿರದೆ ಒಂದೇ ಬಗೆಯ ಸರಳವಾದ ಲಿಂಗವನ್ನು ಕೊಡುವುದು ಬಸವ ಸಂಪ್ರದಾಯ.

(4) ಪರಂಪರಾಗತವಾಗಿ ನೋಡಿದರೆ ಶೈವಧರ್ಮೀಯರು ಯಜ್ಞ-ಯಾಗ ಮಾಡುವವರಲ್ಲ. (ಅಂತೆಯೇ ದಕ್ಷಬ್ರಹ್ಮನ ಯಜ್ಞವನ್ನು ವಿರೋಧಿಸಲಾಯಿತು) ಶಿವನು ಯಜ್ಞಪ್ರಿಯನಲ್ಲ ಕೇವಲ ಅಭಿಷೇಕ ಪ್ರಿಯ. ಮಿಶ್ರಶೈವರಾಗಿ ಕೆಲವರು ಏಕದೇವತಾ ಉಪಾಸನೆ ಬಿಟ್ಟು ಯಜ್ಞಯಾಗಾಚರಣೆ, ಬಹುದೇವೋಪಾಸನೆ ಮುಂತಾದ್ದಕ್ಕೆ ನಿಂತಾಗ ಉಗ್ರವಾದಿಗಳಾದ ಕೆಲವರು ಇದನ್ನು ವಿರೋಧಿಸಿ, ಏಕಶಿವೋಪಾಸನೆಯನ್ನು ಕಟ್ಟುನಿಟ್ಟಾಗಿ ಬೋಧಿಸಿದರು. ಇತಿಹಾಸದಲ್ಲಿ ಜೈನರ ಬಸದಿಗಳನ್ನು ನಾಶಮಾಡ ಹೊರಟ ಏಕಾಂತದ ರಾಮಯ್ಯನಂತಹವರನ್ನು, ವೈಷ್ಣವಾಲಯಗಳ ಮೂರ್ತಿಗಳನ್ನು ಭಂಜಿಸಿ ಲಿಂಗಪ್ರತಿಷ್ಠೆ ಮಾಡಲು ಯತ್ನಿಸಿದವರನ್ನೂ ಕಾಣುತ್ತೇವೆ. ಆದರೆ ಬಸವಣ್ಣನವರು ಮತ್ತು ಇತರ ಸಮಕಾಲೀನ ಶರಣರು ಜೈನ ಬಸದಿಗಳನ್ನು ನಾಶಮಾಡಲಾಗಲೀ, ಪರಿವರ್ತಿಸಲಾಗಲೀ ಯತ್ನಿಸಿಲ್ಲ. ಏಕೆಂದರೆ ಶರಣರು ಏಕಶಿವೋಪಾಸಕರಲ್ಲ ಏಕದೇವೋಪಾಸಕರು. ಹೊರಗಣ ದೇವಾಲಯಗಳ ರಚನೆಗಿಂತಲೂ ದೇಹ ದೇವಾಲಯ ಮಾಡಿಕೊಳ್ಳಲು ಕರೆ ನೀಡಿದವರು. ಅಧ್ಯಾತ್ಮ ಸಾಧನೆ ಮತ್ತು ಸಾಮಾಜಿಕ ಮಧುರಬಾಂಧವ್ಯ ನಿರ್ಮಾಣಕ್ಕಾಗಿ ಕೇವಲ ಅನುಭವ ಮಂಟಪಗಳಂತಹ ಅಧ್ಯಾತ್ಮಿಕ ಸಂಸ್ಥೆಗಳ ನಿರ್ಮಾಣಕ್ಕೆ ಯತ್ನಿಸಿದರು. ಆದ್ದರಿಂದ ಶೈವಮತ, ಸಪ್ತಶೈವಗಳಲ್ಲಿ ಒಂದಾದ ವೀರಶೈವ ಪಂಥ, ಮತ್ತು ಬಸವಣ್ಣನವರ ಕೊಡುಗೆಯಾದ ಲಿಂಗಾಯತಧರ್ಮ ಸಂಪೂರ್ಣ ಬೇರೆ ಬೇರೆ. ಇಷ್ಟಲಿಂಗಧಾರಿಗಳೆಲ್ಲರೂ ಈ ಬಸವೋಕ್ತ ಲಿಂಗಾಯತ ಧರ್ಮದ ಅನುಯಾಯಿಗಳು; ಅವರಿಗೆ ಬಸವಾದಿ ಪ್ರಮಥರ ವಾಣಿಯೇ ಅಧಿಕೃತ ಸಂವಿಧಾನ. [ತಾತ್ತ್ವಿಕವಾಗಿ ವೀರಶೈವ ಪಂಥ, ಲಿಂಗಾಯತ ಧರ್ಮಗಳು ಬೇರೆ ಬೇರೆಯಾಗಿದ್ದರೂ ಇಂದು ಒಂದೇ ಸಮಾಜದ ಅನುಯಾಯಿಗಳಿಗೆ ವೀರಶೈವ, ಲಿಂಗಾಯತ ಎಂಬ ಶಬ್ದಗಳು ಅನ್ವಯಿಸುತ್ತವೆ].

ಇನ್ನೊಂದು ತುಂಬಾ ತಮಾಷೆಯ ಸಿದ್ಧಾಂತವನ್ನು ಅನಾಮಧೇಯ ಲೇಖಕರು ಮಂಡಿಸಿದ್ದಾರೆ. ಅದೆಂದರೆ, "ಅಂದು ದೀಕ್ಷಾಗುರುವಿನ ಹೆಸರನ್ನು ನೇರವಾಗಿ ಹೇಳುತ್ತಿರಲಿಲ್ಲ, ಈಗಲೂ ಹೇಳುತ್ತಿಲ್ಲ. ಇದರಿಂದಾಗಿ ಬಸವಣ್ಣ ತನ್ನ ದೀಕ್ಷಾ ಗುರುವಿನ ನಾಮನಿರ್ದ್ದೇಶವನ್ನು ಮಾಡಿಲ್ಲ. ಈಶಾನ್ಯಗುರು ತನಗೆ ಎಷ್ಟೋ ಉಪಕಾರ ಮಾಡಿ ಉದ್ಧಾರ ಮಾಡಿದ್ದರೂ ಆತನ ಹೆಸರನ್ನು ಹೇಳದಿರಲು ಇದೇ ಕಾರಣ. ಆತನು ದೀಕ್ಷಾ ಗುರುವಾಗಿದ್ದರಿಂದ ಆತನನ್ನು ಎಲ್ಲಿಯೂ ಹೆಸರಿಸಿಲ್ಲ." (ಮಾಮಿಡಿ, ಪುಟ 15)

"ಬಸವಣ್ಣನವರಿಗೆ ದೀಕ್ಷೆ ಮಾಡಿದ "ವ್ಯಕ್ತಿಗುರು" ಇಲ್ಲ. ಅದಕ್ಕೇ ಹೆಸರಿಸಿಲ್ಲ. ಮಾದಾರ ಚೆನ್ನಯ್ಯ, ಡೋಹರ ಕಕ್ಕಯ್ಯನಂತಹವರನ್ನು, ತಮಿಳುನಾಡಿನ 63ಮಂದಿ ಪುರಾತನರನ್ನು ಓಹಿಲಯ್ಯ, ಬೇಡರ ಕಣ್ಣಪ್ಪನಂತಹವರನ್ನೂ ಸ್ತುತಿಸಿದ ಬಸವಣ್ಣನವರು ತಮಗೆ ಗುರುವಿದ್ದಿದ್ದರೆ ಹೇಳದಿರುತ್ತಿದ್ದರೆ?" ಎಂದು ನಾನು ವಾದ ಮಾಡಿದ್ದಕ್ಕೆ ಅನಾಮಧೇಯ ಲೇಖಕರು ಮೇಲಿನಂತೆ 15ನೆಯ ಪುಟದಲ್ಲಿ ಬರೆದಿದ್ದಾರೆ. ಆಧ್ಯಾತ್ಮ ಜೀವಿಯಾದವನು, ದೇಹಭಾವ ತೊರೆದು ಆತ್ಮಭಾವ ಬೆಳೆಸಿಕೊಳ್ಳುವನು ಕಾಯಕ್ಕೆ ಜನ್ಮಕೊಟ್ಟ ಮಾತಾಪಿತೃಗಳನ್ನು ಮರೆತರೂ, ಆಧ್ಯಾತ್ಮಿಕ ಹುಟ್ಟುಕೊಟ್ಟ ಗುರುವನ್ನು ಮರೆಯನು. ಸಂಸ್ಕಾರದ ನಂತರ ಗುರುವಿನ ಹೆಸರನ್ನು ಹೇಳುವನು. ಇದು ಹಿಂದೂ ಸಂಪ್ರದಾಯದ ಜೀವಾಳವೂ ಹೌದು, ಲಿಂಗಾಯತ ಧರ್ಮದ ಮುಖ್ಯ ತತ್ತ್ವವೂ ಹೌದು. ಆದಕ್ಕೆಂದೇ ಎಲ್ಲಾ ಶರಣರು ತಮ್ಮ ತಾಯಿತಂದೆಗಳ ಹೆಸರನ್ನು ಎಲ್ಲೂ ಉಲ್ಲೇಖಿಸದೆ ಗುರುವಿನ ಹೆಸರನ್ನು ಹೇಳಿದ್ದಾರೆ.

1. ಶ್ರೀ ಗುರುಲಿಂಗದೇವರು ತಮ್ಮ ಹಸ್ತವ ತಂದು ಎನ್ನ ಮಸ್ತಕದ ಮೇಲೆ ಇರಿಸಿದಾಗ ಭವಂ ನಾಸ್ತಿಯಾಯಿತು. — ಅಕ್ಕಮಹಾದೇವಿ.

2. ಅಧ್ಯಾತ್ಮ ಅಧ್ಯಾತ್ಮವೆಂರಿರಿ...........
   ಇಂತಪ್ಪವನತಿಗಳೆದು ಶುದ್ಧ ಶಿವಯೋಗಿಯ ಮಾಡಿದಾತ ಚನ್ನಬಸವಣ್ಣ
   ....ಎನ್ನ ತನ್ನಂತೆ ಮಾಡಿದ ಗುರು ಚನ್ನಬಸವಣ್ಣ
   ಆನು ಚನ್ನಬಸವಣ್ಣನ ಕರುಣದಿಂದ ಅಭ್ಯಾಸಯೋಗವನತಿಗಳೆದು
   ಶಿವಯೋಗದಲ್ಲಿ ನಿತ್ಯನಾಗಿ ಭಕ್ತ, ಮಾಹೇಶ್ವರ, ಪ್ರಸಾದಿ
   ಪ್ರಾಣಲಿಂಗಿ, ಶರಣ, ಐಕ್ಯನೆಂಬ ಷಡುಸ್ಥಲಕ್ಕಧಿಕಾರಿಯಾದೆ.
   ನಿನ್ನವರ ಸಲುಗೆಗೆ ಸಂದೆ
   ಚನ್ನಬಸವಣ್ಣನ ಕೃಪೆ ಎನ್ನನಿಂತು ಮಾಡಿತ್ತು ಕಾಣಾ,
   ಗುರುವೇ ಕಪಿಲಸಿದ್ಧ ಮಲ್ಲಿಕಾರ್ಜುನಾ.
   — ಸಿದ್ಧರಾಮೇಶ್ವರ (ಶೂನ್ಯ ಸಂಪಾದನೆ 50, ಸಂಪುಟ 3)

[ಇದೇ ಲೇಖನದ ಪುಟ 19ರಲ್ಲಿ ಸಿದ್ಧರಾಮಯ್ಯನ ಗುರು ರೇವಣಸಿದ್ಧ ಎಂದು, ರೇವಣಸಿದ್ಧರ ಶಿಷ್ಯ ಜಾತವೇದಮುನಿ ಅಥವಾ ಈಶಾನ್ಯಗುರು ಎಂದು ನಿಡುಮಾಮಿಡಿ ಸ್ವಾಮಿಗಳು (ಲೇಖನ ಕರ್ತೃಗಳು ಅವರೇ ಇರಬೇಕೆಂದು ನಂಬಿ ಬರೆದಿರುವೆ. ಅವರು ಅಲ್ಲವಾದರೆ ಯಾರು ಅದರ ಲೇಖಕರೋ ಅವರಿಗೆ ಇದು ಅನ್ವಯಿಸುವುದು) ಬರೆದಿದ್ದಾರೆ. ಅವರು ಯಾವ ಆಧಾರವೂ ಇಲ್ಲದೆ ಬಹು ತೀವ್ರವಾಗಿ ಸಂಬಂಧ ಕಲ್ಪಿಸಿಬಿಡುವರು. ಸಿದ್ಧರಾಮೇಶ್ವರರಿಗೆ ದೀಕ್ಷೆ ನೀಡಿದವನು ಚನ್ನಬಸವಣ್ಣ ಎಂದು ಶೂನ್ಯ ಸಂಪಾದನಕಾರರು, ವಚನಕಾರರು ಎಲ್ಲರೂ ಘಂಟಾಘೋಷವಾಗಿ ಸಾರಿದ್ದಾಗ ಗರ್ಭದಲ್ಲಿದ್ದಾಗ ಭವಿಷ್ಯವಾಣಿ ನುಡಿದು ಆಶೀರ್ವದಿಸಿದ ಮಾತ್ರಕ್ಕೆ ರೇವಣಸಿದ್ಧರು ಅದೆಂತು ಸಿದ್ಧರಾಮರಿಗೆ ಗುರುವಾಗಬಲ್ಲರು ? ಓರ್ವವ್ಯಕ್ತಿ ಹಲವಾರು ಮಹಾತ್ಮರ ಆಶೀರ್ವಾದ ಪಡೆದುಕೊಳ್ಳಬಹುದು. ಆದರೆ ದೀಕ್ಷೆ ನೀಡಿದ ಗುರು ಒಬ್ಬ ಮಾತ್ರ ಇರುವನು. ಸ್ವತಃ ಸಿದ್ಧರಾಮೇಶ್ವರರೇ ತಮ್ಮ ಗುರುವು ಚನ್ನಬಸವಣ್ಣ ಎಂಬುದನ್ನು ವಚನಗಳು ಮತ್ತು ತ್ರಿವಿಧಿಗಳಲ್ಲಿ ಬರೆದಿರುವಾಗ ಅದನ್ನು ತಿರುಚಿಹಾಕಿ ರೇವಣಸಿದ್ಧರನ್ನು ತಂದು ಸಂಬಂಧಿಸುವುದು ಯಾವ ನ್ಯಾಯ ?]

3. ಎಲ್ಲ ಶರಣರು, ಮಹಾಂತರು ತಮ್ಮ ತಮ್ಮ ಗುರುಗಳ ನಾಮಸ್ಮರಣೆ ಮಾಡದೆ ಇಲ್ಲ. ಪ್ರಭುದೇವರು ಅನಿಮಿಷರನ್ನು, ಡೋಹರ ಕಕ್ಕಯ್ಯನವರು ಬಸವಣ್ಣನವರನ್ನು, ಷಣ್ಮುಖಸ್ವಾಮಿಗಳು ಅಖಂಡೇಶ್ವರ ಸ್ವಾಮಿಗಳನ್ನು, ಹೀಗೆ ಸ್ಪಷ್ಟವಾಗಿ ಸ್ತುತಿಸಿದ್ದಾರೆ. ಸ್ವತಃ ನಿಡುಮಾಮಿಡಿ ಶ್ರೀಗಳೇ ತಮ್ಮ ಗುರುಗಳನ್ನು ಸ್ಮರಿಸಿ, ಅವರ ಮೇಲೆ ವಚನ ರಚಿಸಿದ್ದಾರೆ. ಹಾಗಾದರೆ ದೀಕ್ಷಾ ಗುರುವನ್ನು ಸ್ಮರಿಸಬಾರದು ಎಂಬ ಹೊಸ ಸಿದ್ಧಾಂತವನ್ನು ಕಂಡುಕೊಂಡ ನಿಡುಮಾಮಿಡಿ ಶ್ರೀಗಳು ಆದೇಕೆ ತಮ್ಮ ಗುರುಗಳನ್ನು ಹೆಸರಿಸಿ, ಸ್ಮರಿಸಿ ಬಿಟ್ಟರು ಎಂಬುದೇ ಆಶ್ಚರ್ಯ; ಹಾಗಾದರೆ ಇದು ತತ್ತ್ವವಿರೋಧೀ ಕಾರ್ಯವಲ್ಲವೆ?

ಬಸವಣ್ಣನವರು ಗುರುವಾಚಕವಾಗಿ ಬಳಸಿದ ಎಲ್ಲ ವಚನ ವಾಕ್ಯಗಳಲ್ಲೂ ಸಾಮಾನ್ಯಪದವನ್ನು ಬಳಸಿದ್ದಾರೆಯೇ ವಿನಾ ವ್ಯಕ್ತಿವಾಚಕ ನಾಮಪದವನ್ನಲ್ಲ. ಒಂದು ಸುದೈವವೆಂದರೆ ಕೂಡಲ ಸಂಗಯ್ಯ ಎಂಬ ಮಠಾಧೀಶರೊಬ್ಬರಿದ್ದರು, ಅವರೇ ಬಸವಣ್ಣನ ಗುರು ಎಂದು ಯಾವ ಹೊಸ ಕಲ್ಪನೆಯ ಕತೆಯನ್ನೇನೂ ಹೆಣೆಯದೆ, ಜಾತವೇದಮುನಿ, ಈಶಾನ್ಯ ಗುರು ಅಷ್ಟೇ ಹೆಸರುಗಳನ್ನು ಉಲ್ಲೇಖಿಸಿದ್ದಾರೆ – ಈವರೆಗೆ ವಾದ ಮಾಡುತ್ತಿರುವ ವಿದ್ವಾಂಸರುಗಳೆಲ್ಲರು !

ತಮಗೆ ಅನುಗ್ರಹವಾದ ಒಂದು ಪ್ರಸಂಗವನ್ನು ಬಸವಣ್ಣನವರು ಬಣ್ಣಿಸಿರುವ, ವಚನಗಳಲ್ಲಿ ಬರುವ ಹಲವಾರು ಸಾಲುಗಳನ್ನು ನೋಡುವಾ. ಬಸವಣ್ಣನವರು ವೈದಿಕ ಧರ್ಮದ ಸಂಸ್ಕಾರವಾದ ಉಪನಯನವನ್ನು ಹೊಂದಿದ್ದಿರಬಹುದು, ಇಲ್ಲದಿರಬಹುದು. ಓರ್ವ ಶೈವಗುರುವಿನ ಕೈಯಿಂದ ಸಮಯಾಚಾರ ಹೊಂದಿದ್ದಾರೆ. ಇಷ್ಟು ಮಾತ್ರವಲ್ಲ ವಿವಿಧಯೋಗಗಳನ್ನು ಅಭ್ಯಾಸ ಮಾಡುವಾಗ ಆಯಾದೀಕ್ಷೆಗಳನ್ನು ಮುಮುಕ್ಷುಭಾವದಿಂದ ಹೊಂದಿರಲೂ ಸಾಕು. ಯಾವುದೂ ಅವರಿಗೆ ತೃಪ್ತಿ ನೀಡಿಲ್ಲ. ಕೂಡಲ ಸಂಗಮದಲ್ಲಿದ್ದ ಗುರುಕುಲ ಕಾಳಾಮುಖ ಪರಂಪರೆಯ ಗುರುಕುಲ. (ಡಾ॥ ಬಾಡಾಲ ರಾಮಯ್ಯನವರ ಅಭಿಪ್ರಾಯವೂ ಅದೆ) ಅಲ್ಲಿ ಯಾರಿಗೆ ಬೇಕಾದರೂ ಪ್ರವೇಶ ನೀಡುವ ಔದಾರ್ಯ, ವೈಶಾಲ್ಯ ಇದ್ದರೂ ಇನ್ನೂ ಕೆಲವು ನಂಬಿಕೆಗಳನ್ನು ಗುರುಕುಲದವರು ತೊರೆದಿರಲಿಲ್ಲ. ಇದನ್ನು ಬಸವಣ್ಣನು ಆಗಾಗ ಪ್ರತಿಭಟಿಸುತ್ತಿದ್ದುದಕ್ಕೆ ನಮಗೆ ದಾಖಲೆ ಸಿಗುತ್ತವೆ.

(1) ಕಪಿಲ ಷಷ್ಠಿ ಮುಹೂರ್ತದಲ್ಲಿ ಗೋಕಲ್ಪೋಕ್ತ ಪೂಜೆ ಮಾಡುವುದು.

(2) ಸಂಕಲ್ಪಮಾಡಿ ಮತ್ತೊಬ್ಬರ ಪರವಾಗಿ ಪೂಜಾರಿಗಳು ಪೂಜೆ ಮಾಡಿಸುವುದು.

(3) ವಿಶಿಷ್ಟ ದಿನಗಳಲ್ಲಿ ತೊರೆಗಳ ಸಂಗಮದಲ್ಲಿ ಮೀಯಲೆಂದು ಭಕ್ತರು ಧಾವಿಸುವುದು.

(4) ಭಕ್ತರಿಗೆ ತಾವೇ ಪೂಜಿಸಲು ಅವಕಾಶವಿಲ್ಲದೆ ಪೂಜಾರಿಯ ಮುಖಾಂತರ ಪೂಜಿಸುವುದು.

ಇಂಥ ಎಲ್ಲವನ್ನು ಪ್ರತಿಭಟಿಸಿ ಬಸವಣ್ಣನು ವಿಡಂಬನೆಯ ನುಡಿಗಳನ್ನು ಆಡಿರುವುದನ್ನು ಕಾಣುತ್ತೇವೆ. "ತೊರೆಯ ಮೀವಣ್ಣಗಳಿರಾ, ಸ್ವಾಮಿಗಳಿರಾ ತೊರೆಯಿಂಭೋ ಪರಧನ, ಪರಸತಿಯ," "ತನ್ನಾಶ್ರಯದ ರತಿಸುಖವನು ತಾನುಂಬ ಊಟವ ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?" ಈ ಮುಂತಾದ ಆಚರಣೆಗಳ ನಂಬಿಕೆಯಿಂದ ಗುರುಕುಲದವರು ಬಿಡುಗಡೆ ಹೊಂದಿರದ್ದರಿಂದ, ಪ್ರೌಢಮತಿಯಾಗಿದ್ದ ವಿಚಾರವಾದಿ ಬಸವಣ್ಣನಿಗೆ ಅಲ್ಲಿಯ ಆಚರಣೆಯಲ್ಲಿ ಸಂಪೂರ್ಣ ತೃಪ್ತಿ ಸಿಕ್ಕಿರಲಿಲ್ಲ. ಅವರು ಗುರುವಿನ ಕರುಣೆಗಾಗಿ ಹಂಬಲಿಸಿ ಹಾತೊರೆಯುತ್ತಿದ್ದರು. ಸಾಮಾನ್ಯ ಜನರು ದೀಕ್ಷೆ ಹೊಂದುವಾಗ ಕುಲಗುರು, ಮನೆಗುರು ಎಂದು ಯಾಂತ್ರಿಕವಾಗಿ ಹೊಂದುತ್ತಾರೆ; ಇಂಥವರು ಎಷ್ಟೋ ಬಾರಿ ಜಾತಿಯ ಆಧಾರದ ಮೇಲೆ ಗುರುತ್ವ ನಿರ್ಧರಿಸುತ್ತಾರೆ. ಆದರೆ ಮುಮುಕ್ಷುಗಳು ತಪಸ್ಸು ಮತ್ತು ಆಧ್ಯಾತ್ಮಿಕ ಶಕ್ತಿಯ ಮೇಲೆ ಗುರುವನ್ನು ಅರಸುತ್ತಾರೆ. ಅಂಥ ಸಮರ್ಥ ಗುರುವನ್ನು ಬಸವಣ್ಣನವರು ಅರಸಿದರು.

ಅರಿವಿಂದರಿದು ಏನುವ ತಟ್ಟದೆ ಮುಟ್ಟದೆ ಇದ್ದೆನಯ್ಯಾ ;
ಅಂತರಂಗ ಸನ್ನಿಹಿತ, ಬಹಿರಂಗ ನಿಶ್ಚಿಂತನಾಗಿದ್ದೆನಯ್ಯಾ ;
ಸ್ವಾತಿಯ ಬಿಂದುವ ಬಯಸುವ ಚಿಪ್ಪಿನಂತೆ
ಗುರುಕಾರುಣ್ಯವ ಬಯಸುತ್ತಿದ್ದೆ, ಕೂಡಲ ಸಂಗಮದೇವಾ.

ಬ. ಷ. ವ. 1142.

ಬಸವಣ್ಣನ ಮೊರೆ ನೇರವಾಗಿ ಪರಮಾತ್ಮನನ್ನು ಕುರಿತು ಹೇಗೆ ಇದೆ ಎಂಬುದನ್ನು ಈ ವಚನದಲ್ಲಿ ಕಾಣಬಹುದು.

ಎನ್ನಯ್ಯ ನಿಮ್ಮನರಸುತ್ತಿದ್ದೇನೆ, ಎನ್ನಯ್ಯಾ ನಿಮ್ಮನ್ನರಸುತ್ತಿದ್ದೇನೆ
ಎನ್ನಯ್ಯ ಕೀಟಧ್ಯಾನದಲ್ಲಿ ನಿಮ್ಮನ್ನರಸುತ್ತಿದ್ದೇನೆ.
ಎನ್ನಯ್ಯ ಕೂಡಲ ಸಂಗಮದೇವಾ
ಭ್ರಮರದ ಲೇಸಿನಂತೆ ಕಾರುಣ್ಯವ ಮಾಡು.

ಬ. ಷ. ವ. 1018.

ಅಯ್ಯಾ ಎಳೆಗರುವು ತಾಯನರಸಿ, ಬಳಲುವಂತೆ
ನಾ ನಿಮ್ಮನರಸಿ ಬಳಲುತ್ತಿದ್ದೇನೆ.
ಅಯ್ಯಾ ನೀವೆನ್ನ ಮನಕ್ಕೆ ಪ್ರಸನ್ನವಾಗಿ ಕಾರುಣ್ಯವ ಮಾಡು
ಅಯ್ಯಾ, ನೀವೆನ್ನ ಮನಕ್ಕೆ ನೆಲೆವನೆಯಾಗಿ
ಕಾರುಣ್ಯವ ಮಾಡು, ಕಾರುಣ್ಯವ ಮಾಡು
ನೀನಿನಿತು ಲೇಸನೀಯಯ್ಯಾ,
ಅಂಬೇ ಅಂಬೇ ಕೂಡಲ ಸಂಗಮದೇವಾ.

ಬ. ಷ. ವ. 1015.

ಇಂಥ ಹಂಬಲದ ಕಾಳರಾತ್ರಿ ಸ್ಥಿತಿ (Dark night of the Soul) ಕಳೆದ ನಂತರ ಬಸವಣ್ಣನವರಿಗೆ ಒಂದಾನೊಂದು ದಿನ ಅಪೂರ್ವ ದಿವ್ಯಾನುಭವವಾಗಿದೆ. ಆ ಅನುಭವದ ಕಾಲದಲ್ಲೇ ಇಷ್ಟಲಿಂಗದ ವಿಚಾರ ಸ್ಫುರಣಗೊಂಡಿದೆ. ಆ ಅನುಭವದ ಕಾಲದಲ್ಲಿಯೇ ಪರಮಾತ್ಮನು ಸುಗುಣಾಕಾರನಾಗಿ ಹಸ್ತಮಸ್ತಕ ಸಂಯೋಗದಿಂದ ಅನುಗ್ರಹಿಸಿದ್ದಾನೆ.

ಈ ವಿಷಯದಲ್ಲಿ ಹರಿಹರ ಮಹಾಕವಿಯ ವರ್ಣನೆ ಅತ್ಯಂತ ಅಧಿಕೃತ ದಾಖಲೆ. ಬಸವಣ್ಣನವರ ಈ ವಿಶೇಷಾನುಭವದ ವಿಚಾರ ಜನತೆಯ ನುಡಿಯಲ್ಲಿ ಪ್ರಚಲಿತವಾಗಿ

ಪ್ರಚಾರದಲ್ಲಿರಲೂ ಸಾಕು. ಅದನ್ನೇ ವರ್ಣನೆಯ ಬಣ್ಣಕೊಟ್ಟು ಹರಿಹರನು ಬರೆದಿದ್ದಾನೆ. ಅನುಭವದಾನಂತರ ಬಸವಣ್ಣ ಹೀಗೆ ಹೇಳುತ್ತಾರೆ :

ವೇದ ವೇದಾಂತಗಳಿಗೆ ಅಸಾಧ್ಯವಾದ
ಅನುಪಮ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ.
ನಾದ ಬಿಂದು ಕಳೆಗೆ ಅಭೇದ್ಯವಾದ
ಅಚಲಿತ ಲಿಂಗವ ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ.
ವಾಙ್ಮನಕ್ಕಗೋಚರವಾದ ಅಖಂಡಿತಲಿಂಗವ
ತಂದುಕೊಟ್ಟನಯ್ಯಾ ಸದ್ಗುರು ಎನ್ನ ಕರಸ್ಥಲಕ್ಕೆ!
ಇನ್ನು ನಾನು ಬದುಕಿದೆನು, ನಾ ಬಯಸುವ ಬಯಕೆ
ಕೈಸಾರಿತ್ತೆಂದು ಕೂಡಲ ಸಂಗಮದೇವಾ.

ಇಲ್ಲಿ ತನ್ನ ಗುರುವಿನ ಹೆಸರನ್ನು ಹೇಳಲು ಬಸವಣ್ಣನವರಿಗೆ ವಿಪುಲವಾದ ಅವಕಾಶ ವಿತ್ತು. ಸದ್ಗುರು ಎಂಬ ಶಬ್ದ ಬಂದ ಬಳಿಕ ಅಲ್ಲಿ ಜಾತವೇದಮುನಿ ಅಥವಾ ಈಶಾನ್ಯ ಗುರು ಎಂದು ಸಂಕೋಚವಿಲ್ಲದೆ ಬರೆಯಬಹುದಿತ್ತು. ಆದ್ದರಿಂದ ಸದ್ಗುರು ಎಂಬಲ್ಲಿ ಪರಮಾತ್ಮ ಎಂಬುದನ್ನು ಬಳಸಿಕೊಂಡರೆ ತೀರಾ ಸೂಕ್ತವಾಗುತ್ತದೆ.

ಅದೇ ರೀತಿ ಈ ಕೆಳಕಂಡ ವಚನ ನೋಡಿ :

ಶ್ರೀ ಗುರು (?) ಕರುಣಿಸಿ ಹಸ್ತಮಸ್ತಕ ಸಂಯೋಗದಿಂದ
ಪ್ರಾಣಲಿಂಗವನು ಕರತಳಾಮಳಕವಾಗಿ ಕರಸ್ಥಲಕ್ಕೆ ತಂದುಕೊಟ್ಟನಾಗಿ
ಒಳಗೆನ್ನದೆ ಹೊರಗೆನ್ನದೆ, ಆ ಲಿಂಗದಲ್ಲಿ ನಚ್ಚಿ ಮಚ್ಚಿ
ಹರುಷದೊಳೋಲಾಡಿದೆ
ಆ ಲಿಂಗವ ಪಡೆದು ಆನಂದಿಸುವೆ, ಕೂಡಲ ಸಂಗಮದೇವಾ.

ಶ್ರೀಗುರು ಆದಮೇಲೆ? ಚಿಹ್ನೆ ನಾನು ಹಾಕಿದಲ್ಲಿ, ತನಗೆ ಗುರುವಿದ್ದಿದ್ದರೆ ಆ ಹೆಸರನ್ನು ಸ್ಪಷ್ಟವಾಗಿ ಬಸವಣ್ಣನವರು ಕಾಣಿಸಬಹುದಿತ್ತು. ಇನ್ನೂ ಸ್ಪಷ್ಟವಾದ ಭಾಷೆಯಲ್ಲಿ ದೇವರನ್ನೇ ತನ್ನ ಜ್ಞಾನಗುರು ಎಂಬುದಾಗಿ ಬಸವಣ್ಣನವರು ಹೇಳಿದ್ದಾರೆ.

ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೆ ಮುಖ್ಯವಯ್ಯಾ
ಪೂಜೆಗೆ ನಿಮ್ಮ ಶ್ರೀಪಾದವೆ ಮುಖ್ಯವಯ್ಯಾ
ಮಂತ್ರಕ್ಕೆ ನಿಮ್ಮ ನಾಮಾಮೃತವೆ ಮುಖ್ಯವಯ್ಯಾ
ಮುಕ್ತಿಗೆ ನಿಮ್ಮ ಘನಕೃಪೆಯೇ ಮುಖ್ಯವಯ್ಯಾ

ನಿಮ್ಮಿಂದಧಿಕರನಾರನೂ ಕಾಣೆನಯ್ಯಾ ;
ಕೂಡಲ ಸಂಗಮದೇವಾ, ನೀವು ಜ್ಞಾನಗುರುವಾದ ಕಾರಣ !

ಬ. ಷ. ವ. 1188.

ತನ್ನ ಹೃದಯದ ಸಂಶೋಧನೆ ರೂಪು ತಳೆದು, ಎಷ್ಟೋ ವರ್ಷಗಳಿಂದ ರೂಪಿಸಲು ಬಯಸಿದ್ದ ಆ 'ವಸ್ತು.' ಯೌಗಿಕ, ತಾತ್ತ್ವಿಕ, ಆಧ್ಯಾತ್ಮಿಕ ಎಲ್ಲ ಅರ್ಥಗಳನ್ನು ಒಳಗೊಂಡು ಎದುರು ನಿಂತಾಗ ಈ ಯೋಗವಿಜ್ಞಾನಿಗೆ ಆದ ಸಂತೋಷ ಅಷ್ಟಿಷ್ಟಲ್ಲ.

ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯಾ;
ಆನಂದದಿಂದ ಆಡುವೆ ಹಾಡುವೆನಯ್ಯಾ
ಎನ್ನ ಕಣ್ಣತುಂಬಿ ನೋಡುವೆ
ಎನ್ನ ಮನವೊಲಿದು ಭಕ್ತಿಯ ಮಾಡುವೆ
ಕೂಡಲ ಸಂಗಯ್ಯಾ ನಿನಗೆ!

ಬ ಷ. ವ. 1192.

ಕೂಡಲ ಸಂಗನ ಅಂದರೆ ಪರಾತ್ಪರ ಪರಮಾತ್ಮನ ಸಾಕಾರವಾಗಿ ಕರಸ್ಥಲದಲ್ಲಿ ತಮ್ಮ ಕಲ್ಪನೆ ನಿಜರೂಪು ತಳೆದಾಗ ಬಸವಣ್ಣನ ಆನಂದಕ್ಕೆ ಪಾರವೇ ಇಲ್ಲ.

ಡಾ॥ ಬಾಡಾಲ ರಾಮಯ್ಯನವರು ಸಹ ಕೂಡಲದ ಮಠ ಬಸವಪೂರ್ವದಲ್ಲಿ ಕಾಳಾಮುಖ ಸಂಪ್ರದಾಯದ ಮಠವೆಂದು, ಜಾತವೇದಮುನಿ, ಈಶಾನ್ಯಗುರು ಮುಂತಾದ ಹಿರಿಯ ತಲೆಮಾರಿನವರು ಕೈಲಾಸವಾಸಿಗಳಾದ ಬಳಿಕ ಅವರ ಉತ್ತರಾಧಿ ಕಾರಿಯಾದ ದೇವರಾಜ ಮುನಿಪನು ಬಸವ ಧರ್ಮವನ್ನು ಸ್ವೀಕರಿಸಿದನೆಂದೂ, ಆ ಕಾರಣದಿಂದಲೇ ಬಸವಣ್ಣನವರು ಪುನಃ ತಮ್ಮ ಕಡೆಯ ದಿನಗಳನ್ನು ಕಳೆಯಲು ಕೂಡಲ ಸಂಗಮಕ್ಕೆ ಬಂದರೆಂದು ಅಭಿಪ್ರಾಯಪಡುತ್ತಾರೆ.

"ಕೂಡಲ ಸಂಗಮದೇವನು ಈಶಾನ್ಯ ಗುರುವಲ್ಲದೆ ಬೇರಲ್ಲ...." ಎಂದು ಪುಟ 19ರಲ್ಲಿ ಲೇಖಕರು ಬರೆದಿದ್ದಾರೆ. ಇದೆಂತು ಸಾಧ್ಯ? ಕೂಡಲ ಸಂಗಮದೇವಾ, ಕೂಡಲ ಸಂಗಯ್ಯ ಎಂದಲ್ಲೆಲ್ಲ ಅವರು ನೇರವಾಗಿ ಪರಮಾತ್ಮನನ್ನುದ್ದೇಶಿಸಿ ಮಾತ ನಾಡುತ್ತಾರೆ. ಎಲ್ಲಿಯೂ ವ್ಯಕ್ತಿ ವಾಚಕವಾಗಿ ಬಳಸಿಲ್ಲ. ಹರಿಹರ ಮಹಾಕವಿಯು, ಬಸವಣ್ಣ ಕಪ್ಪಡಿಗೆ ಬಂದಾಗ ದೇವಾಲಯವನ್ನು ಥೋಂಕನೆ ಹೊಕ್ಕು ಪರಿತಪಿಸುವ ಒಂದು ಚಿತ್ರವನ್ನು ಚಿತ್ರಿಸಿದ್ದಾನೆ : ಹಂಬಲ ತುಂಬಿ ಅಳುತ್ತ ಕುಳಿತ ಬಾಲಕನನ್ನು ಸುತ್ತಾಡುತ್ತ ಬಂದ ಸ್ಥಾನಪತಿ ಈಶಾನ್ಯ ಗುರುಗಳು ಕಂಡು, "ಈತಂ ಕಾರಣಿಕ ನಾಗಲೇ ವೇಳ್ಕುಂ" ಎಂದು, "ಎಲೆ ಮಗನೆ ನೀನೆಲ್ಲಿಗೂ ಹೋಗಬೇಡ, ಯಾವುದಕ್ಕೂ

ಚಿಂತೆಬೇಡ" ಎಂದು ಆಶ್ವಾಸನೆ ನೀಡಿ ಅರ್ಚಕ ಕಾಯಕ ಕೊಡುತ್ತಾರೆ. ಇಲ್ಲಿ ಈಶಾನ್ಯಗುರು ವ್ಯಕ್ತಿ ವಾಚಕಪದ; ಸಂಗಮನಾಥ ಪರಮಾತ್ಮ ವಾಚಕಪದ. ಹೀಗಿದ್ದಾಗ ಎರಡೂ ಒಂದೇ ಎನ್ನುವ ನಿಡುಮಾಮಿಡಿ ಶ್ರೀಗಳ ವಾದ ತೀರಾ ಅಸಂಬದ್ಧ ಎನ್ನಿಸದಿರದು.

ಬಸವಣ್ಣನವರು 'ಓಂ ನಮಃಶಿವಾಯ' ಮಂತ್ರವನ್ನು ಶೈವ ಸಂಪ್ರದಾಯದಿಂದ ಬಳಸಿಕೊಂಡಿದ್ದಾರೆ. ಇದೊಂದನ್ನೇ ಅಲ್ಲ ಅಷ್ಟಾವರಣಗಳಲ್ಲಿ ಬರುವ ವಿಭೂತಿ, ರುದ್ರಾಕ್ಷಿಗಳನ್ನೂ ಆಯ್ಕೆಮಾಡಿಕೊಂಡಿದ್ದಾರೆ. ಯಾವ ಪ್ರವಾದಿಯೇ ಆಗಲಿ ಎಲ್ಲವನ್ನೂ ಸಂಪೂರ್ಣ ಹೊಸದು ಮಾಡನು. ಹಳೆಯದರಲ್ಲಿರುವ ಅಮೂಲ್ಯ ಅಂಶವನ್ನು ಸ್ವೀಕರಿಸಿ, ಅದಕ್ಕೆ ತನ್ನ ಕೊಡುಗೆ ಬೆರೆಸಿ ಹೊಸತು ಮಾಡುವನು. "ಶಿವ", "ಲಿಂಗ" ಎರಡೂ ಶಬ್ದಗಳನ್ನು ಬಳಸಿಕೊಂಡರೂ ಅರ್ಥವಿವರಣೆ ಬೇರೆಯೇ ಕೊಟ್ಟರು. 'ಓಂ ನಮಃಶಿವಾಯ' ಎಂಬ ಮಂತ್ರೋಚ್ಚಾರ ಅವರು ಮಾಡಿದಾಗ ಅಲ್ಲಿ ಅವರು ನಿರ್ದೇಶಿಸಿ ಹೇಳುವುದು ನಾಗೇಂದ್ರ ಹಾರವನ್ನು ಧರಿಸಿ, ತ್ರಿಪುರರನ್ನು ಸಂಹರಿಸಿ, ಕೈಲಾಸಪತಿಯಾಗಿದ್ದ ಶಿವನನ್ನು ಕುರಿತು ಅಲ್ಲ, ಅಮೂಲ್ಯನು ಅಪ್ರಮಾಣನು, ಆದಿ ಮಧ್ಯಾಂತವಿಲ್ಲದ ಪರಮಾತ್ಮ ತತ್ತ್ವವನ್ನು.

ಇನ್ನು ಕೆಲವು ಟೀಕೆಗಳಂತೂ ವೈಯಕ್ತಿಕ "ಅವರ ಅಧ್ಯಯನ ಅಧಿಕೃತವಲ್ಲ; ಅವರ ಸಂಸ್ಕಾರ ಆನು ಪೂರ್ವಿಯಲ್ಲ; ಅಷ್ಟಕ್ಕೂ ಆಳವಾದ ಅನುಭವವಿಲ್ಲ, ಆಗಲು ಅನುವಿಲ್ಲ." ಸಾಹಿತ್ಯದ ಮೋಡಿಯಲ್ಲಿ ಸ್ಪಷ್ಟತೆಯನ್ನು ಮುಚ್ಚಿಹಾಕುವ ಪ್ರವೃತ್ತಿಯ ಲೇಖಕರ ಮಾತು ತೀರ ವಿಲಕ್ಷಣ. ಅಧ್ಯಯನ ಅಧಿಕೃತವಾಗಿರುವುದೆಂದರೆ ಏನು? ಕರ್ನಾಟಕ ವಿಶ್ವವಿದ್ಯಾಲಯದವರು ನಮಗೆ ಕೊಟ್ಟ ತತ್ತ್ವಜ್ಞಾನದ ಎಂ. ಎ. ಪದವಿ ಅಧಿಕೃತವಲ್ಲವೆಂದೆ? ಅಥವಾ ವಚನಗಳನ್ನು ತಾವಷ್ಟೇ ವಿಮರ್ಶಿಸಬಲ್ಲರೆಂದೇ? ನಮ್ಮ ಸಂಸ್ಕಾರ ಆನುಪೂರ್ವಿಯಲ್ಲವಂತೆ. ಸಂಸ್ಕಾರ ಆನುಪೂರ್ವಿ ಎಂದರೇನು ಎಂಬುದನ್ನಿಷ್ಟು ವಿವರಿಸಿದ್ದರೆ ಚೆನ್ನಾಗಿತ್ತು. ಸಂಸ್ಕಾರ ಬರುವುದು ಸಾಧನೆಯಿಂದ. ಹರಿಜನರು ಯಾವ ಸಂಸ್ಕಾರಕ್ಕೂ ಅನರ್ಹರು ಎಂದು ದೂರವಿಟ್ಟಿದ್ದ ಹಿಂದು ಸಮಾಜದಲ್ಲಿ ಹರಿಜನನಾಗಿ ಹುಟ್ಟಿ, ಭಾರತದ ಸಂವಿಧಾನ ಕೊಟ್ಟ ಶ್ರೇಯಸ್ಸು ಅಂಬೇಡ್ಕರರದು. ಬೌದ್ಧಿಕ ಪಟುತ್ವ, ಆಧ್ಯಾತ್ಮಿಕ ಆಸಕ್ತಿ—ಈ ಎಲ್ಲವು ಪೂರ್ವಜನ್ಮದಿಂದ ಪುಣ್ಯದಿಂದ, ಹಿಂದಿನ ಮತ್ತು ಇಂದಿನ ಜನ್ಮದ ಸಾಧನೆಯಿಂದ ಬರುವವೇ ವಿನಾ ಯಾವುದಾದರೊಂದು ಜಾತಿಯಲ್ಲಿ ಹುಟ್ಟಿದ ಮಾತ್ರಕ್ಕಲ್ಲ. ನಾವು ಹೀಗೆಂದು ಉತ್ತರಿಸಿದಾಗ "ನಾನೆಲ್ಲಿ ಜಾತಿಯ ವಿಷಯ ಪ್ರಸ್ತಾಪಿಸಿದ್ದೇನೆ?" ಎಂದು ನಿಡುಮಾಮಿಡಿ ಶ್ರೀಗಳು ಜಾರಿಕೆಯ ಮಾತನಾಡಬಹುದು. ಅವರ ಬರವಣಿಗೆಯಲ್ಲಿ ಸ್ಪಷ್ಟತೆ, ನಿರ್ದಿಷ್ಟತೆ ಇರುವುದಿಲ್ಲವಾದ್ದರಿಂದ, ಬಹುಬೇಗ ಅದಕ್ಕೆ ಇನ್ನೊಂದು ಬೆಡಗಿನ ವಿವರಣೆ ನೀಡಿ ನುಣುಚಿಕೊಳ್ಳುವರು. ಸಂಸ್ಕಾರ ಆನುಪೂರ್ವಿಯಾಗಿರಬೇಕು ಎಂಬುದರ ವಿವರಣೆ ಕೊಟ್ಟಿದ್ದರೆ ನಾವು ಅದರ ಬಗ್ಗೆ ಚಿಂತನೆ ಮಾಡಬಹುದಿತ್ತು.

ಜಾತಿ ಪದದ ಅರ್ಥವನ್ನೇ ನಾವರಿಯೆವಂತೆ, (ಪುಟ 59) ನಾವು ಚೆನ್ನಾಗಿ ಅರಿತಿದ್ದೇವೆ. ನಾವು ಮಾತ್ರವೇಕೆ ಜಾತಿಯ ತಳಹದಿಯ ಮೇಲೆಯೇ ಸಮಾಜ ನಿರ್ಮಾಣ ಮಾಡಬೇಕು ಎಂದು ಇಂದಿಗೂ ಸಾಧಿಸುವವರೂ ಅರಿತಿದ್ದಾರೆ; ಜಾತಿಗಳ ಪಿಡುಗು ನಿರ್ಮೂಲನವಾಗಿ ಗುಣಪ್ರಧಾನ, ಜ್ಞಾನಪ್ರಧಾನ ವ್ಯವಸ್ಥೆ ಬರಬೇಕು ಎನ್ನುವವರೂ ಅರಿತಿದ್ದಾರೆ.

ಆದಿಯಲ್ಲಿ ನೀನೆ ಗುರುವಾದ ಕಾರಣ
ನಿನ್ನಿಂದ ಹುಟ್ಟಿತ್ತು ಲಿಂಗ
ನೀನೇ ಸರ್ವಾಚಾರ ಸಂಪನ್ನನಾಗಿ ಪೂರ್ವಾಚಾರಿ ನೀನಾದ ಕಾರಣ
ಗೊಹೇಶ್ವರ ಲಿಂಗದಲ್ಲಿ ಚಂದಯ್ಯಂಗೆ
ಲಿಂಗದ ನಿಜವ ತಿಳುಹಾ ಚನ್ನಬಸವಣ್ಣ!

ಎಂಬ ವಚನದಲ್ಲಿ ಅತ್ಯಂತ ಸ್ಪಷ್ಟವಾದ ಅರ್ಥವಿದ್ದಾಗ, ಲೇಖಕರು ಸುತ್ತಿಬಳಸಿ ಅರ್ಥಮಾಡಿದ್ದಾರೆ. ಆದಿಯಲ್ಲಿ ಎಂದರೆ ಪ್ರಥಮತಃ, ಬಸವ+ಆದಿ ಪ್ರಮಥ; ಈ ಶಬ್ದಗಳು ಒಂದು ಪರಂಪರೆಯ ಉಗಮವನ್ನು ಸಾರುತ್ತವೆ. Primordial Guru, ಪ್ರಥಮ ಗುರು ಬಸವಣ್ಣ. ಅಲ್ಲಿಂದ ಬಂದಿತು ಇಷ್ಟಲಿಂಗೋಪಾಸನೆ. ತಾನು ಕೊಟ್ಟ ತತ್ತ್ವಗಳನ್ನು ಸಂಪೂರ್ಣವಾಗಿ ಅಳವಡಿಸಿಕೊಂಡು ಸರ್ವಾಚಾರ ಸಂಪನ್ನನಾದ ಬಸವಣ್ಣ ಪೂರ್ವಾಚಾರಿ. ಇಲ್ಲಿ ನಿಡುಮಾಮಿಡಿ ಶ್ರೀಗಳು ಅರ್ಥಮಾಡಿರುವಂತೆ ಪೂರ್ವದ ಆಚಾರವುಳ್ಳವನೆಂದೇನೂ ಅಲ್ಲ; ಉಳಿದ ಶರಣರೂ ಹಾಗೇ ಅಳವಡಿಸಿಕೊಂಡಿದ್ದರು. ಎಲ್ಲರನ್ನೂ ಬಿಟ್ಟು ಬಸವಣ್ಣನಿಗೆ ಮಾತ್ರ ಪ್ರಭುದೇವರು ಪೂರ್ವಾಚಾರಿ ಎಂದು ಹೇಳಿದರು.

'ಅಯ್ಯಾ' ಎಂಬ ಪದವಿದ್ದಲ್ಲಿ, 'ಸದ್ಗುರು' ಎಂಬ ಶಬ್ದ ಕಂಡಲ್ಲಿ, ಕೂಡಲಸಂಗಮದೇವಾ ಎಂದಿದ್ದಲ್ಲಿ ಸಹ ಈಶಾನ್ಯ ಗುರುವನ್ನು ತೂರಿಸಲು ಯತ್ನಿಸಿದ್ದಾರೆ ಲೇಖಕರು. "ಈಶಾನ್ಯ ಗುರುವನ್ನು ಗುರುತಿಸದಿರುವ ಬಗ್ಗೆ ನಮ್ಮಲ್ಲಿ ಮಾತ್ಸರ್ಯವಿದೆ; ಬಸವಣ್ಣನವರಿಗೆ ಗುರುವಿಲ್ಲ ಎಂದು, ಬಸವಣ್ಣನವರು ಗುರು ಎಂದು, ಸಾಧಿಸುವುದರಲ್ಲಿ ನಮಗೆ ದುರುದ್ದೇಶವಿದೆ" ಎಂದು ಆರೋಪಿಸಿದ್ದಾರೆ.

ಬಸವಣ್ಣನವರ ಗುರುತ್ವವನ್ನು ಗುರುತಿಸುವುದರಲ್ಲಿ, ಅವರ ಮಾತನ್ನು ಸಂವಿಧಾನವೆಂದು ಪರಿಗಣಿಸಬೇಕೆಂಬುದರಲ್ಲಿ ನಮಗೆ ಯಾವ ದುರುದ್ದೇಶವೂ ಇಲ್ಲ. ರೈಲ್ವೆ

ಬಂಡಿ ನಡೆಯುವುದು ಎರಡು ಹಳಿಗಳ ಮೇಲೆ; ಸಮಾಜದ ಬಂಡಿ ನಡೆಯುವುದು ಧರ್ಮಗುರು ಮತ್ತು ಧರ್ಮಶಾಸ್ತ್ರ ಎಂಬ ಎರಡು ಹಳಿಗಳ ಮೇಲೆ. ಈ ಎರಡೂ ಹಳಿ ಬಿಟ್ಟರೆ ಲಿಂಗಾಯತ ಸಮಾಜ ಶಿಥಿಲವಾಗದೇ ಇರದು. ಬಸವಣ್ಣ ಬೇಕಾಗಿರುವುದು ಕೇವಲ ಲಿಂಗಾಯತ ಸಮಾಜಕ್ಕೆ ಮಾತ್ರವಲ್ಲ, ಸಮಸ್ತ ಹಿಂದೂ ಸಮಾಜಕ್ಕೆ, ಜಾತ್ಯತೀತ ಧೋರಣೆಯ ಭಾರತ ರಾಷ್ಟ್ರಕ್ಕೆ, ಸಮಗ್ರ ಮಾನವ ಕುಲಕ್ಕೆ! ನಮಗೆ —

1. ಜಾತಿ ಬೇಡ, ಧರ್ಮಬೇಕು.
2. ಮೂಢನಂಬಿಕೆ ಬೇಡ, ವೈಚಾರಿಕ ಧರ್ಮಬೇಕು.
3. ದೇವರ ಹೆಸರಿನಲ್ಲಿ ಶೋಷಣೆ–ಸುಲಿಗೆ ಬೇಡ. ಪ್ರತಿಯೊಂದು ಅಂಶವೂ ಸಾರ್ಥಕವಾಗಬೇಕು.
4. ಎಲ್ಲರೂ ದೇವ ಸೃಷ್ಟಿಯಲ್ಲಿ ಸಮಾನರು. ನೆಲ-ಜಲ-ಗಾಳಿ-ಬೆಳಕುಗಳನ್ನು ಸುಖಿಸಲು ಸಮಾನ ಅವಕಾಶವಿದ್ದಂತೆ ಧರ್ಮಾಚರಣೆಗೂ ಸಮಾನ ಅವಕಾಶಬೇಕು.
5. ಸ್ತ್ರೀ–ಪುರುಷರು ಸಮಾನರು. ಯಾರೂ ಮೇಲಲ್ಲ–ಕೀಳಲ್ಲ.
6. ಎಲ್ಲರೂ ದುಡಿದು ತಿನ್ನಬೇಕು. ದುಡಿಯದಿರಲು ಹಕ್ಕಿಲ್ಲ
7. ವ್ಯಕ್ತಿಯ ಅರ್ಹತೆಯನ್ನು ಜಾತಿಯಿಂದ ಅಳೆಯಬಾರದು. ಜಾತಿಯ ಆಧಾರದ ಮೇಲೆ, ಸೌಲಭ್ಯ ಕೊಡಬಾರದು, ಗೌರವಿಸಬಾರದು. ಯಾರಾದರೇನಂತೆ ಸಾಧನೆಯ ಸಿದ್ಧಿಯ ಮೇಲೆ ಅವರನ್ನು ಗೌರವಿಸಬೇಕು.

ಇಂಥ ತತ್ತ್ವಗಳನ್ನು ಬಸವಣ್ಣ ಹೇಳಿದ್ದಾನೆ. ಅದಕ್ಕಾಗಿ ಅವನು ಲಿಂಗಾಯತ ಸಮಾಜಕ್ಕೆ, ಹಿಂದೂ ಜನಾಂಗಕ್ಕೆ, ಭಾರತರಾಷ್ಟ್ರಕ್ಕೆ, ಸಮಸ್ತ ಮಾನವ ಕುಲಕ್ಕೆ ಬೇಕು. ಇದಿಷ್ಟೇ ನಮ್ಮ ಉದ್ದೇಶ.

ಇನ್ನು ಬಸವಣ್ಣನವರಿಗೆ ಅದ್ವತೆ-ಗುರುತ್ವ ಕೊಡಲು ಇಷ್ಟವಿಲ್ಲದ ಕೆಲವರ ಒಳತೋಟ ಏನಿರಬಹುದು ? ವಚನ ಸಾಹಿತ್ಯವು ಒಪ್ಪದ ಅನೇಕ ಆಚರಣೆಗಳಿಗೆ ಲೈಸನ್ಸ್ ಬೇಕಾಗಿದೆ. ಮೂರ್ತಿಪೂಜೆ, ಸ್ಥಾವರ ಲಿಂಗಾರ್ಚನೆ, ಪಂಚಾಮೃತಾಭಿಷೇಕ, ಅಡ್ಡಪಲ್ಲಕ್ಕಿ, ಆಡಂಬರ, ಬಹುದೇವೋಪಾಸನೆ, ನವಗ್ರಹಾರಾಧನೆ, ಪಂಚಾಂಗ ನಂಬುಗೆ, ವೇಳೆಯಲ್ಲಿ ಶುಭಾಶುಭಗಳ ಭಾವ - ಈ ಎಲ್ಲ ಆಚರಣೆಗೆ ಲೈಸೆನ್ಸ್ ಬೇಕಾದವರು ಬಸವಣ್ಣನ ವಾಣಿಯನ್ನು ಸಂವಿಧಾನಾತ್ಮಕವಾಗಿ ಎಂದೂ ಗಣಿಸರು.

ಅವರಿಗೆ ನಮ್ಮದೊಂದೇ ಮನವಿ. ಬಸವಣ್ಣನವರನ್ನು ಅವರು ಗುರುವಾಗಿ ಮನ್ನಿಸಬೇಕಾಗಿಲ್ಲ; ಆದರೆ ತಮ್ಮ ಭಕ್ತನನ್ನಾಗಿಯೂ ತೆಗೆದುಕೊಳ್ಳದಿರಲಿ. ಅವರನ್ನು, ಅವರ ವಚನ ಸಾಹಿತ್ಯವನ್ನು ಸಂಪೂರ್ಣ ಬದಿಗಿರಿಸಿ. ಬಸವಣ್ಣನು ಈ ಧರ್ಮದ ಇತಿಹಾಸದಲ್ಲಿ ಆಗಿಹೋಗಿದ್ದಾನೆಂಬುದನ್ನು ಮರೆತು, ಹೊಗಳುವುದು ತೆಗಳುವುದು ಎರಡನ್ನೂ ಬಿಟ್ಟು ಬಸವ ಪೂರ್ವದ ತಮ್ಮ ಧರ್ಮ ಯಾವುದಿತ್ತೋ ಅದನ್ನು ಆಚರಿಸಲಿ, ಅದರ ಮೇಲೆ ಗ್ರಂಥ ಬರೆಯಲಿ. ಅಕ್ಕಿಯ ಮೇಲೆ ಆಸೆ, ನೆಂಟರ ಮೇಲೆ ಪ್ರೀತಿ– ಈ ಹವ್ಯಾಸ ಬೇಡ. ಬಸವಣ್ಣನವರಿಗಿಂತಲೂ ಮೊದಲು ಈ ಧರ್ಮ ಇದ್ದಿದ್ದರೇ ಈ ಧರ್ಮದ ಸರ್ವ ತತ್ತ್ವಗಳನ್ನೂ ಸ್ವತಂತ್ರವಾಗಿ, ವಚನ ಸಾಹಿತ್ಯದ ಆಧಾರವಿಲ್ಲದೆಯೇ ಬರೆದು, ಆಚರಿಸಲಿ. ಬೇಡವೆನ್ನುವವರಾರು ?

ಈ ಕೆಲವರ ಅಭಿಪ್ರಾಯದಂತೆ ಮೊದಲೊಂದು ಧರ್ಮ ಸಾಹಿತ್ಯವಿದ್ದು ವಚನ ಸಾಹಿತ್ಯವು ಈ ಧರ್ಮದ ಪರಿಷ್ಕೃತ (Revised) ಪಠ್ಯ ಪುಸ್ತಕ ಎಂದು ನಂಬುವುದಾದರೆ ಈ ಸುಧಾರಿತ ಆವೃತ್ತಿಯನ್ನೇ ದೃಢವಾಗಿ ಆಚರಿಸಬೇಕಷ್ಟೇ ! ಸ್ಟೀವನ್‌ಸನ್ ಕೊಟ್ಟ ಉಗಿಬಂಡಿಗೂ ಇಂದಿನ ವಿದ್ಯುತ್ ಚಾಲಿತ ರೇಲ್ವೆಗಾಡಿಗಳಿಗೂ ತೀವ್ರ ಅಂತರ. ಸ್ಟೀವನ್‌ಸನ್‌ನ ಬಂಡಿಯನ್ನು ಡೆಟ್ರಾಯಿಟ್ಟಿನ ಹೆನ್ರಿಫೋರ್ಡ್ ಮ್ಯೂಸಿಯಮ್‌ನಲ್ಲಿ ಪ್ರದರ್ಶನಕ್ಕಿಟ್ಟು ಅತ್ಯಾಧುನಿಕ ರೇಲ್ವೆಗಾಡಿಗಳನ್ನು ಜನರು ಬಳಸಲಾರಂಭಿಸಿದ್ದಾರೆ. ಹಾಗೆಯೇ ನಾವು ಯಾವುದಾದರೊಂದು ಕಾಲದಲ್ಲಿ ಉಪಯುಕ್ತ ನಂಬಿಕೆಗಳಾಗಿದ್ದು ಇಂದು ಔಟ್‌ಡೇಟೆಡ್ ಆಗಿರುವುವನ್ನು ಮ್ಯೂಸಿಯಮ್‌ನಲ್ಲಿಟ್ಟು ಬಸವಣ್ಣನವರು, ದಯಾನಂದ ಸರಸ್ವತಿಗಳು ಮುಂತಾದ ಆಧುನಿಕ ಧರ್ಮಗುರುಗಳು ಕೊಟ್ಟಂತಹ ತತ್ತ್ವಗಳನ್ನು ಅಳವಡಿಸಿಕೊಂಡರಾಯಿತು. ಅದರಿಂದ ಸಮಾಜಕ್ಕೂ ಹಿತ ಮತ್ತು ಭಾವೈಕ್ಯತೆಯೂ ಸಾಧ್ಯ.

ಅದು ಬಿಟ್ಟು ವಿನಾ ಕಾರಣ ಬಸವಣ್ಣನವರನ್ನು ಮತಾಂತರ ಮಾಡಿ, ಅವರ ವಿಚಾರವಾದದ ತೀಕ್ಷ್ಣತೆಯನ್ನು ಕಡಿಮೆ ಮಾಡಿ ತಮ್ಮ ಆಚರಣೆಗಳಿಗೆ ಲೈಸೆನ್ಸ್ ಪಡೆಯುವ ಹವ್ಯಾಸಬೇಡ. ★

ಹೊಳೆಯನ್ನು ದಾಟುವ ತನಕ ಜನರು ಅಂಬಿಗನನ್ನು ಆಶ್ರಯಿಸುತ್ತಾರೆ. ದಾಟಿದ ಮೇಲೆ ಅವನಿಂದಲಾಗಲೀ, ದೋಣಿಯಿಂದಲಾಗಲೀ ಏನು ಪ್ರಯೋಜನ ?

— ಸುಭಾಷಿತ

ತೊರೆ ಇಳಿದ ಮೇಲೆ ಅಂಬಿಗಂಗೇನುಂಟು ?

— ಬಸವಣ್ಣನವರು

ಕಲ್ಯಾಣ ಕಿರಣ

ಮಾಸ ಪತ್ರಿಕೆ

ಸಂಸ್ಕೃತಿ, ಸಾಹಿತ್ಯ, ನೀತಿ, ಅಧ್ಯಾತ್ಮ ಮೌಲ್ಯಗಳ ಪ್ರಸಾರಕ್ಕೆ ಮೀಸಲಾದ ಪತ್ರಿಕೆ

ಪ್ರಧಾನ ಸಂಪಾದಕರು :

ಪೂಜ್ಯ ಶ್ರೀ

ಜಗದ್ಗುರು ಮಾತೆ ಮಹಾದೇವಿ.

* * *

ಪ್ರಕಾಶಕರು :

ಜಗನ್ಮಾತಾ ಅಕ್ಕಮಹಾದೇವಿ ಆಶ್ರಮದ ಪರವಾಗಿ ವಿಶ್ವಕಲ್ಯಾಣ ಮಿಷನ್ ಸಂಸ್ಥೆಯು ಪ್ರಕಾಶನ ಪಡಿಸುವುದು.

ಕೇಂದ್ರ ಕಾರ್ಯಾಲಯ :

ಕಲ್ಯಾಣ ಕಿರಣ ಮಾಸಪತ್ರಿಕೆ

ಬಸವ ಮಂಟಪ. ನಂ. ೨೪, ಎರಡನೇ ಬ್ಲಾಕು, ಕಾರ್ಡ್‌ರೋಡ್, ರಾಜಾಜಿನಗರ,

ಬೆಂಗಳೂರು-೫೬೦ ೦೧೦.

ದೂರವಾಣಿ : ೮೨೩೩೫.

ಚಂದಾ ವಿವರ :

ಬಿಡಿ ಸಂಚಿಕೆ :	ರೂ.	೧-೫೦
ವಾರ್ಷಿಕ :	ರೂ.	೧೬-೦೦
ದ್ವೈವಾರ್ಷಿಕ :	ರೂ.	೩೧-೦೦
ಆಜೀವ ಸದಸ್ಯತ್ವ :	ರೂ.	೧೫೧-೦೦
ಪೋಷಕರು :	ರೂ.	೫೦೧-೦೦
ಮಹಾಪೋಷಕರು :	ರೂ.	೧೦೦೧-೦೦

* ಪತ್ರಿಕೆಯು ಪ್ರತಿ ತಿಂಗಳ ದಿನಾಂಕ ಮೂರರಂದು ಪ್ರಕಟವಾಗುವುದು.

* ಲೇಖಕರು ಲೇಖನಗಳನ್ನು ೧೦ನೇ ದಿನಾಂಕದೊಳಗೆ ಕಳಿಸಬೇಕು.

* ಪತ್ರಿಕೆಯ ಉದ್ದೇಶವಾದ ಧಾರ್ಮಿಕ, ಸಾಂಸ್ಕೃತಿಕ ಎಲ್ಲಾ ಬಗೆಯ ತಾತ್ವಿಕ ವಿಚಾರಗಳ ಲೇಖನ, ಕಥೆ, ಕವನಗಳಿಗೆ ಸ್ವಾಗತವಿದೆ.

* ಲೇಖನಗಳನ್ನು ಕಾಗದದ ಒಂದು ಮಗ್ಗುಲಿಗೆ ಸ್ಫುಟವಾಗಿ ಬರೆದಿರಬೇಕು.

* ಲೇಖಕರು ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ತಿಳಿಸಬೇಕಲ್ಲದೆ, ಅನುವಾದ, ರೂಪಾಂತರ ಅಥವಾ ಸಾಧಾರ ಲೇಖನಗಳಾದರೆ ಅದನ್ನು ಸ್ಪಷ್ಟವಾಗಿ ತಿಳಿಸಿ, ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರನ್ನು ಕಾಣಿಸಬೇಕು.

* ಅಸ್ವೀಕೃತ ಲೇಖನ ಬೇಕಾಗಿದ್ದಲ್ಲಿ ಮರಳಿಸಲು ಬೇಕಾದ ಅಂಚೆ ವೆಚ್ಚಕ್ಕೆ ಅವಶ್ಯಕವಿರುವ ಸ್ಟಾಂಪುಗಳನ್ನೂ ಕಳಿಸಬೇಕು. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ.

* ಚಂದಾ ಹಣ ಕೊಡದೆ ಇದ್ದವರು ಪತ್ರಿಕೆಯು ತಲುಪಿದ ತಕ್ಷಣ ಕಳಿಸಬೇಕು.

* ಹೊಸ ಚಂದಾದಾರರು ೧೬-೦೦ (ಹದಿನಾರು ರೂಪಾಯಿ) ಎಂ. ಓ. ಮಾಡಬೇಕು. (ವಿ. ಪಿ. ಇಲ್ಲ.)

* ಚಂದಾದಾರರು ಪತ್ರ ವ್ಯವಹಾರಗಳಲ್ಲಿ ವಿಳಾಸದ ಮೊದಲಲ್ಲಿ ಬರೆದ ಚಂದಾ ಸಂಖ್ಯೆಯನ್ನು ನಮೂದಿಸಬೇಕು.

* ವಿಳಾಸ ಬದಲಾವಣೆಗಳನ್ನು ತಿಳಿಸಬೇಕು. ಚಂದಾದಾರರಾದ ತಿಂಗಳಿಂದ ಮರುವರ್ಷದ ಆ ತಿಂಗಳವರೆಗೆ ಪತ್ರಿಕೆಗಳನ್ನು ಕಳಿಸಲಾಗುವುದು.

ಜುಲೈ ತಿಂಗಳಲ್ಲಿ ವಿಶ್ವಕಲ್ಯಾಣ ಮಿಷನ್‌ಗೆ ಧನ ಸಹಾಯಗೈದ ಸಹೃದಯರು

ಶರಣ/ಶರಣೆಯರುಗಳಾದ,

೧.	ಬಿ. ಎಮ್. ಶಾಂತಮೂರ್ತಿ, ಮಲ್ಲೇಶ್ವರಮ್, ಬೆಂಗಳೂರು	೨೧೫೦-೦೦
೨.	ಕುಮಾರಿ ಪಾರ್ವತಿ ಕೆ. ಎಂ. ಕೊಟ್ರಯ್ಯ, ಹೊಸಪೇಟೆ	೨೦೦೧-೦೦
೩.	ಕುಮಾರಿ ತಾರಾದೇವಿ ಕೆ. ಎಂ. ಕೊಟ್ರಯ್ಯ, ಹೊಸಪೇಟೆ	೧೦೦೧-೦೦
೪.	ಕೆ. ಸಿದ್ಧರಾಮಯ್ಯ, ಚನ್ನಪಟ್ಟಣ	೫೦೧-೦೦
೫.	ಹೆಚ್. ರಂಗಪ್ಪ, ರಾಜಾಜಿನಗರ, ಬೆಂಗಳೂರು	೫೦೧-೦೦
೬.	ಆರ್. ಶ್ರೀನಿವಾಸಮೂರ್ತಿ, ವಿಜಯಪುರ	೫೦೧-೦೦
೭.	ಬಿ. ಎಸ್. ರಾಜೇಶ್ವರಮ್ಮ, ಬೆಂಗಳೂರು	೫೦೧-೦೦
೮.	ಬಿ. ಪುಟ್ಟಪ್ಪ, ಯಶವಂತಪುರ, ಬೆಂಗಳೂರು	೧೦೦೧-೦೦

ಶರಣ ಎನ್. ಚನ್ನಪ್ಪನವರ ಕೊಡುಗೆ

ವಿಜಯಪುರ ನಿವಾಸಿಗಳಾದ ಶರಣ ಎನ್. ಚನ್ನಪ್ಪನವರು "ಶ್ರೀ ಚನ್ನಪ್ಪ ಮತ್ತು ಸುಬ್ಬಮ್ಮ ದತ್ತಿ"ಗೆ ಈ ವರೆಗೆ 9502 (ಒಂಭತ್ತು ಸಾವಿರದ ಐದು ನೂರಾ ಎರಡು) ರೂಗಳನ್ನು ವಿಶ್ವಕಲ್ಯಾಣ ಮಿರ್ಷ ಸಂಸ್ಥೆಗೆ ನೀಡಿದ್ದು, ಇದೇ ಜುಲೈ ತಿಂಗಳಲ್ಲಿ ಮತ್ತೆ 1500/- (ಒಂದು ಸಾವಿರದ ಐದು ನೂರು) ರೂಗಳನ್ನು ಸಲ್ಲಿಸಿದ್ದಾರೆ. ವಿಶ್ವಕಲ್ಯಾಣ ಮಿರ್ಷ ಸಂಸ್ಥೆಯ ನಿರಂತರ ಪ್ರಗತಿ, ಕಾರ್ಯಸಾಧನೆ ಕಂಡು ಸ್ವಯಂ ಪ್ರೇರಣೆಯಿಂದ ದಾನ ಮಾಡುತ್ತಿರುವ ಶರಣ ಚನ್ನಪ್ಪನವರಿಗೆ ಮಂತ್ರಪುರುಷ ಬಸವಣ್ಣನವರು ಆಯುರಾರೋಗ್ಯಭಾಗ್ಯಗಳನ್ನು ದಯಪಾಲಿಸಲೆಂದು, ಲಿಂಗೈಕ್ಯ ಶರಣೆ ಸುಬ್ಬಮ್ಮನವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾರೈಸುತ್ತೇವೆ.

ಪೂಜ್ಯ ಶ್ರೀ ಸದ್ಗುರು ಲಿಂಗಾನಂದ ಸ್ವಾಮಿಗಳು

ಚೇರ್ಮನ್, ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು.

೧೫೧ ರೂ. ಸಲ್ಲಿಸಿದ ಕಲ್ಯಾಣ ಕಿರಣದ ಹೊಸ ಆಜೀವ ಸದಸ್ಯರು

ಶರಣರುಗಳಾದ,

1.	891	ಹೇಮಂತ ಶಂಕರ್ ದೀಕ್ಷಿತ್, ಬರೋಡ
2.	892	ಶಿವರಾಜ ಸಿದ್‌ಬಟ್ಟಿ, ಅವರಾದ
3.	893	ಗನ್ನಿನ ವೀರಪ್ಪ, ಸಿಂಧನೂರು
4.	894	ಕೆ. ಎಂ. ಕೊಟ್ರಯ್ಯ, ಹೊಸಪೇಟೆ
5.	895	ಡಿ. ಎಸ್. ಮುದ್ದಗಿರಿ, ದಾವಣಗೆರೆ
6.	896	ಬಿ. ಎಸ್. ರಾಜೇಶ್ವರಮ್ಮ, ಬೆಂಗಳೂರು

ಕಲ್ಯಾಣ ಕಿರಣ Regd. No. KRNB 312 ಆಗಸ್ಟ್ 1981

Licenced to post without pre-payment No. WPP-25



Correspond to :

KALYANA KIRANA–Basava Mantapa

2nd Block, Chord Road, Rajajinagar Bangalore-560 010

Phone : 82335